ಸಂಪುಟ: 14 Volume | ಸಂಚಿಕೆ: 61 Issue | ಪುಟಗಳು 08 Pages | ಮಂಗಳವಾರ 09 ಜೂನ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ನಮಗೆ ಕಾಣಿಸದು.

–ಶಿವರಾಮ ಕಾರಂತ



ಕೆ.ಆರ್.ಐ.ಡಿ.ಎಲ್ ಕಚೇರಿಯಲ್ಲಿಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಪ್ರಥಮ ಪರಿಚಯಾತ್ಮಕ ಸಭೆ ನಡೆಸಿದರು. ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿಗಳಾದ ಸಮೀರ್ ಶುಕ್ಲ, ರಂದೀಪ್ ಡಿ, ಪಂಚಾಯತ್ ರಾಜ್ ಆಯುಕ್ತರಾದ ಡಾ ಅರುಂಧತಿ, ಕೆ.ಆರ್.ಐ.ಡಿ.ಎಲ್. ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೌಡ ಮತ್ತಿತರರು ಪಾಲ್ಗೊಂಡಿದ್ದರು



ವಿಧಾನಸಭೆಯಲ್ಲಿ ಜೆಡಿಎಸ್ ನಾಯಕ ಸುರೇಶ್ ಬಾಬು, ಸಿ ಎನ್ ಬಾಲಕೃಷ್ಣ, ಎ ಮಂಜು, ಕರೆಮ್ಮನವರ್, ಶಾರದಾ ಪೂರ್ಯನಾಯಕ್, ಕೃಷ್ಣಪ್ಪ, ನೇಮಿರಾಜ್ ನಾಯಕ್, ವೆಂಕಟಶಿವಾರೆಡ್ಡಿ ಸೇರಿದಂತೆ ಜೆ ಡಿ ಎಸ್ ಶಾಸಕರು ಸಿಎಂ ಡಿ ಕೆ ಶಿವಕುಮಾರ್ ಅವರನ್ನು ವಿಧಾನಸೌಧದ ಅವರ ಕೊಠಡಿಯಲ್ಲಿ ಸೋಮವಾರ ಭೇಟಿ ಮಾಡಿ ಅಭಿನಂದಿಸಿದರು.



ಬೆಂಗಳೂರಿನಲ್ಲಿ ನಿನ್ನೆ ನಿಧನರಾದ ಎಐಸಿಸಿ ಕಾರ್ಯದರ್ಶಿ, ರಾಜ್ಯ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರಿಗೆ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಮಾಜಿ ಸಚಿವ ದೇಶಪಾಂಡೆ ಹಾಜರಿದ್ದರು.

## ಸೂರಜ್ ಹೆಗ್ಡೆ ನಿಧನ: ಖಂಡ್ರೆ ಸಂತಾಪ

**ಬೆಂಗಳೂರು:** ಕಾಂಗ್ರೆಸ್ ಮುಖಂಡ ಸೂರಜ್ ಹೆಗಡೆ ಅವರ ನಿಧನಕ್ಕೆ ಸಚಿವ ಈಶ್ವರ ಖಂಡ್ರೆ ಸಂತಾಪ ಸೂಚಿಸಿದ್ದಾರೆ.ಆತ್ಮೀಯ ಸ್ನೇಹಿತರು, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಹಾಗೂ ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗ್ಡೆ ಅವರ ಹಠಾತ್ ನಿಧನದ ಸುದ್ದಿ ತಿಳಿದು ದುಃಖವಾಗಿದೆ. ಸರಳ ವ್ಯಕ್ತಿತ್ವ, ದಕ್ಷ ನಾಯಕತ್ವ ಮತ್ತು ಸಂಘಟನಾ ಚತುರರಾಗಿದ್ದ ಅವರು ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅವರ ನಿಧನದಿಂದ ಕಾಂಗ್ರೆಸ್ ಪಕ್ಷಕ್ಕೆ ಅತಿ ದೊಡ್ಡ ನಷ್ಟವಾಗಿದೆ ಎಂದು ಈಶ್ವರ ಖಂಡ್ರೆ ಸಂತಾಪ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಖಾಲಿ ಹುದ್ದೆಗಳ ಪೈಕಿ 4000 ಹುದ್ದೆ ಭರ್ತಿಗೆ ಕ್ರಮ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 25540 ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ ಖಾಲಿ ಇರುವ 8770 ಹುದ್ದೆ ಪೈಕಿ 4 ಸಾವಿರ ಹುದ್ದೆಯ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿಂದು ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ನಡೆದ ಪರಿಚಯಾತ್ಮಕ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎ ವರ್ಗದ 268, ಬಿ ವರ್ಗದ 1079, ಸಿ ವರ್ಗದ 5294, ಡಿ ವರ್ಗದ 2129 ಹುದ್ದೆಗಳು ಖಾಲಿ ಇದ್ದು, ಈ ಪೈಕಿ ಎಲ್ಲ ವರ್ಗದ ಹುದ್ದೆಗಳ ಪೈಕಿ 4 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಈ ಎಲ್ಲ ಹುದ್ದೆಗಳನ್ನು ಪಾರದರ್ಶಕವಾಗಿ ಭರ್ತಿ ಮಾಡಲು ಸೂಚಿಸಲಾಗಿದೆ ಎಂದು ಹೇಳಿದರು.

**ಕಲ್ಯಾಣ ಕರ್ನಾಟಕದ ಎಲ್ಲ ಹುದ್ದೆಗಳ ಭರ್ತಿಗೆ ಸೂಚನೆ:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳ ಭರ್ತಿಗೂ ಕ್ರಮ ವಹಿಸುವಂತೆ ಸೂಚನೆ ನೀಡಿರುವುದಾಗಿ ಈಶ್ವರ ಖಂಡ್ರೆ ತಿಳಿಸಿದರು. ಈಗಾಗಲೇ ಜೂನ್ 3ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ 56 ಸಾವಿರ ಹುದ್ದೆಗಳ ನೇಮಕಾತಿಗೆ ಸಮ್ಮತಿ ಸೂಚಿಸಿದ್ದು, 1400 ಹುದ್ದೆಗಳ ಭರ್ತಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅನುಮತಿ ನೀಡಲಾಗಿದೆ. ಈ ಹುದ್ದೆಗಳ ಭರ್ತಿಗೆ ಶೀಘ್ರವೇ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

## ಮಳೆಗಾಗಿ ಪ್ರಾರ್ಥಿಸಿ ವಿಶೇಷ ಪೂಜೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ತಾಲ್ಲೂಕಿನ ಭದ್ರೇಶ್ವರ ಮಠದಲ್ಲಿ ಉತ್ತಮ ಮಳೆಯಾಗಲೆಂದು ಭಕ್ತರು ಹಾಗೂ ಗ್ರಾಮಸ್ಥರು ವಿಶೇಷ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಠದ ಪೂಜಾರಿಗಳು ಶಿವಕುಮಾರ್ ಸ್ವಾಮಿ ಅವರು ವೇದಮಂತ್ರಗಳೊಂದಿಗೆ ವಿಶೇಷ ಪೂಜೆಯನ್ನು ನೆರವೇರಿಸಿ, ರೈತ ಸಮುದಾಯದ ಒಳಿತಿಗಾಗಿ ಹಾಗೂ ಸಮೃದ್ಧ ಮಳೆಯಾಗಲೆಂದು ದೇವರಲ್ಲಿ ಪ್ರಾರ್ಥಿಸಿದರು.

ಗ್ರಾಮದ ಹಿರಿಯರು, ರೈತರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉತ್ತಮ ಮಳೆಯಾದರೆ ಕೃಷಿ ಚಟುವಟಿಕೆಗಳು ಸುಗಮವಾಗಿ ನಡೆಯಲಿದ್ದು, ರೈತರ ಬದುಕು ಸಮೃದ್ಧಿಯಾಗಲಿದೆ ಎಂದು ಆಶಿಸಿದರು.



ಗ್ರಾಮದಲ್ಲಿ ಉತ್ತಮ ಮಳೆಯಾಗಿ ಬೆಳೆಗಳು ಸಮೃದ್ಧಿಯಾಗಿ ಬೆಳೆಯಲಿ ಹಾಗೂ ಜನರ ಜೀವನ ಸುಖ–ಸಮೃದ್ಧಿಯಿಂದ ಕೂಡಿರಲಿ ಎಂದು ಎಲ್ಲರೂ ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ಗುರುನಾಥ,, ಕನಶೆಟ್ಟಿ ಸಂಜುಕುಮಾರ ಕನಶೆಟ್ಟಿ ಗುರುಸ್ವಾಮಿ ಮಹಿಳೆಯರು ಮಕ್ಕಳಿದ್ದರೂ ಇದ್ದರು.

# ಕೈ ದಳಪತಿ ನಡುವೆ ಫೈಟ್

## ರಾಜ್ಯಸಭೆ–ವಿಧಾನಪರಿಷತ್‌ಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ನ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯಸಭೆ–ವಿಧಾನಪರಿಷತ್ ಚುನಾವಣೆಗೆ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಬಿಜೆಪಿಯಿಂದ ರಾಜ್ಯಸಭೆಗೆ ಎಂ.ನಾಗರಾಜ್, ವಿಧಾನಪರಿಷತ್‌ಗೆ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ನಾಮಪತ್ರ ಸಲ್ಲಿಸಿದ್ದಾರೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿಯಾಗಿ ವಿನಯ್ ಕಾರ್ತಿಕ್ ಮತ್ತು ಕೊನೆ ಕ್ಷಣದಲ್ಲಿ ಜೆಡಿಎಸ್‌ನಿಂದ ಗೋವಿಂದರಾಜ್ ಉಮೇದುವಾರಿಕೆ ಮಾಡುವುದರೊಂದಿಗೆ ಚುನಾವಣಾ ಕಣ ರಂಗೇರಿದೆ.

**ಗಣ್ಯಾತಿ ಗಣ್ಯರ ಉಪಸ್ಥಿತಿ:** ಬಿಜೆಪಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಜಗದೀಶ್ ಶೆಟ್ಟರ್, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯ, ವಿಧಾನಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರು, ಮಾಜಿ ಶಾಸಕರು ಸೇರಿದಂತೆ ಮತ್ತಿತರ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

**ಕಾಂಗ್ರೆಸ್ ಜೆಡಿಎಸ್ ಧುರೀಣರು:** ಕಾಂಗ್ರೆಸ್ 5ನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಿನಯ್ ಕಾರ್ತಿಕ್ ನಾಮಪತ್ರ ಸಲ್ಲಿಸುವ ವೇಳೆ ಸಿಎಂ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಸಚಿವರು, ಶಾಸಕರು, ಪಕ್ಷದ ಮುಖಂಡರು ಹಾಜರಿದ್ದರು. ಜೆಡಿಎಸ್ನ ಗೋವಿಂದರಾಜ್ ನಾಮಪತ್ರ ಸಲ್ಲಿಕೆ ಮಾಡುವ ವೇಳೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇತರರಿದ್ದರು.









### ಅಭ್ಯರ್ಥಿ ಗೆಲುವೇ ಸಸ್ಪೆನ್ಸ್

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಲು ಒಬ್ಬ ಅಭ್ಯರ್ಥಿ 28 ಮತ ಪಡೆಯಬೇಕು. ಕಾಂಗ್ರೆಸ್, ಬಿಜೆಪಿಯಿಂದ ಇಬ್ಬರು ಅಭ್ಯರ್ಥಿಗಳು ನಿರಾಯಾ ಸವಾಗಿ ಗೆಲ್ಲುತ್ತಾರೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ವಿನಯ್‌ಕಾರ್ತಿಕ್, ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಗೋವಿಂದರಾಜ್ ನಡುವೆ ಪೈಪೋಟಿ ಏರ್ಪಡಲಿದೆ. ಯಾರು ಗೆಲ್ಲುತ್ತಾರೆ ಅನ್ನೋದು ಸಸ್ಪೆನ್ಸ್.

### ಪರಿಶೀಲನೆ, ಚುನಾವಣೆ..?

ಎಲ್ಲಾ ಅಭ್ಯರ್ಥಿಗಳು ಚುನಾವಣಾ ಅಕಾರಿಯೂ ಆಗಿರುವ ವಿಧಾನಸಭಾ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದ್ದಾರೆ. ಇಂದು ನಾಮಪತ್ರ ಪರಿಶೀಲನೆ, ನಾಮಪತ್ರ ಹಿಂಪಡೆಯಲು ಗುರುವಾರ ಕೊನೆಯ ದಿನವಾಗಿದೆ.

### ಏನಾಗಲಿದೆ ದೋಸ್ತಿ..?

ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಬಗ್ಗೆ ಆಂತರಿಕ ಕಲಹ ಇದ್ದೇ ಇದೆ. ದೇವೇಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡದಿರುವು, ಕುಮಾರಸ್ವಾಮಿ ಅವರು ರಾಜ್ಯ ಬಿಜೆಪಿ ನಾಯಕರ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳದೆ ರಾಷ್ಟ್ರ ನಾಯಕರ ಜೊತೆ ಮಾತ್ರ ಚರ್ಚಿಸುತ್ತಾರೆ ಅನ್ನೋ ದೂರಿದೆ.

### ಬಿಜೆಪಿಯ ಅಭ್ಯರ್ಥಿ ಅವಿರೋಧ, ಜೆಡಿಎಸ್ ಎಲೆಕ್ಷನ್

ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ, ಮನ್ಸೂರ್ ಅಲಿಖಾನ್, ಪವನ್‌ಖೇರಾ, ಬಿಜೆಪಿಯ ಪ್ರೊ.ಎನ್.ನಾಗರಾಜ್ ಬಹುತೇಕ ಅವಿರೋಧ ಆಯ್ಕೆ ಖಚಿತವಾಗಿದೆ. ವಿಧಾನಪರಿಷತ್‌ಗೆ ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಕಣಕ್ಕಿಳಿದಿರುವುದು, ಜೆಡಿಎಸ್ ಕೂಡ ತನ್ನ ಅಭ್ಯರ್ಥಿಯ ಉಮೇದುವಾರಿಕೆ ಮಾಡಿರುವುದರಿಂದ ಚುನಾವಣೆ ನಡೆಯುವುದು ಅನಿವಾರ್ಯವಾಗಿದೆ.

## ಅಕ್ರಮ ಅಕ್ಕಿ ಮಾರಾಟಕ್ಕೆ ಇಲ್ಲ ಲಂಗು ಲಗಾಮು..!

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ರಾಜ್ಯಸರಕಾರದಮಹತ್ವಾಕಾಂಕ್ಷಿಯೋಜನೆಗಳಲ್ಲೊಂದಾದ ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ನೀಡುವ ಅಕ್ಕಿ ಅಕ್ರಮವಾಗಿ ಮಾರಾಟವಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ತಾಲೂಕಿನ ಹಲವೆಡೆ ಪಡಿತರ ಅಕ್ಕಿ ದುರ್ಬಳಕೆ ಆಗುತ್ತಿರುವ ಬಗ್ಗೆ ಸಾಕಷ್ಟು ಬಾರಿ ದೂರು ಕೇಳಿ ಬಂದಿವೆ. ಇತ್ತೀಚೆಗೆ ಪಟ್ಟಣದ ನೆಹರು ಚೌಕ್ ಅಂಗಡಿಯೊಂದರಲ್ಲಿ ಅಕ್ರಮವಾಗಿ ಶೇಖರಿಸಿಟ್ಟಿದ್ದ 25 ಕ್ವಿಂಟಾಲ್ ಅಂದಾಜು 85 ಸಾವಿರ ರೂಪಾಯಿ ಮೌಲ್ಯದ ಪಡಿತರ ಅಕ್ಕಿ, ಆಹಾರ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡ ಪ್ರಕರಣವೂ ವರದಿ ಆಗಿತ್ತು. ವಿಶೇಷ ತಂಡವನ್ನು ರಚಿಸಿ ಪಡಿತರ ಅಕ್ಕಿ ಎಲ್ಲೂ ದುರ್ಬಳಕೆ ಆಗದಂತೆ ಎಚ್ಚರವಹಿಸಬೇಕು. ಹಲವೆಡೆ ಈ ಅಕ್ಕಿಯನ್ನು ಬಳಸದೇ ಮಾರಾಟ ಮಾಡುವ ಕೆಲಸವನ್ನು ಮಾಡುತ್ತಿರುವುದು ವರದಿಯಾಗುತ್ತಲೇ ಇದೆ.




### ಗ್ರಾಮೀಣ ಪ್ರದೇಶದಲ್ಲಿ ದಂಧೆ..!

ಚಿಟಗುಪ್ಪ, ನಿರ್ಣಾ, ಉಡಬಾಳ, ಬನ್ನಳ್ಳಿ, ಮುದನ್ನಾಳ, ಕೋಡಂಬಲ್, ಮನ್ನಾಖೇಳ್ಳಿ, ತಾಳಮಡಗಿ, ಬೇಮಳಖೇಡಾ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮನೆಗಳ ಬಳಿ ಹೋಗಿ ರೇಷನ್ ಅಕ್ಕಿ ಖರೀದಿಸುವುದಾಗಿ ಹೇಳಿ ಗ್ರಾಮೀಣ ಜನರಿಂದ ಕಡಿಮೆ ದರಕ್ಕೆ ಅಕ್ಕಿ ಖರೀದಿ ಮಾಡಿ, ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ ಎನ್ನುತ್ತಾರೆ. ಇಂಥವರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಬಡ ಜನರು ಒತ್ತಾಯಿಸುತ್ತಿದ್ದಾರೆ.

# ಆಂಧ್ರ ಪ್ರೀಮಿಯರ್ ಲೀಗ್‌ನಲ್ಲಿ ಅಭಿಷೇಕ್ ರೆಡ್ಡಿ ಮಿಂಚು..!

• ಮಲ್ಲಮ್ಮ ನುಡಿ ವಾರ್ತೆ ಬಿದರ್

ಕಲ್ಯಾಣ ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಹೆಮ್ಮೆಯ ಕ್ರಿಕೆಟ್ ಆಟಗಾರ ಅಭಿಷೇಕ್ ರೆಡ್ಡಿ ಜೂನ್ 9 ರಂದು ಪ್ರಾರಂಭವಾಗುವ ಆಂಧ್ರ ಪ್ರೀಮಿಯರ್ ಲೀಗ್ 2026 ರಲ್ಲಿ ಭಾಗವಹಿಸಲು ಭಾರತಕ್ಕೆ ಮರಳಿದ್ದಾರೆ. ಎಲ್ಲಾ ಪಂದ್ಯಗಳನ್ನು ಜಿಯೋ ಹಾಟ್‌ಸ್ಟಾರ್ ಮತ್ತು ಜಿಯೋ ಹಾಟ್‌ಸ್ಟಾರ್ ತೆಲುಗು ಚಾನೆಲ್‌ಗಳಲ್ಲಿ ನೇರ ಪ್ರಸಾರ ಮಾಡಲಾಗುತ್ತಿದೆ. ವೇಳಾಪಟ್ಟಿಯ ಪ್ರಕಾರ ಅವರು ಕಾಕಿನಾಡ ಕಿಂಗ್ಸ್ ಪರ ಆಡಲಿದ್ದಾರೆ. ಅವರು ಮೇ ನಿಂದ ಆಗಸ್ಟ್ 30 ರವರೆಗೆ ಇಂಗ್ಲೆಂಡ್ ನಲ್ಲಿ ಆಡಲು ಒಪ್ಪಂದದಲ್ಲಿದ್ದರು. ಅವರು ಅಲ್ಲಿ ಆಡಿದ 7 ಏಕದಿನ ಪಂದ್ಯಗಳಲ್ಲಿ, 152 ಸರಾಸರಿಯಲ್ಲಿ 610 ರನ್ ಗಳಿಸಿದ್ದರು. ಅವರ ಸ್ಕೋರ್‌ಗಳ ಅನುಕ್ರಮವು 140 ನಾಟೌಟ್, 103 ನಾಟೌಟ್, 154 ನಾಟೌಟ್, 83, 0, 41 ಮತ್ತು 89. ಆಗಿದೆ.






### ಆಟದ ಬಳಿಕ ಮತ್ತೆ ಇಂಗ್ಲಂಡ್‌ಗೆ

ಅವರ ಕ್ಲಬ್ ಅವರನ್ನು ಎಪಿಎಲ್‌ಗಾಗಿ ಆಡಲು ಸಾಕಷ್ಟು ಸಹಾನುಭೂತಿ ತೋರಿಸಿದೆ. ಆನಂತರ ಅವರು ಒಪ್ಪಂದದ ಪ್ರಕಾರ ತಮ್ಮ ಬದ್ಧತೆಯನ್ನು ಪೂರ್ಣಗೊಳಿಸಲು ಇಂಗ್ಲೆಂಡ್‌ಗೆ ಹಿಂತಿರುಗುತ್ತಾರೆ.

### ರೆಡ್ಡಿಗೆ ಆಂಧ್ರ, ಕರ್ನಾಟಕದಲ್ಲಿ ಅಪಾರ ಅಭಿಮಾನಿಗಳು..!

ಕರ್ನಾಟಕಕ್ಕಾಗಿ ರಣಜಿ ಮತ್ತು ಇರಾನಿ ಟ್ರೋಫಿಯನ್ನು ಗೆದ್ದಿರುವ ಅವರು, ಕಳೆದ ಕೆಲವು ಋತುಗಳಲ್ಲಿ ಆಂಧ್ರ ಪರ ಆಡುತ್ತಿದ್ದಾರೆ. ಅವರನ್ನು ಎರಡು ಬಾರಿ ನಾಕ್ ಔಟ್‌ಗೆ ಕರೆದೊಯ್ಯುತ್ತಾರೆ. ಅವರಿಗೆ ಆಂಧ್ರಪ್ರದೇಶ ಮತ್ತು ಕರ್ನಾಟಕ ಎರಡರಲ್ಲೂ ವ್ಯಾಪಕ ಅಭಿಮಾನಿಗಳಿದ್ದಾರೆ.

### ಅಭಿಷೇಕ್ ಉತ್ತಮ ಫಾರ್ಮ್

ಅಭಿಷೇಕ್ ರೆಡ್ಡಿ ಅವರು ಈ ತಿಂಗಳು ಆಡಲಿದ್ದು, ಅವರ ಆಟವನ್ನು ನೇರಪ್ರಸಾರ ನೋಡಲು ಅವರ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಅವರ ಅಭಿಮಾನಿ ಬಳಗವು ಅವರು ಎಪಿಎಲ್‌ನಲ್ಲಿ ತಮ್ಮ ಉತ್ತಮ ಫಾರ್ಮ್ ಅನ್ನು ಪ್ರದರ್ಶಿಸುತ್ತಾರೆ. 2027 ರಲ್ಲಿ ಐಪಿಎಲ್ ಬಾಗಿಲು ತಟ್ಟುತ್ತಾರೆ ಎಂದು ಆಶಿಸುತ್ತಿದ್ದಾರೆ.



## ಚದುರಂಗದ ಆಟದಲ್ಲಿ ಯಾವ ಕಾಯಿ ಮುನ್ನಡೆಸುತ್ತೇವೆ ಎಂದು ಯಾರೂ ಹೇಳುವುದಿಲ್ಲ: ಡಿ.ಕೆ. ಶಿವಕುಮಾರ್, ಸಿಎಂ

## ಸರ್ಕಾರದ ಜೊತೆಗೆ ಸಾರ್ವಜನಿಕರ ಸಹಕಾರವೂ ಅಗತ್ಯ

ಪ್ಲಾಸ್ಟಿಕ್ ಮುಕ್ತ ರಾಜ್ಯವಾಗಲಿ ಎಂಬುದು ಇಂದಿನ ಅಗತ್ಯ ಮಾತ್ರವಲ್ಲ, ಮುಂದಿನ ಪೀಳಿಗೆಗಳ ಬದುಕಿಗಾಗಿ ಅವಶ್ಯಕವಾದ ಗುರಿಯಾಗಿದೆ. ಪ್ಲಾಸ್ಟಿಕ್ ಬಳಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದು ಮಣ್ಣು, ನೀರು ಮತ್ತು ಗಾಳಿಯನ್ನೆಲ್ಲಾ ಮಾಲಿನ್ಯಗೊಳಿಸುತ್ತಿದೆ. ವಿಶೇಷವಾಗಿ ಏಕಬಾರಿಗೆ ಬಳಸುವ ಪ್ಲಾಸ್ಟಿಕ್ (single-use plastic) ಪರಿಸರಕ್ಕೆ ಭಾರೀ ಹಾನಿ ಮಾಡುತ್ತಿದೆ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಪ್ಲಾಸ್ಟಿಕ್ ಸರಿಯಾಗಿ ವಿಲೇವಾರಿ ಆಗದೆ ನದಿಗಳು, ಕಾಲುವೆಗಳು ಮತ್ತು ರಸ್ತೆ ಬದಿಗಳಲ್ಲಿ ಸೇರುವುದರಿಂದ ನೀರಿನ ಹರಿವು ಅಡಚಣೆಗೊಳ್ಳುತ್ತದೆ ಹಾಗೂ ಜಲಚರ ಜೀವಿಗಳಿಗೆ ಅಪಾಯ ಉಂಟಾಗುತ್ತದೆ. ಜಾನುವಾರುಗಳು ಪ್ಲಾಸ್ಟಿಕ್ ತಿನ್ನುವುದರಿಂದ ಸಾವಿನ ಘಟನೆಗಳೂ ಹೆಚ್ಚುತ್ತಿವೆ.

ಈ ಸಮಸ್ಯೆಗೆ ಪರಿಹಾರವಾಗಿ ಸರ್ಕಾರದ ಜೊತೆಗೆ ಸಾರ್ವಜನಿಕರ ಸಹಕಾರವೂ ಅಗತ್ಯ. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ, ಬಟ್ಟೆ ಚೀಲಗಳು, ಕಾಗದದ ಚೀಲಗಳು ಹಾಗೂ ಮರುಬಳಕೆ ಸಾಧ್ಯವಾದ ವಸ್ತುಗಳನ್ನು ಬಳಸಬೇಕು. ಅಂಗಡಿಗಳು ಮತ್ತು ವ್ಯಾಪಾರಿಗಳು ಕೂಡ ಪ್ಲಾಸ್ಟಿಕ್ ಬದಲಿಗೆ ಪರಿಸರ ಸ್ನೇಹಿ ಪರ್ಯಾಯಗಳನ್ನು ಬಳಸಲು ಮುಂದಾಗಬೇಕು.

ಶಾಲೆಗಳು, ಕಾಲೇಜುಗಳು ಮತ್ತು ಗ್ರಾಮ ಪಂಚಾಯಿತಿಗಳ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಜನರಲ್ಲಿ ಪರಿಸರ ಜಾಗೃತಿ ಹೆಚ್ಚಬಹುದು. ಕಠಿಣ ಕಾನೂನುಗಳ ಜೊತೆಗೆ ಜನರ ಮನೋಭಾವ ಬದಲಾವಣೆ ಕೂಡ ಮುಖ್ಯ.

ಪ್ಲಾಸ್ಟಿಕ್ ಮುಕ್ತ ರಾಜ್ಯ ನಿರ್ಮಾಣವಾದರೆ ಮಾತ್ರ ಸ್ವಚ್ಛ, ಆರೋಗ್ಯಕರ ಮತ್ತು ಸುಸ್ಥಿರ ಪರಿಸರವನ್ನು ಮುಂದಿನ ಪೀಳಿಗೆಗೆ ನೀಡಲು ಸಾಧ್ಯ.

## ಆರಂಭಿಕ ಪತ್ತೆ ಮತ್ತು ನಿಖರ ಚಿಕಿತ್ಸೆಯಿಂದ ಬ್ರೈನ್ ಟ್ಯೂಮರ್ ನಿವಾರಣೆ ಸಾಧ್ಯ



**ಬೀದರ್:** ಆರಂಭಿಕ ರೋಗದ ಪತ್ತೆ ಹಾಗೂ ಅದಕ್ಕೆ ತುರ್ತು ಚಿಕಿತ್ಸೆ ನೀಡುವುದರಿಂದ ಮೆದುಳಿನ ಗಡ್ಡೆ ನೀವಾರಣೆ ಮಾಡುವ ಮುಖೇನ ರೋಗಿಯ ಜೀವ ಉಳಿಸಬಹುದಾಗಿದೆ ಎಂದು ಹೈದ್ರಾಬಾದ್ ಹೈಟೆಕ್ ಸೀಟಿ ಏರಿಯಾದ ಯಶೋದಾ ಆಸ್ಪತ್ರೆಯ ಕ್ಯಾನ್ಸರ್ ರೋಗ ತಜ್ಞರಾದ ಡಾ.ಭರತಕುಮಾರ ತಿಳಿಸಿದರು.

ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಸೋಮವಾರ ಇಡೀ ವಿಶ್ವಾದ್ಯಂತ ಆಚರಿಸಲಾದ ವಿಶ್ವ ಮೆದುಳು ಗಡ್ಡೆ ದಿನಾಚರಣೆ ಪ್ರಯುಕ್ತ ಮೆದುಳಿನ ಗಡ್ಡೆಯ ಲಕ್ಷಣಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಮೆದುಳಿನ ಗಡ್ಡೆಗಳು ಯಾವುದೇ ವಯಸ್ಸಿನವರಲ್ಲಿ ಕಾಣಿಸಬಹುದಾಗಿದ್ದು, ಆರಂಭಿಕ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದರಿಂದ ಚಿಕಿತ್ಸೆಯ ಯಶಸ್ಸು ಹಾಗೂ ಜೀವನದ ಗುಣಮಟ್ಟವನ್ನು ಗಮನಾರ್ಹವಾಗಿ ಹೆಚ್ಚಿಸಬಹುದು ಎಂದು ತಿಳಿಸಿದರು.

ನಿರಂತರ ತಲೆನೋವು, ಆಕಸ್ಮಿಕ ಆಘಾತಗಳು (ಸೀಜರ್ಸ್), ಕಾರಣವಿಲ್ಲದ ದೌರ್ಬಲ್ಯ, ದೃಷ್ಟಿ ಸಮಸ್ಯೆಗಳು, ಸಮತೋಲನ ಕಳೆದುಕೊಳ್ಳುವುದು, ನೆನಪಿನ ಶಕ್ತಿ ಕುಂಠಿತಗೊಳ್ಳುವುದು ಹಾಗೂ ವ್ಯಕ್ತಿತ್ವದಲ್ಲಿ ಬದಲಾವಣೆಗಳು ಮೆದುಳಿನ ಗಡ್ಡೆಯ ಪ್ರಮುಖ ಲಕ್ಷಣಗಳಾಗಿವೆ. ಇಂತಹ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳುವುದು ಅಗತ್ಯ ಎಂದು ಸಲಹೆ ನೀಡಿದರು.

ಕ್ಯಾನ್ಸರ್ ಕ್ಷೇತ್ರದಲ್ಲಿ ಆಗಿರುವ ತಾಂತ್ರಿಕ ಪ್ರಗತಿಯಿಂದ ಮೆದುಳಿನ ಗಡ್ಡೆಗಳ ಚಿಕಿತ್ಸೆಯಲ್ಲಿ ಮಹತ್ತರ ಬದಲಾವಣೆ ಕಂಡು ಬಂದಿದೆ. ಪ್ರಸ್ತುತ ಶಸ್ತ್ರ ಚಿಕಿತ್ಸೆ, ನಿಖರ ಕಿರಣ ಚಿಕಿತ್ಸೆ (ರೇಡಿಯೇಶನ್ ಥೆರಪಿ), ಕೀಮೋಥೆರಪಿ, ಟಾರ್ಗೆಟೆಡ್ ಥೆರಪಿಗಳು ಹಾಗೂ ಇಮ್ಯುನೋ ಥೆರಪಿ ಸೇರಿದಂತೆ ರೋಗಿಯ ಅಗತ್ಯಕ್ಕೆ ಅನುಗುಣವಾದ ಚಿಕಿತ್ಸಾ ವಿಧಾನಗಳನ್ನು ಬಳಸಲಾಗುತ್ತಿದೆ ಎಂದರು.

ಇತ್ತೀಚಿನ ತಂತ್ರಜ್ಞಾನವಾದ ಎಂಆರ್–ಲೈನಾಕ್ ಕುರಿತು ಮಾತನಾಡಿದ ತಜ್ಞರು, ಇದು ಉನ್ನತ ಮಟ್ಟದ ಎಂಆರ್‌ಐ ಚಿತ್ರಣವನ್ನು ಕಿರಣ ಚಿಕಿತ್ಸೆಯೊಂದಿಗೆ ಸಂಯೋಜಿಸುವ ಮೂಲಕ ಗಡ್ಡೆಯನ್ನು ನೈಜ ಸಮಯದಲ್ಲಿ ವೀಕ್ಷಿಸಿ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ. ಇದರಿಂದ ಆರೋಗ್ಯಕರ ಮೆದುಳಿನ ಭಾಗಗಳಿಗೆ ಹಾನಿಯಾಗದಂತೆ ಅತ್ಯಂತ ನಿಖರವಾಗಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅನೇಕ ರೋಗಿಗಳು ಆರಂಭಿಕ ನರ ವೈಜ್ಞಾನಿಕ ಲಕ್ಷಣಗಳನ್ನು ಕಡೆಗಣಿಸುವುದರಿಂದ ರೋಗ ಪತ್ತೆಯಲ್ಲಿ ವಿಳಂಬವಾಗುತ್ತದೆ. ಸಾರ್ವಜನಿಕ ಜಾಗೃತಿ ಹೆಚ್ಚಿದರೆ ಆರಂಭಿಕ ಹಂತದಲ್ಲೇ ರೋಗವನ್ನು ಪತ್ತೆ ಹಚ್ಚಿ ಪರಿಣಾಮಕಾರಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ಆಧುನಿಕ ನಿಖರ ಚಿಕಿತ್ಸಾ ವಿಧಾನಗಳಿಂದ ರೋಗಿಗಳಿಗೆ ಹೆಚ್ಚು ಸುರಕ್ಷಿತ ಮತ್ತು ಪರಿಣಾಮಕಾರಿ ಆಯ್ಕೆಗಳು ಲಭ್ಯವಿದೆ ಎಂದು ಹೇಳಿದರು.

ಮೆದುಳಿನ ಗಡ್ಡೆ ಅಂಗವಾಗಿ ಸಾರ್ವಜನಿಕರು ಎಚ್ಚರಿಕೆ ಸೂಚನೆಗಳ ಬಗ್ಗೆ ಜಾಗರೂಕರಾಗಿರಬೇಕು, ಲಕ್ಷಣಗಳು ಕಂಡು ಬಂದ ತಕ್ಷಣ ವೈದ್ಯಕೀಯ ಸಲಹೆ ಪಡೆಯಬೇಕು ಹಾಗೂ ಚಿಕಿತ್ಸಾ ಕ್ಷೇತ್ರದಲ್ಲಿ ಆಗಿರುವ ಹೊಸ ಪ್ರಗತಿಗಳ ಬಗ್ಗೆ ವಿಶ್ವಾಸವಿಡಬೇಕು ಎಂದು ವಿವರಿಸಿದರು.

ಸುಮಾರು 30 ವರ್ಷಗಳಿಂದ ಆರೋಗ್ಯ ಸೇವೆಗಳನ್ನು ಒದಗಿಸುತ್ತಿರುವ ಯಶೋದ ಆಸ್ಪತ್ರೆಗಳ ಗುಂಪು, ಹೈದರಾಬಾದ್‌ನ ಸೋಮಾಜಿಗುಡ, ಸಿಕಂದರಾಬಾದ್, ಮಲಕ್‌ಪೇಟ್ ಹಾಗೂ ಹೈಟೆಕ್ ಸಿಟಿಗಳಲ್ಲಿ ನಾಲ್ಕು ಆಸ್ಪತ್ರೆಗಳೊಂದಿಗೆ ಸುಮಾರು 4,000 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ಆಧುನಿಕ ತಂತ್ರಜ್ಞಾನ ಮತ್ತು ರೋಗಿ–ಕೇಂದ್ರೀಕೃತ ಸೇವೆಗಳ ಮೂಲಕ ವಿಶ್ವ ಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಇಲ್ಲಿಯ ಸಾರ್ವಜನಿಕರು ಆಸ್ಪತ್ರೆಯ ಸೌಲತ್ತು, ವಿಶೇಷವಾಗಿ ಬ್ರೇನ್ ಟ್ಯುಮರ್ ಬಗೆಗಿನ ಚಿಕಿತ್ಸೆ ಪಡೆಯಲು ಮುಂದೆ ಬರುವಂತೆ ಡಾ.ಭರತಕುಮಾರ ಮನವಿ ಮಾಡಿದರು.

ಆಸ್ಪತ್ರೆಯ ವ್ಯವಸ್ಥಾಪಕ ಲಲಿತ ಶರ್ಮಾ ಹಾಗೂ ಆರೋಗ್ಯ ಮಿತ್ರ ರಾಜಕುಮಾರ ಇಟಕಾರಿ ಪತ್ರಿಕಾಗೋಷ್ಠಿಯಲ್ಲಿದ್ದರು.

# ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಕರೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್




ಪರಿಸರ ಸಮತೋಲನ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಹವಾಮಾನ ಬದಲಾವಣೆಯ ಪರಿಣಾಮಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಹಸಿರು ಆವರಣದ ವೃದ್ಧಿಗೆ ಎಲ್ಲರೂ ಕೈಜೋಡಿಸಬೇಕೆಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯ ಡೀನ್ (ತೋಟಗಾರಿಕೆ) ಕರೆ ನೀಡಿದರು.

ಮಹಾವಿದ್ಯಾಲಯದ ಆವರಣದಲ್ಲಿ ಇತ್ತೀಚಿನ ಕಾರ್ಯಕ್ರಮದಲ್ಲಿ ವಿವಿಧ ಜಾತಿಯ ಹಣ್ಣಿನ, ಔಷಧೀಯ ಹಾಗೂ ನೆರಳು ನೀಡುವ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶವನ್ನು ತಿಳಿಸಿ ಅವರು ಮಾತನಾಡಿದರು.

ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟನ ಅಧೀನದಲ್ಲಿ ಬರುವ ತೋಟಗಾರಿಕೆ ಮಹಾವಿದ್ಯಾಲಯ, ಬೀದರನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಮತ್ತು ತೋಟಗಾರಿಕಾ ವಿಸ್ತರಣಾ ಶಿಕ್ಷಣ ಕೇಂದ್ರದ ವತಿಯಿಂದ ಇತ್ತೀಚಿನ ವಿಶ್ವ ಪರಿಸರ ದಿನಾಚರಣೆಯನ್ನು "ಪ್ರಕೃತಿಯಿಂದ ಸ್ಫೂರ್ತಿ ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ" ಎಂಬ ಘೋಷವಾಕ್ಯದಡಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ವಿದ್ಯಾರ್ಥಿಗಳ ವಸತಿ ನಿಲಯದ ಮುಂಭಾಗದಲ್ಲಿ ಸಸಿಗಳನ್ನು ನೆಟ್ಟು, ಪರಿಸರ ಸಂರಕ್ಷಣೆಯ ಮಹತ್ವವನ್ನು ಕುರಿತು ಪ್ರಕೃತಿಯೇ ಮಾನವನ ಬದುಕಿನ ಮೂಲಾಧಾರವಾಗಿದ್ದು, ಪರಿಸರ ಸಮತೋಲನ ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಹವಾಮಾನ ಬದಲಾವಣೆಯ ಪರಿಣಾಮಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಹಸಿರು ಆವರಣದ ವೃದ್ಧಿಗೆ ಎಲ್ಲರೂ ಕೈಜೋಡಿಸಬೇಕೆಂದು ಎಂದು ತಿಳಿಸಿದರು.

"ಪ್ರಕೃತಿಯಿಂದ ಸ್ಫೂರ್ತಿ ಪಡೆದು ಪರಿಸರ ಸ್ನೇಹಿ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಗಿಡಮರಗಳನ್ನು ನೆಡುವುದು, ನೀರಿನ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು ಹಾಗೂ ಪರಿಸರ ಜಾಗೃತಿ ಮೂಡಿಸುವುದು ನಮ್ಮ ಭವಿಷ್ಯವನ್ನು ಸುರಕ್ಷಿತಗೊಳಿಸುವುದು ಪ್ರಮುಖ ಕ್ರಮಗಳಾಗಿವೆ ಎಂದರು.

ಪ್ರಕೃತಿಯು ಮಾನವನಿಗೆ ಬದುಕಲು ಅಗತ್ಯವಿರುವ ಗಾಳಿ, ನೀರು, ಆಹಾರ ಹಾಗೂ ಜೀವ ವೈವಿಧ್ಯತೆಯನ್ನು ಒದಗಿಸುತ್ತದೆ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯ ನಾಶ, ಕೈಗಾರಿಕೀಕರಣ, ನಗರೀಕರಣ ಮತ್ತು ಅತಿಯಾದ ನೈಸರ್ಗಿಕ ಸಂಪನ್ಮೂಲಗಳ ಬಳಕೆಯಿಂದ ಪರಿಸರದ ಮೇಲೆ ಅಪಾರ ಒತ್ತಡ ಉಂಟಾಗುತ್ತಿದೆ. ಇದರ ಪರಿಣಾಮವಾಗಿ ಜಾಗತಿಕ ತಾಪಮಾನ ಏರಿಕೆ, ಮಳೆಯ ಮಾದರಿಗಳ ಬದಲಾವಣೆ, ಬರ, ಪ್ರವಾಹ ಹಾಗೂ ಪ್ರಕೃತಿ ವಿಕೋಪಗಳು ಹೆಚ್ಚಾಗುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ, ಹವಾಮಾನ ಬದಲಾವಣೆಯ ಸವಾಲುಗಳು ಹಾಗೂ ಸುಸ್ಥಿರ ಅಭಿವೃದ್ಧಿಯ ಅಗತ್ಯತೆಯ ಕುರಿತು ಜಾಗೃತಿ ಮೂಡಿಸುವ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಕಾರ್ಮಿಕರು ಭಾಗವಹಿಸಿದ ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಬೋಧಕ ಸಿಬ್ಬಂದಿಗಳಾದ ಡಾ.ಮಹಮ್ಮದ್ ಫಾರೂಖ್, ಡಾ.ಶ್ರೀನಿವಾಸ.ಎನ್., ಡಾ.ಎಸ್.ಎಮ್.ಪ್ರಸನ್ನ, ಡಾ.ಅಂಬ್ರೇಶ, ಅಂಜನೇಯ. ಎನ್, ಶ್ರೀಮತಿ ಅನುರಾಧಾ ಆರ್.ವಡಗಾವೆ, ಶ್ರೀಮತಿ ಜಾನ್ಹವಿ ಡಿ.ಆರ್.ಡಾ.ಕವಿತಾ ರಾಠೋಡ್, ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಅಧಿಕಾರಿಗಳಾದ ಡಾ.ವಿಜಯ ಮಹಾಂತೇಶ, ಡಾ.ರಮೇಶ ನಾಯಕ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ಮಹತ್ವಾಕಾಂಕ್ಷಿ ಹೆಜ್ಜೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಪರಿಸರ ಸಂರಕ್ಷಣೆ, ಸಾಮಾಜಿಕ ಜಾಗೃತಿ ಹಾಗೂ ಸಮಗ್ರ ಅಭಿವೃದ್ಧಿಯ ಉದ್ದೇಶದಿಂದ ಕಲಬುರಗಿ ಜಿಲ್ಲೆಯ ಆಳಂದ ಪಟ್ಟಣದಲ್ಲಿ ಜೂನ್ 13ರಂದು ಆರಂಭಗೊಳ್ಳಲಿರುವ 'ಅನುಭವ ಗ್ರೀನ್ ಸಿಟಿ' ಯೋಜನೆಯ ಉದ್ಘಾಟನಾ ಸಮಾರಂಭ ಹಾಗೂ ವಚನ ನುಡಿ ಕನ್ನಡ ದಿನಪತ್ರಿಕೆ ಬಿಡುಗಡೆ ಕಾರ್ಯಕ್ರಮದ ಕರಪತ್ರವನ್ನು ಭಾಲ್ಕಿಯ ವಚನ ಸಮೂಹ ಸಂಸ್ಥೆಯ ಶಾಖಾ ಕಚೇರಿಯಲ್ಲಿ ಅನಾವರಣಗೊಳಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಚನ ಸಮೂಹ ಸಂಸ್ಥೆಯ ಬೀದರ್ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕ ಅಲ್ಲಮಪ್ರಭು ನಾವದಗೇರೆ, ಬಸವಾದಿ ಶರಣರ ತತ್ವಗಳ ಆಧಾರದ ಮೇಲೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಯೇ ಸಂಸ್ಥೆಯ ಮುಖ್ಯ ಗುರಿಯಾಗಿದೆ ಎಂದು ಹೇಳಿದರು.

ಸಂಸ್ಥೆಯು ಕಳೆದ 16 ವರ್ಷಗಳಿಂದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಪರಿಸರ ಕ್ಷೇತ್ರಗಳಲ್ಲಿ ನಿರಂತರ ಸೇವಾ ಚಟುವಟಿಕೆಗಳನ್ನು ನಡೆಸುತ್ತಿದ್ದು, ಪ್ರಕೃತಿ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡುತ್ತಿದೆ. ಪರಿಸರ ಹಾನಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಹಿನ್ನೆಲೆಯಲ್ಲಿ ಸಂಸ್ಥೆಯು ಪ್ರಸಕ್ತ ವರ್ಷದಲ್ಲಿ ಸುಮಾರು 16 ಸಾವಿರ ಸಸಿಗಳ ನೆಡುವ ಮಹತ್ವಾಕಾಂಕ್ಷಿ ಯೋಜನೆ ರೂಪಿಸಿಕೊಂಡಿದ್ದು, ಸಾರ್ವಜನಿಕರು ಈ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮನವಿ ಮಾಡಿದರು.

ಸಂಸ್ಥೆಯ ಉಪಾಧ್ಯಕ್ಷ ಪ್ರಕಾಶ್ ಗಂದಿಗುಡೆ ಮಾತನಾಡಿ, ಉತ್ತಮ ಪರಿಸರ ಮತ್ತು ಮೌಲ್ಯಾಧಾರಿತ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ಸಮಾಜಮುಖಿ ಕಾರ್ಯಕ್ರಮಗಳಿಗೆ ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ನಿರ್ದೇಶಕರಾದ ಶಿವಕುಮಾರ ಸಾಲಿ, ಡಾ. ಶಿವಶಂಕರ ಟೋಕರೆ, ಗಣಪತಿ ಬೋಚರೆ, ಜೈರಾಜ ದಾಬಶೆಟ್ಟಿ, ನಿವೃತ್ತ ಪ್ರಾಚಾರ್ಯೆ ರೇಖಾ ಮಹಾಜನ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಶರಣೆ ಸೂಗಮ್ಮ ಎಸ್. ನಾವದಗೇರೆ ವಚನ ಗಾಯನ ನಡೆಸಿಕೊಟ್ಟರು. ಚಂದ್ರಕಾಂತ ಬಿರಾದಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಭು ಡಿಗ್ಗೆ ಕಾರ್ಯಕ್ರಮ ನಿರೂಪಣೆ ಮಾಡಿದರು. ಪ್ರೊ. ಗೀತಾ ಪಾಟೀಲ್ ವಂದಿಸಿದರು.

## ಗಿಡ ನೆಟ್ಟು ಪೋಷಣೆ ಮಾಡುವ ಮೂಲಕ ಪರಿಸರ ರಕ್ಷಣೆಗೆ ಕರೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಪರಿಸರ ರಕ್ಷಣೆಗೆ ತಮ್ಮ ಕೊಡುಗೆ ನೀಡಬೇಕೆಂದು ಬೀದರ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಡಾ.ರಾಜಶೇಖರ್ ಬಸ್ಸನಾಯಕ ಕರೆ ನೀಡಿದರು.

ಬೀದರ ನಗರ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಇತ್ತೀಚಿನ ವಿಶ್ವ ಪರಿಸರ ದಿನಾಚರಣೆಯನ್ನು ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ) ಬೀದರ ಹಾಗೂ ಕೃಷಿ ಡಿಪ್ಲೋಮಾ ಕಾಲೇಜು, ಬೀದರ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವಪರಿಸರ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಿ ಅವರು ಮಾತನಾಡಿದರು. ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಪಾತ್ರ ಮಹತ್ವದ್ದಾಗಿದ್ದು, ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆ ಮಾಡುವ ಮೂಲಕ ಪರಿಸರ ರಕ್ಷಣೆಗೆ ತಮ್ಮ ಕೊಡುಗೆ ನೀಡಬೇಕೆಂದು ಹೇಳಿದರು. ಮರಗಳು ಜೀವಜಗತ್ತಿನ ಆಧಾರವಾಗಿದ್ದು, ಅವುಗಳ ಸಂರಕ್ಷಣೆ ಇಂದಿನ ಅಗತ್ಯವಾಗಿದೆ ಎಂದು ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಕೇಂದ್ರದ ಆವರಣದಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ.ಚಂದ್ರಕಾಂತ ಹಾಗೂ ಡಾ. ಶಿವಕುಮಾರ ಅವರು ಪರಿಸರ ಸಂರಕ್ಷಣೆ ಮತ್ತು ಹಸಿರು ಆವರಣ ವೃದ್ಧಿಯ ಮಹತ್ವದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ.ರಣಧೀರ್ ಸಿಂಗ್ ಅವರು ಮಾತನಾಡಿ, ಪರಿಸರ ಸಂರಕ್ಷಣೆ ಇಂದಿನ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದ್ದು, ಪ್ರತಿಯೊಬ್ಬ ನಾಗರಿಕನು ಪರಿಸರ ರಕ್ಷಣೆಗೆ ಸಂಕಲ್ಪ ಮಾಡಬೇಕೆಂದು ಕರೆ ನೀಡಿದರು. ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಪ್ರಕೃತಿಯ ಸಮತೋಲನವನ್ನು ಕಾಪಾಡಬೇಕು ಎಂದು ತಿಳಿಸಿದರು. ಪರಿಸರ ಸಂರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿದರು. ಕಾರ್ಯಕ್ರಮವು ಪರಿಸರ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು.

ಈ ಸಂದರ್ಭದಲ್ಲಿ ಕೃಷಿ ಡಿಪ್ಲೋಮಾ ಕಾಲೇಜಿನ ಸಂಯೋಜಕರಾದ ಡಾ.ಜೈನುದ್ದೀನ್ ಮುಲ್ಲಾ, ಡಾ.ಎಸ್.ಬಿ.ಬೇಲ್ಲದ, ಪ್ರಾಧ್ಯಾಪಕರು, ಕಾಲೇಜಿನ ವಿದ್ಯಾರ್ಥಿಗಳು, ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಹಾಗೂ ತಾಂತ್ರಿಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಗೀತ ದೇಶದ ಅವಿಭಾಜ್ಯ ಅಂಗ: ಡಾ. ರಾಜಕುಮಾರ ಹೆಬ್ಬಾಳೆ





• ಮಲ್ಲಮ್ಮ ನುಡಿ ವಾರ್ತೆ ಬೀದರ್

ದೇಶ ಬಿಟ್ಟು ಸಂಗೀತವಿಲ್ಲ, ಸಂಗೀತ ಬಿಟ್ಟು ಜನರಿಲ್ಲ. ಹೀಗಾಗಿ ಇದು ದೇಶದ ಅವಿಭಾಜ್ಯ ಅಂಗವಾಗಿದೆ. ಸಂಗೀತ ಎಂಬುದು ಕೇವಲ ಮನೋರಂಜನೆ ಅಲ್ಲ. ಅದೊಂದು ಭಾವನೆಗಳನ್ನು ವ್ಯಕ್ತಪಡಿಸುವ ಮತ್ತು ಆಧ್ಯಾತ್ಮಿಕ ಶಾಂತಿಯನ್ನು ನೀಡುವ ಅದ್ಭುತ ಕಲೆಯಾಗಿದೆ ಎಂದು ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು ನವದೆಹಲಿಯ ಪ್ರಧಾನ ಕಾರ್ಯದರ್ಶಿ ಡಾ.ರಾಜಕುಮಾರ ಹೆಬ್ಬಾಳೆ ಪ್ರತಿಪಾದಿಸಿದರು.

ನಗರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಲ್ಲಿರುವ ಮಹಾಲಕ್ಷ್ಮಿ ಸಭಾಂಗಣದಲ್ಲಿ ಮಹೇಶಕುಮಾರ ಸಾರೆಗಮಪ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಚಾರಿಟೇಬಲ್ ಟ್ರಸ್ಟ್ ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ 2025–26ನೇ ಸಾಲಿನ ಸಾಮಾನ್ಯ ಸಂಘಸಂಸ್ಥೆಗಳ ಧನಸಹಾಯ ಯೋಜನೆಯಡಿಯಲ್ಲಿ ಜರುಗಿದ ಸಂಗೀತ ಸೌರಭ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕದಲ್ಲಿಯೂ ಸಂಗೀತಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಈ ಸಂಗೀತ ಕಲೆಯ ಪರಂಪರೆಯನ್ನು ಜಿಲ್ಲೆಯಲ್ಲಿ ಹಲವು ಹಿರಿಯ ಸಂಗೀತ ಕಲಾವಿದರು ಜಾತಿ ಧರ್ಮಗಳಾಚೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಹೇಶ ಕುಂಬಾರ ಹಾಗೂ ಅವರ ತಂಡ ಜಿಲ್ಲೆಯಲ್ಲಿ ಸಂಗೀತಕ್ಕೆ ಒತ್ತುಕೊಟ್ಟು ಮುಂದಿನ ಪೀಳಿಗೆಗೆ ಅಭಿರುಚಿ ಹುಟ್ಟಿಸುತ್ತಿರುವುದು ಶ್ಲಾಘನೀಯ ಎಂದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಸಂಜೀವಕುಮಾರ ಅತಿವಾಳೆ ಮಾತನಾಡಿ ಕಲೆ ಸಂಗೀತ ಎಂಬುದು ದೇಶಿ ಸಂಸ್ಕೃತಿಯ ಸಂಕೇತವಾಗಿದೆ. ಅದರಲ್ಲೂ ಜಾನಪದ ಸಂಗೀತ ಮನಸು ಮತ್ತು ಹೃದಯಗಳನ್ನು ಒಂದುಗೂಡಿಸುತ್ತದೆ. ಕಲಾ ಆರಾಧನೆಯಿಂದ ವ್ಯಕ್ತಿಯ ಶರೀರದಲ್ಲಿರುವ ದೀರ್ಘಕಾಲೀನ ಕಾಯಿಲೆಗಳು ನಿಯಂತ್ರಣದಲ್ಲಿರುತ್ತವೆ. ಹೀಗಾಗಿ ಪ್ರತಿಯೊಬ್ಬರೂ ಸಂಗೀತವನ್ನು ಆಲಿಸಬೇಕು. ಉಳಿಸಬೇಕು ಮತ್ತು ಬೆಳೆಸಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಾರೆಗಮಪ ಸಾಂಸ್ಕೃತಿಕ ಶೈಕ್ಷಣಿಕ ಮತ್ತು ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಮಹೇಶಕುಮಾರ ಕುಂಬಾರ ಮಾತನಾಡಿ ನಮ್ಮ ಸಾರೆಗಮಪ ಟ್ರಸ್ಟ್ ಮೂಲಕ ಹಲವು ವರ್ಷಗಳಿಂದ ಸಂಗೀತ ಸೇವೆ ನೀಡುತ್ತ ಜಿಲ್ಲೆಯಲ್ಲಿ ಒಂದು ಭಕ್ತಿ ಮತ್ತು ಆಧ್ಯಾತ್ಮದ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ವೇದಿಕೆ ಮೇಲೆ ಕರಾಶಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ವಿಜಯ ಗೂನಳ್ಳಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಭಾರತಿ ವಸ್ತ್ರದ್, ನಾಟ್ಯಶ್ರೀ ನೃತ್ಯಾಲಯದ ನಿರ್ದೇಶಕಿ ರಾಣಿ ಸತ್ಯಮೂರ್ತಿ, ಐಎನ್‌ಓ ಸಂಸ್ಥೆಯ ಜಿಲ್ಲಾಧ್ಯಕ್ಷ ಗೋರಕನಾಥ ಕುಂಬಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸವಿಗಾನ ಸಂಗೀತ ಕಲಾತಂಡದವರು ನಾಡಗೀತೆ ನಡೆಸಿಕೊಟ್ಟರು. ಪವಿತ್ರ ಖಡಕೆ ನಿರೂಪಿಸಿದರು. ಪಾಂಡುರಂಗ ಕುಂಬಾರ ಸ್ವಾಗತಿಸಿದರು. ಶ್ರೀನಿವಾಸ ಬಾಬು ಕುಂಬಾರ ವಂದಿಸಿದರು. ಇದೇ ವೇಳೆ 2026 ನೇ ಸಾಲಿನ ಸಾರೆಗಮಪ ಗಾನ ಗಂಧರ್ವ ಪ್ರಶಸ್ತಿಯನ್ನು ಸಂಗೀತ ಕಲಾವಿದ ಶಿವಕುಮಾರ ಪಾಂಚಾಳ ಅವರಿಗೆ ನೀಡಿ ಗೌರವಿಸಲಾಯಿತು.

**ಕಲಾಪ್ರದರ್ಶನ:** ಅಕ್ಷರಾ, ಪ್ರಾರ್ಥನಾ, ಸ್ಫೂರ್ತಿ ಮತ್ತು ಸಂಸ್ಕೃತಿ ಇವರಿಂದ ಗಣೇಶ ವಂದನಾ ನೃತ್ಯ ಜರುಗಿತು. ದಿಲೀಪ ಕಾಡವಾದ ಅವರ ಜಾನಪದ ಗಾಯನ, ಬಲರಾಮ ಪಂಚಾಳ ಅವರ ತತ್ವಪದಗಳು, ರಾಣಿ ಸತ್ಯಮೂರ್ತಿಯವರ ಭರತನಾಟ್ಯ, ಜೆಸ್ಸಿ ಸೋನವಾನೆ ಅವರ ಕನ್ನಡ ಗೀತೆಗಳು, ರಶ್ಮಿ ಶರ್ಮಾ ಅವರ ಸುಗಮ ಸಂಗೀತ, ಶಾಂಭವಿ ಕಲ್ಮಠ ಅವರ ವಚನ ಸಂಗೀತ, ಭಾನುಪ್ರಿಯ ಅರಳಿ ಅವರ ಭಾವಗೀತೆಗಳು, ಕು. ಶ್ರದ್ಧಾ ಮತ್ತು ಕಲಾತಂಡದವರ ದೇಶಭಕ್ತಿ ನೃತ್ಯ, ಶ್ರೀಮತಿ ಆಶಾ ಕಲಾತಂಡದ ಕೋಲಾಟ, ತುಕಾರಾಮ ನಾಗೂ–ರೆ ಅವರ ಜಾನಪದ ಜಾದು ಸಭೀಕರ ಗಮನ ಸೆಳೆಯಿತು.

# ಜೂನ್-8 ರಂದು ಗಂಗಾವತಿ ಆಟೋನಗರಕ್ಕೆ ಡಿ.ಸಿ ಭೇಟಿ ಮೂಲ ಸದಸ್ಯರಿಗೆ ನ್ಯಾಯ ಒದಗಿಸಲು ಭರವಸೆ



• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಸುಮಾರು 40 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಆಟೋನಗರಕ್ಕೆ ಜೂನ್-8 ಸೋಮವಾರ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಹಿಂದಿನ ಜಿಲ್ಲಾಧಿಕಾರಿಗಳು 2014 ರಲ್ಲಿ ಹೊರಡಿಸಿದ ಆದೇಶದನ್ವಯ ವಿನ್ಯಾಸ ರಚಿಸಿ ಆಟೋನಗರದ ಮೂಲ ಸದಸ್ಯರುಗಳಿಗೆ ನ್ಯಾಯ ಒದಗಿಸಿಕೊಡಲು ಭರವಸೆ ನೀಡಿದರು ಎಂದು ಆಟೋನಗರ ಮೂಲ ಸದಸ್ಯರ ಹಿತರಕ್ಷಣಾ ವೇದಿಕೆಯ ಸಂಚಾಲಕರಾದ ಡಿ. ವಿಜಯ್ ಸಂತಸ ವ್ಯಕ್ತಪಡಿಸಿದರು.ಸುಮಾರು 40 ವರ್ಷಗಳ ಹಿಂದೆಯೇ ಗಂಗಾವತಿ ನಗರಸಭೆ ಮಾಲೀಕತ್ವದ ಸರ್ವೆ ನಂ: 139, 139/1 ಒಟ್ಟು ವಿಸ್ತೀರ್ಣ 5-00 ಎಕರೆ ಭೂಮಿಯನ್ನು 1984-85ನೇ ಸಾಲಿನಲ್ಲಿ ಆಟೋನಗರ ನಿರ್ಮಾಣಕ್ಕಾಗಿ ಖರೀದಿಸಲಾಗಿ, ಸದರಿ ಆಟೋನಗರಕ್ಕೆ ವಿನ್ಯಾಸವನ್ನು ತಯಾರಿಸಿ ನಿವೇಶನಗಳನ್ನು ರಚಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಿ ರಾಜ್ಯ ಹೆದ್ದಾರಿಗೆ ಹೊಂದಿಕೊಂಡ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ರೂ. 15/- ರಂತೆ ಹಾಗೂ ಒಳಗಿನ ನಿವೇಶನಗಳಿಗೆ ರೂ. 7/- ರಂತೆ ಬೆಲೆಯನ್ನು ನಿಗದಿಪಡಿಸಿ ನಗರಸಭೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಮುಂದುವರೆದು ಆಗಿನ ಜಿಲ್ಲಾಧಿಕಾರಿಗಳು ದಿನಾಂಕ: 27.06.2014 ರಂದು ಆದೇಶ ಹೊರಡಿಸಿ, ನಗರಸಭೆ ಗಂಗಾವತಿ ಇವರು ಸಲ್ಲಿಸಿದ ಪ್ರಸ್ತಾವನೆಯಲ್ಲಿನ ಯಾದಿಯಲ್ಲಿರುವ 90 ಫಲಾನುಭವಿಗಳ ಪ್ರಕಾರ ಸಂಪೂರ್ಣ ಹಣವನ್ನು ಭರಣ ಮಾಡಿರುವ ಫಲಾನುಭವಿಗಳಿಗೆ ನಿವೇಶನವನ್ನು ಹಾಗೂ ಭಾಗಶಃ ಹಣ ಪಾವತಿಸಿರುವ ಫಲಾನುಭವಿಗಳಿಂದ ಪಡೆದಿರುವ ದರದನ್ವಯ ವ್ಯತ್ಯಾಸದ ಮೊತ್ತವನ್ನು ಪಡೆದುಕೊಂಡು, ಹಿರಿಯ ಉಪ ನೋಂದಣಾಧಿಕಾರಿಗಳು ಗಂಗಾವತಿಯವರಿಂದ ನೋಂದಣಿ ಮಾಡಿಕೊಂಡು ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಲು ಕ್ರಮವಹಿಸುವಂತೆ ಮತ್ತು ಕರಾರು ಒಪ್ಪಂದ ಪತ್ರದ ಪ್ರಕಾರ ವ್ಯತ್ಯಾಸ ಕಂಡುಬಂದಲ್ಲಿ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸಗಳಿಗೆ ಹೊಂದಾಣಿಕೆ ಮಾಡಿಕೊಂಡು ಸಂಬಂಧಪಟ್ಟ ಫಲಾನುಭವಿಗಳಿಗೆ ಸರಿಪಡಿಸುವಿಕೆಯ ಕರಾರು ಪತ್ರ ಮಾಡಿಕೊಂಡು ಸದರಿ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಆದೇಶ ಮಾಡಿದ್ದರು. ಮುಂದುವರೆದು ನಗರಸಭೆಯ ಈಗಿನ ಪೌರಾಯುಕ್ತ ಆರ್. ವಿರುಪಾಕ್ಷಮೂರ್ತಿಯವರು ಆಟೋನಗರದ ನಿವೇಶನಗಳ ವಿನ್ಯಾಸವನ್ನು ಆಟೋನಗರದ ಫಲಾನುಭವಿಗಳಿಗೆ ತಿಳಿಸದೇ ಮತ್ತು ಸರಿಯಾದ ಮಾಹಿತಿ ನೀಡದೇ ತಮಗೆ ಇಷ್ಟಬಂದ ರೀತಿಯಲ್ಲಿ ರಚಿಸಿ, ಕಾರ್ಮಿಕರಿಗೆ ಅನ್ಯಾಯವೆಸಗಿದ್ದರು. ಈ ಬಗ್ಗೆ ಸಾಕಷ್ಟು ಬಾರಿ ಪೌರಾಯುಕ್ತರಿಗೆ ಮನವಿ ಮಾಡಿದರೂ, ಯಾವುದೇ ಪ್ರಯೋಜನವಾಗಿರುವುದಿಲ್ಲ. ಇಲ್ಲಿನ ಆಟೋನಗರ ಮೂಲ ನಿವಾಸಿಗಳು ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ಇಲ್ಲಿನ ಸಮಸ್ಯೆಗಳನ್ನು ಸರಿಪಡಿಸುವಂತೆ ಒತ್ತಾಯಿಸಲಾಗಿತ್ತು. ಅದರಂತೆ ಜೂನ್-8 ಸೋಮವಾರ ಜಿಲ್ಲಾಧಿಕಾರಿಗಳು ಆಟೋನಗರಕ್ಕೆ ಭೇಟಿ ನೀಡಿ, ದಾಖಲೆಗಳನ್ನು ಪರಿಶೀಲಿಸಿ, ಮರು ಸರ್ವೆ ಮಾಡಿ ಇಲ್ಲಿನ ಮೂಲ ನಿವಾಸಿಗಳು ನಾಲ್ಕು ದಶಕಗಳ ಕಾಲ ಎದುರಿಸುತ್ತಿದ್ದ ಸಮಸ್ಯೆಗಳಿಗೆ ಜಿಲ್ಲಾಧಿಕಾರಿಗಳು ಸ್ಪಂದಿಸಿ, ಎಲ್ಲಾ ಮೂಲ ಸದಸ್ಯರಿಗೆ ನ್ಯಾಯ ಒದಗಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಆಟೋನಗರದ ಮೂಲನಿವಾಸಿಗಳಾದ ಹುಸೇನಸಾಬ್, ಕಟ್ಟಾ ರಾಜ, ಬಿ. ಪ್ರಕಾಶ, ಡಿ.ಎಲ್. ಮೇರಿ, ಆರೋಗ್ಯ ಮೇರಿ, ಚಾಂದ್, ಗೌಸ್ ಪೀರ್, ಖಲೀಲ್ ಟಿಂಕರ್, ಸಲೀಂ ಟಿಂಕರ್, ಭಾಷಾ ಲಾರಿ ಮೆಕ್ಯಾನಿಕ್, ಬಿ. ಶ್ರೀನಿವಾಸ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಪುಸ್ತಕದ ಕಾಶಿ ಹಾರಕೂಡ ಮಠ : ಪ್ರೊ. ಡಿ. ವಿ. ಪರಶಿವಮೂರ್ತಿ

ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಹಾರಕೂಡ ಮಠ 108 ಕೃತಿಗಳನ್ನು ಪ್ರಕಟಿಸಿ ಪುಸ್ತಕದ ಕಾಶಿಯಾಗಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊಫೆಸರ್ ಡಿ. ವಿ. ಪರಶಿವಮೂರ್ತಿ ತಿಳಿಸಿದರು. ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಡಾ. ಬಸವರಾಜ ಸಬರದ ಅವರು ರಚಿಸಿದ ಬೀದರ ಜಿಲ್ಲೆಯ ತತ್ವಪದಕಾರರು ಮತ್ತು ತತ್ವಪದ ಸಾಹಿತ್ಯ ಮೀಮಾಂಸೆ ಪ್ರತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು ಪಂಡಿತರನ್ನು ರಾಜ ಮಹಾರಾಜರನ್ನು ಮೆಚ್ಚಿಸಲಿಕ್ಕೆ ಕಾವ್ಯಗಳನ್ನು ಪುಸ್ತಕಗಳನ್ನು ಬರೆದರು ಬಹಳ ಜನ ಕವಿಗಳಾಗಿದ್ದಾರೆ, ವಿದ್ವಾಂಸರಾಗಿದ್ದಾರೆ, ಆದರೆ ಜನಸಾಮಾನ್ಯರನ್ನು ಕುರಿತು ಬರೆದವರು 12ನೇ ಶತಮಾನದ ಶರಣರು. ಮನುಷ್ಯ ದೇಹ ಒಂದು ತುಚ್ಛ ಶರೀರ ಎಂದು ಅಲ್ಲ ಬೆಳೆದ ಸಂದರ್ಭದಲ್ಲಿ ಶರಣರು ಮಾನವ ಶರೀರವನ್ನು ವೈಭವಿಕರಿಸಿದರು, ದೇಹವನ್ನು ದೇವಾಲಯಕ್ಕೆ ಹೋಲಿಸಿ ದೇಹವೇ ದೇವಾಲಯ ಎಂದು ಹೇಳಿದರು ಬಸವಾದಿ ಶರಣರಿದ್ದಾರೆಂದು ಹೇಳಿದರು. ಹಂಪಿ ವಿಶ್ವವಿದ್ಯಾಲಯದ ಶಾಸನ ವಿಭಾಗದ ಮುಖ್ಯಸ್ಥರಾದ ಡಾ. ಅಮರೇಶ ಯತಗಲ್ಲ ಮಾತನಾಡಿ, ನಮ್ಮನ್ನು ನಾವು ಪ್ರೀತಿಸುವ ಮನಸುಳ್ಳವರು ಮಾತ್ರ ಇತರರನ್ನು ಪ್ರೀತಿಸಲು ಸಾಧ್ಯ, ಹಾಗಾಗಿ ತತ್ವಪದಕಾರರು ತಮ್ಮನ್ನು ತಾವು ಪ್ರೀತಿಸಿ ಸಮಾಜವನ್ನು ಪ್ರೀತಿಸಿದರು.

ಸಮಾಜದ ಓರೆ ಕೋರೆಗಳನ್ನು ತಮ್ಮ ಹಾಡುಗಳ ಮುಖಾಂತರ ತಿದ್ದಲು ಪ್ರಯತ್ನಿಸಿದರು. ತತ್ವಪದಕಾರರಿಗೆ ಪ್ರಭುತ್ವ ಮುಖ್ಯವಾಗಿರಲಿಲ್ಲ, ಜನಸಾಮಾನ್ಯರ ಬದುಕು ಮುಖ್ಯವಾಗಿತ್ತು. ಕೃತಿಗಳನ್ನು ರಚಿಸಿದ ಡಾ. ಬಸವರಾಜ ಸಬರದ ಅವರುಮಾತನಾಡಿ, ನಾನು ರಚಿಸಿದ ಕೃತಿ ಹಾರಕೂಡ ಶ್ರೀಮಠದಿಂದ ಪ್ರಕಟಗೊಂಡಿದೆ.

ತಮ್ಮ ಪ್ರಕಾಶನ ಸಂಸ್ಥೆಯಿಂದ ಪ್ರಕಟಿಸಿದ ಹಾರಕೂಡ ಹಿರೇಮಠ ಸಂಸ್ಥಾನದ ಪೀಠಾಧಿಪತಿಗಳು ಡಾ. ಚನ್ನವೀರ ಶಿವಾಚಾರ್ಯರಿಗೆ



ನಾನು ಕೃತಜ್ಞನಾಗಿದ್ದೇನೆ. ಪೂಜ್ಯರದು ಮಾತ್ರ ಹೃದಯವಾಗಿದೆ.

ತಾಯಿ ತನ್ನ ಮಕ್ಕಳನ್ನು ಬಹಳ ಪ್ರೀತಿ ವಾತ್ಸಲ್ಯದಿಂದ ಕಾಣುವಂತೆ ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು ಕವಿ, ಸಾಹಿತ್ಯ, ಕಲಾವಿದರನ್ನು ತಮ್ಮ ಮಕ್ಕಳಂತೆ ಕಂಡು ಪ್ರೀತಿಸಿ ಪ್ರೋತ್ಸಾಹಿಸಿ, ಬೆಳೆಸುವವರಾಗಿದ್ದಾರೆ ಎಂದರು. ಡಾ. ಗವಿಸಿದ್ದಪ್ಪ ಪಾಟೀಲ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು, ಹಾರಕೂಡ ಪಾವನ ಸಾನಿಧ್ಯ ವಹಿಸಿದ್ದರು.ಅಧ್ಯಕ್ಷತೆ ಬಿ. ಕೆ. ಹಿರೇಮಠ ವಹಿಸಿದ್ದರು. ವಿಶ್ರಾಂತ ಉಪ ಕಾರ್ಯದರ್ಶಿಗಳು, ಜಿ. ಪಂ. ಬೀದರ ವಹಿಸಿದ್ದರು.ಡಾ. ವಿಜಯಶ್ರೀ ಸಬರದ ಸಾಹಿತಿಗಳು, ಬೀದರ,ಪಿ. ಕೆ. ಹಿರೇಮಠ, ಡಾ. ಶಾಂತಪ್ಪ ಡಂಬಳ,ಮಲ್ಲಿನಾಥ ಹಿರೇಮಠ ಹಾರಕೂಡ,ಮೇಘರಾಜ ನಾಗರಾಳೆ, ಸಿದ್ರಾಮಪ್ಪ ಗುದಗೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.ಪ್ರಾರ್ಥನೆ ಕಾರ್ತೀಕ ಸ್ವಾಮಿ ಯಲದಗುಂಡಿ ಮತ್ತು ಶರಣಪ್ಪ ಸುಂಠಾಣ ನಡೆಸಿಕೊಟ್ಟರು.ಬಸವರಾಜ ಐನೋಳಿ ನಿರೂಪಿಸಿದರು.

ಡಾ.ರಾಜಕುಮಾರ ಮಾಳಗೆ ವಂದಿಸಿದರು.



**ನೋಂದಣಿಸಂಖ್ಯೆ:ನಿಬಿ/24/ನೋಂದಣಿ/3905/2018-19/827**

ದಿನಾಂಕ: **20-11-2018**

## ಶ್ರೀ ಮಾಣಿಕಪ್ರಭು ಪತ್ತಿನ ಸೌಹಾರ್ದ ಸಹಕಾರಿ (ನಿ) ಹುಮನಾಬಾದ

**ಗಾದಾ ಕಾಂಪ್ಲೇಕ್ಸ್ ಐಬಿ ಎದುರಗಡೆ ಹುಮನಾಬಾದ.ಜಿಲ್ಲೆ:ಬೀದರ-585330,-08483-450005**

## ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ್

ಆತ್ಮೀಯ ಸಹಕಾರಿಯ ಸದಸ್ಯರಿಗೆ ವಿನಂತಿಸಿಕೊಳ್ಳುವದೇನೆಂದರೆ, ಶ್ರೀ ಮಾಣಿಕಪ್ರಭು ಪತ್ತಿನ ಸೌಹಾರ್ದ ಸಹಕಾರಿ (ನಿ) ಹುಮನಾಬಾದ ಇದರ 9ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 25-06-2026 ಗುರುವಾರ ರಂದು ಸಮಯ 11.00 ಗಂಟೆಗೆ ರಾಷ್ಟ್ರೀಯ ಹೆದ್ದಾರಿ 9ರ ಹತ್ತಿರ ಸುಕ್ಷೇತ್ರ ಯಲ್ಲಮ್ಮ ದೇವಸ್ಥಾನದ, ಅವರಣದಲ್ಲಿ, ಅಧ್ಯಕ್ಷರಾದ ಶ್ರೀ ರಮೇಶ ರಡ್ಡಿ ಅವರ ಅಧ್ಯಕ್ಷತೆಯಲ್ಲಿ ಒಂಬತ್ತನೇ ವಾರ್ಷಿಕ ಸಭೆಯನ್ನು ಕರೆಯಲಾಗಿದೆ. ತಾವು ಈ ಸಭೆಯಲ್ಲಿ ಭಾಗವಹಿಸಿ, ಈ ಕೆಳಗಿನ ವಿಷಯಗಳ ಕುರಿತು ಚರ್ಚಿಸಿ ಅನುಮೋದಿಸಲು ವಿನಂತಿಸಿದೆ.

**ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಬೇಕಾದ ವಿಷಯಗಳು:-**

1) 9ನೇ ಸಭೆಯ ನೋಟಿಸ್‌ನ್ನು ಓದಿ ದಾಖಲಿಸುವುದು.
2) 8ನೇ ವಾರ್ಷಿಕ ಸಾಮಾನ್ಯ ಸಭೆಯ ಸಭೆಯ ನಡವಳಿ ಮತ್ತು ನಿರ್ಣಯಗಳನ್ನು ಓದಿ ಅಂಗಿಕರಿಸಿಸುವುದು.
3) 2024-2025ನೇ ಸಾಲಿನ ಲೆಕ್ಕ ಪರಿಶೋಧನೆ ವರದಿ ಮತ್ತು ಆರ್ಥಿಕ ತಪ್ತಿಗಳನ್ನು ಓದಿ ದಾಖಲಿಸುವುದು.
4) 2025-26ನೇ ಸಾಲಿನ ಸಹಕಾರಿಯ ಕಾರ್ಯಚಟುವಟಿಕೆಯ ವಾರ್ಷಿಕ ವರದಿಯನ್ನು ಅನುಮೋದನೆ ಪಡೆಯುವುದು.
5) 2025-2026-26-27-28, ಮೂರು ವರ್ಷಗಳ ವಾರ್ಷಿಕ ಕ್ರೀಯಾಯೋಜನೆಯ ಅನುಮೋದನೆ ಪಡೆಯುವುದು.
6) ಸಹಕಾರಿ 2025-2026ನೇ ಸಾಲಿಗೆ ಹೊಸದಾಗಿ ಸೇರ್ಪಡೆಯಾಗಿರುವ ಸದಸ್ಯರುಗಳನ್ನು ಅನುಮೋದಿಸುವ ಕುರಿತು.
7) 2025-26ನೇ ಸಾಲಿನ ಸಹಕಾರಿಯ ಅಂದಾಜು ಅಯ್ಯ-ವ್ಯಯ ಮಂಜುರು ಮಾಡುವುದು.
8) 2025-26ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿಯ ಕುರಿತು.
9) ಸಹಕಾರಿಯಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳ ನೇಮಕಾತಿಯ ಕುರಿತು.
10) ಸಹಕಾರಿಯ ಸಾಲದ ನಿಯಮ ಮತ್ತು ಠೇವಣಿಯ ನಿಯಮಗಳ ಅಂಗೀಕಾರ ಕುರಿತು.
11) ಸಹಕಾರಿಯಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುವದರಿಂದ ಸಾಲ ವಸೂಲಾತಿ ಮಾಡುವ ಕುರಿತು.
12)ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು,

ವಂದನೆಗಳೊಂದಿಗೆ,

**ಅಧ್ಯಕ್ಷರ ಆದೇಶದ ಮೇರೆಗೆ**
**ಸಹಿ/**
**ಮಲ್ಲಿಕಾರ್ಜುನರಡ್ಡಿ**
**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು**

ದಿನಾಂಕ:-05-06-2026
ಸ್ಥಳ:ಹುಮನಾಬಾದ

ಸದಸ್ಯರಿಗೆ ವಿಶೇಷ ಸೂಚನೆಗಳು:- 1) ಸಾಮಾನ್ಯ ಸಭೆಗೆ ಆಗಮಿಸಿರುವ ಸದಸ್ಯರು ಗುರುತಿನ ಚಿಟ್ಟಿ ಕಡ್ಡಾಯವಾಗಿ ತರಬೇಕು.
2) ಈ ಮೇಲಿನ ವಿಷಯಗಳ ಕುರಿತು ಮಾಹಿತಿ ಆಪೇಕ್ಷಿಸಿದಲ್ಲಿ ದಿನಾಂಕ:-10-06-2026 ಒಳಗಾಗಿ ಸಹಕಾರಿಗೆ ಲಿಖಿತ ರೋಪದಲ್ಲಿ ಪತ್ರ ನೀಡುವುದು

# ಲಿಂ. ಸದ್ಗುರು ಚನ್ನಬಸವ ಶಿವಯೋಗಿಗಳವರ ನೂತನ ಮೂರ್ತಿ ಅನಾವರಣ

• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ತಾಲೂಕಿನ ಸುಕ್ಷೇತ್ರ ಹಾರಕೂಡ ಶ್ರೀಮಠದ ಗರ್ಭ ಗವಿಯಲ್ಲಿ ಲಿಂಗೈಕ್ಯ ಸದ್ಗುರು ಹಾರಕೂಡ ಚನ್ನಬಸವ ಶಿವಯೋಗಿಗಳವರನೂತನಮೂರ್ತಿಯನ್ನು ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಅನಾವರಣಗೊಳಿಸಿ ಗೌರವ ಸಮರ್ಪಿಸಿದರು.ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ ಸೇರಿದಂತೆ ಗ್ರಾಮದ ಭಕ್ತರು ಉಪಸ್ಥಿತರಿದ್ದರು.



## ಉಮಾಶ್ರೀಗೆ ಸಚಿವ ಸ್ಥಾನ ನೀಡಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದ ಸರ್ಕಾರದಲ್ಲಿ ಮಾಜಿ ಸಚಿವೆ ಹಿರಿಯ ನಟಿ, ವಿಧಾನ ಪರಿಷತ್ ಶಾಸಕಿ ಉಮಾಶ್ರೀ ಅವರಿಗೆ ಸಚಿವ ಸ್ಥಾನ ನೀಡುವಂತೆ ಕಮತಗಿ ನೇಕಾರ ಸಮುದಾಯ ಒತ್ತಾಯಿಸಿದೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ನೇಕಾರ ಸಮುದಾಯದ ರಾಜ್ಯ ಯುವ ಮುಖಂಡ ವಿಜಯಕುಮಾರ ಭಾಪ್ರಿ, ನೇಕಾರ ಸಮುದಾಯ ರಾಜ್ಯದಲ್ಲಿ ಗಣನೀಯ ಜನಸಂಖ್ಯೆ ಹೊಂದಿದ್ದು, ರಾಜಕೀಯವಾಗಿ ಸೂಕ್ತ ಪ್ರಾತಿನಿಧ್ಯ ಸಿಗಬೇಕಾಗಿದೆ. ಹಿಂದುಳಿದ ನೇಕಾರ ಸಮುದಾಯದ ಉಮಾಶ್ರೀ ಅವರು ಈ ಹಿಂದೆ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ ಹೀಗಾಗಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದಿದ್ದಾರೆ. ನೇಕಾರ ಸಮುದಾಯ ಸೇರಿದಂತೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ಅವರ ಹಕ್ಕುಗಳಿಗಾಗಿ ಉಮಾಶ್ರೀ ಅವರು ಧ್ವನಿಯಾಗಬಲ್ಲರು ಎಂಬುದು ಸಮುದಾಯದ ಮುಖಂಡರ ಅಭಿಪ್ರಾಯ. ಈ ಹಿಂದೆ ಸಚಿವರಾಗಿ ನಿಭಾಯಿಸಿದ ಕಾರ್ಯಕ್ಕೆ ಅಂದಿನ ಕೇಂದ್ರದ ಸರ್ಕಾರದ ಗೌರವ ಪ್ರಶಂಸೆಗೆ ಉಮಾಶ್ರೀ ಪಾತ್ರರಾಗಿದ್ದಾರೆ ಹೀಗಾಗಿ ಉಮಾಶ್ರೀ ಅವರ ಹೆಸರನ್ನು ಎರಡನೇ ಪಟ್ಟಿಯಲ್ಲಿ ಪ್ರಮುಖ ಇಲಾಖೆಯ ಸಚಿವ ಸ್ಥಾನಕ್ಕೆ ಎಐಸಿಸಿ ಸೇರಿದಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರವರು ಪರಿಗಣಿಸಬೇಕೆಂದು ವಿಜಯಕುಮಾರ ಭಾಪ್ರಿ ಒತ್ತಾಯಿಸಿದ್ದಾರೆ.

**CITATION**
**IN THE COURT OF THE**
**I ADDL. CIVIL JUDGE AND JMFC.,**
**AT HUMNABAD.**
**CRL. MISC. No.2317/2026.**

**Petitioners:**
1.Ghalemma W/o late Devindra, Age: 69-yrs. Occu: Agriculture. R/o Village Talmadgi, Tq. Chitguppa. Dist. Bidar.
2.Prema D/o late Devindra, W/o Tukaram, Age: 44-yrs. Occu: Agriculture. R/o Village Janthi, Tq. Bhalki. Dist. Bidar.
3.Ramesh S/o late Devindra, Age: 43-yrs. Occu: Agriculture.
4.Shalivan S/o late Devindra, Age: 41-yrs. Occu: Agriculture.
Petitioner No.3 and 4 R/o Village Talmadgi, Tq. Chitguppa. Dist. Bidar.
5. Reshma D/o late Devindrappa W/o Prabhu, Age: 38-yrs. Occu: House hold. R/o Village Mugnoor, Tq. Humnabad. Dist. Bidar.
6.Surekha D/o late Devindra W/o Dhanraj, Age: 34-yrs, Occu: House hold. R/o Mailur ROAD Budhavihar GANDHI Gunj, Bidar.
7. Meenakshi D/o late Devindra, Age: 32-yrs. Occu: House hold.
8. Jayashree D/o late Devindra, Age: 29-yrs. Occu: House hold.
Petitioner No.7 and 8 R/o Village Talmadgi, Tq. Chitguppa. Dist. Bidar.

**Respondent:**
The Registrar of Birth and Death through the Tahasildar Chitguppa.
Sub:- Petition U/Sec. 13(3) of Birth and Death Registration Act-1969.

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No.1 to 8 by namely LATE. DEVINDRA S/O MAREPPA, he is died on 26.06.2024 at Village Talmadgi, Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 25.06.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 03-06-2026

**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad.**

**CITATION**
**IN THE COURT OF THE PRL. CIVIL JUDGE AND JMFC.,**
**AT HUMNABAD.**
**CRL. MISC. No.2323/2026.**

**Petitioners:**
1. Vishwanath S/o Manikappa, Age: 54-year,
2. Seetamma W/o Late Baburao, Age: 56-year,
3. Sridevi W/o Kalyanrao. Age: 50-year,
4. Rajakumar S/o Manikappa. Age: 52-year, All R/o Allur, Tq: Humnabad, Dist. Bidar.

**Respondent:**
The Registrar of Birth and Death through The Tahasildar Humnabad.
Sub:- Petition U/Sec. 13(3) of Birth and Death Registration Act-1969

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of Petitioner No.1 and Sister-in-law of petitioner No.2 and Younger sister of petitioner No.3 and Younger brother of petitioner No.4 by namely LATE. MANIKAPPA S/O SAIBANNA, who was died on 11.01.2025 at Village Allura. Tq. Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 28.07.2026 at 11.00 AM in person or any authorized pleader to answer such claim otherwise the matter will be heard and determined in your absence as ner law

Given under my hand and seal of he court, this the 04-06-2026

**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad**

**CITATION**
**IN THE COURT OF THE I ADDL. CIVIL JUDGE AND JMFC.,**
**AT HUMNABAD.**
**CRL. MISC. No.2316/2026.**

**Petitioners:**
Basavaraj S/o late Fakeerappa, Age: 38-year, Occu: Agriculture. R/o Village Mangalgi. Tq. Chitguppa.

Respondent:
The Registrar of Birth and Death through The Tahasildar Chitguppa.
Sub: Petition U/Sec. 13(3) of Birth and Death Registration Act-1969

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner Deceased by namely LATE. FAKEERAPPA S/O SAMBANNA, he was died on 18.10.2020 at Village Mangalgi, Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 25.06.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 03-06-2026.

**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad.**

# ಸಂಘದ ಅಭಿವೃದ್ಧಿಗೆ ಸದಸ್ಯರ ಸಹಕಾರವೇ ಮುಖ್ಯ: ಎಂ ನಾರಾಯಣ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ,ಬೆಂಗಳೂರು ಹಾಗೂ ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿ, ಯಾದಗಿರಿ ಹಾಗೂ ಸಹಕಾರ ಇಲಾಖೆ ಯಾದಗಿರಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಖಾನಾಪುರ ಇವರುಗಳ ಸಂಯುಕ್ತಾಶ್ರಯದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಜರುಗಿಸಲಾಯಿತು. ಸಹಕಾರ ಸಂಘಗಳ ಸದಸ್ಯರು ಸಾಲ ಪಡೆಯುವುದು ಅವರ ಹಕ್ಕು ಹಾಗೆಯೇ ಸಕಾಲಕ್ಕೆ ಸಾಲ ಮರುಪಾವತಿ ಮಾಡುವುದು ಸದಸ್ಯರ ಜವಾಬ್ದಾರಿ ಆಗಿರುತ್ತದೆ ಹಕ್ಕು ಮತ್ತು ಜವಾಬ್ದಾರಿ ಸುಲಲಿತವಾಗಿ ನಡೆದರೆ ಮಾತ್ರ ಸಹಕಾರಿ ಮಾತ್ರ ಸಹಕಾರಿ ಸಂಘಗಳಿಗೂ ಮತ್ತು ಸಾಲ ಪಡೆದವರಿಗೂ ಕ್ಷೇಮ ಎಂದು ಸಸಿಗೆ ನೀರು ಹಾಕುವುದರ ಮುಖಾಂತರ ಚಾಲನೆ ನೀಡಿ ಎಂ ನಾರಾಯಣ ಉಪಾಧ್ಯಕ್ಷರು ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿ, ಯಾದಗಿರಿ ಇವರು ಮಾತನಾಡಿದರು ಶ್ರೀಮತಿ ಬಸಮ್ಮ ಹೊರಮನಿ ಸಂಘದ ಅಧ್ಯಕ್ಷರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಆರ್ಥಿಕವಾಗಿ ಬಲಗೊಳ್ಳಲು ಅವುಗಳ ವ್ಯಾಪ್ತಿಯಲ್ಲಿ ಬರುವ ಸದಸ್ಯರಿಗೆ. ಅನುಕೂಲವಾಗುವಂತಹ. ವೈವಿಧ್ಯಮಯ, ಚಟುವಟಿಕೆಗಳನ್ನು. ವ್ಯಾಪಾರ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ವೈ ಪದ್ಮಾಕರ್ ಸಂಘದ ಮಾಜಿ ಅಧ್ಯಕ್ಷರು . ಮಾತನಾಡಿದರು, ಸದಸ್ಯರ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಹಕಾರಿ ಇಲಾಖೆಯಿಂದ ಸಿಗುವ ಬೇರೆ ಬೇರೆ ಇಲಾಖೆಯಿಂದ ಸಿಗುವ ಯೋಜನೆಗಳ ಉಪಯೋಗ ಪಡೆದುಕೊಳ್ಳಬೇಕೆಂದು ಹೊನ್ನಪ್ಪ ದೇವರಹಳ್ಳಿ ಮಾತನಾಡಿದರು ಸದಸ್ಯರ ಹಕ್ಕು ಕರ್ತವ್ಯ ಜವಾಬ್ದಾರಿ ಇಲಾಖೆಯ ಯೋಜನೆಗಳಾದ ಜನ ಔಷಧಿ ಕೇಂದ್ರ. ರಸಗೊಬ್ಬರ ಮಾರಾಟ. ಸಾಲ ವಿತರಣೆ. ಕೆಸಿಸಿ ಸಾಲ ಬಿಡಿಪಿ ಸಾಲ ಇವುಗಳ ಕುರಿತು ಶ್ರೀ ಪ್ರಶಾಂತ್ ಕುಮಾರ್ ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ ಯಾದಗಿರಿ ಇವರು ವಿಶೇಷವಾಗಿ ಉಪನ್ಯಾಸ ನೀಡಿದರು, ಮಹಾಮಂಡಳ ಮತ್ತು ಒಕ್ಕೂಟದ ಚಟುವಟಿಕೆಗಳ ಬಗ್ಗೆ ಪ್ರಾಸ್ತವಿಕವಾಗಿ ಹಾಗೂ ಕಾರ್ಯಕ್ರಮದ ನಿರೂಪಣೆ ಸ್ವಾಗತವನ್ನು ಶ್ರೀಮತಿ ಸುಜಾತ ಮಠ ಜಿಲ್ಲಾ ಸಹಕಾರ ಶಿಕ್ಷಕರು ಇವರು ನೆರವೇರಿಸಿದರು,ಮುಖ್ಯ ಅತಿಥಿಗಳಾಗಿ ಶರಣಪ್ಪ ಕವಲಿ. ಸಂಘದ ಉಪಾಧ್ಯಕ್ಷರು ವೆಂಕಟೇಶ್ ಕಾಶಿರಾಜ್ ಭಾಗವಹಿಸಿದ್ದರು ಕೊನೆಯಲ್ಲಿ ಬೀರಪ್ಪ ಸಂಘದ ಕಾರ್ಯದರ್ಶಿ ವಂದನಾರ್ಪಣೆ ನೆರವೇರಿಸಿದರು ಸಂಘದ ಸದಸ್ಯರು ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ದರ್ಶನಾಪೂರಗೆ ಸಚಿವ ಸ್ಥಾನ ಮುಂದುವರಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಶಹಾಪೂರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಪಕ್ಷದ ಹಿರಿಯ ಮುತ್ಸದ್ದಿ ಹಾಗೂ ಹಾಲಿ ಸಚಿವರಾಗಿರುವ ಶರಣಪ್ಪಗೌಡ ದರ್ಶನಾಪೂರ ಅವರನ್ನು ಮುಂಬರುವ ಸಚಿವ ಸಂಪುಟ ಪುನಾರಚನೆಯಲ್ಲಿ ಯಾವುದೇ ಕಾರಣಕ್ಕೂ ಸಚಿವ ಸ್ಥಾನದಿಂದ ಕೆಳಗಿಳಿಸಬಾರದು. ಅವರ ಮಂತ್ರಿ ಸ್ಥಾನವನ್ನ ಅವರು ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ತೀವ್ರವಾಗಿ ಎಂದು ಕಾಂಗ್ರೇಸ್ ಪಕ್ಷದ ಯುವ ಮುಖಂಡ ಸಿದ್ದು ಮುಂಡಾಸ್ ಹೇಳಿದರು. ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವವರು ಶರಣಪ್ಪಗೌಡ ದರ್ಶನಾಪೂರ ಅವರು ಕೇವಲ ಶಹಾಪೂರ ಕ್ಷೇತ್ರಕ್ಕಷ್ಟೇ ಸೀಮಿತರಾದ ನಾಯಕರಲ್ಲ. ಇಡೀ ಕಲ್ಯಾಣ ಕರ್ನಾಟಕ ಭಾಗದ ಮುಂಚೂಣಿ ನಾಯಕರಾಗಿದ್ದಾರೆ. ಯಾದಗಿರಿ ಜಿಲ್ಲೆಯ ಎಲ್ಲಾ ತಾಲೂಕುಗಳು ಇವರ ಸಂಘಟನಾ ಚಾತುರ್ಯದ ಬಿಗಿಮುಷ್ಟಿಯಲ್ಲಿದ್ದು, ಪಕ್ಷವನ್ನು ತಳಮಟ್ಟದಿಂದ ಗಟ್ಟಿಗೊಳಿಸಿದ್ದಾರೆ. ನೆರೆಯ ಕಲಬುರ್ಗಿ ಜಿಲ್ಲೆಯಲ್ಲಿಯೂ ಕಾಂಗ್ರೆಸ್ ಪಕ್ಷದ ಪರವಾಗಿ



ತಮ್ಮದೇ ಆದ ವಿಶೇಷ ಹಾಗೂ ಪ್ರಭಾವಿ ವರ್ಚಸ್ಸನ್ನು ಇವರು ಹೊಂದಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷವು ಸಾಧಿಸಿದ ಐತಿಹಾಸಿಕ ಫಲಿತಾಂಶದ ಹಿಂದೆ ಇವರ ಅಪಾರವಾದ ಕೊಡುಗೆ ಮತ್ತು ಅವಿರತ ಶ್ರಮ ಅಡಗಿದೆ. ಜನಸಾಮಾನ್ಯರ ಶಾಸಕ ಅಧಿಕಾರದ ಅಹಂಕಾರವಿಲ್ಲದ ಅತಿ ಸರಳ ಮತ್ತು ವಿರಳ ಶಾಸಕರಿವರು. ಎಷ್ಟೇ ಕಾರ್ಯದೊತ್ತಡವಿದ್ದರೂ, ಪ್ರತಿ ವಾರವೂ ತಪ್ಪದೆ ತಮ್ಮ ಕ್ಷೇತ್ರಕ್ಕೆ ಆಗಮಿಸಿ, ಜನಸಾಮಾನ್ಯರ ಕಷ್ಟಭ-ಕಾರ್ಪಣ್ಯಗಳಿಗೆ ಕಿವಿಯಾಗುವ ಹಾಗೂ ತಕ್ಷಣವೇ ಸ್ಪಂದಿಸುವ ಆಪತ್ಬಾಂಧವರಾಗಿದ್ದಾರೆ. ಒಬ್ಬ ಪ್ರಾಮಾಣಿಕ ಸರ್ಕಾರಿ ಶಾಲಾ ಶಿಕ್ಷಕನು ತನ್ನ ಕರ್ತವ್ಯವನ್ನು ಹೇಗೆ ಶ್ರದ್ಧೆ ಹಾಗೂ ಶಿಸ್ತಿನಿಂದ ಮಾಡುತ್ತಾನೋ, ಅದೇ ರೀತಿ ತಮ್ಮ ಜನಸೇವೆಯನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ಅಪರೂಪದ ನೈತಿಕ ರಾಜಕಾರಣಿ ಇವರಾಗಿದ್ದಾರೆ. ಇಂತಹ ಅಪಾರ ಜನಬೆಂಬಲ, ಪಕ್ಷನಿಷ್ಠೆ ಹಾಗೂ ಆಡಳಿತಾತ್ಮಕ ಅನುಭವ ಹೊಂದಿರುವ ನಾಯಕರನ್ನು ಸಂಪುಟದಿಂದ ಕೈಬಿಡುವ ಸಾಹಸಕ್ಕೆ ಸರ್ಕಾರ ಕೈಹಾಕಬಾರದು. ಒಂದು ವೇಳೆ ಅವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಿದರೆ, ಇಡೀ ಯಾದಗಿರಿ ಜಿಲ್ಲೆ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜನತೆಗೆ ತೀವ್ರ ಅನ್ಯಾಯ ಮಾಡಿದಂತಾಗುತ್ತದೆ. ಇದು ಅವರ ಅಪಾರ ಬೆಂಬಲಿಗರ ಆಕ್ರೋಶಕ್ಕೆ ಕಾರಣವಾಗಲಿದ್ದು, ಮುಂಬರುವ ದಿನಗಳಲ್ಲಿ ಸರ್ಕಾರದ ವಿರುದ್ಧ ತೀವ್ರ ಸ್ವರೂಪದ ಹೋರಾಟವನ್ನು ಎದುರಿಸಬೇಕಾಗುತ್ತದೆ,

ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ತಕ್ಷಣವೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ನಮ್ಮ ಭಾಗದ ಹೆಮ್ಮೆಯ ನಾಯಕರ ಸಚಿವ ಸ್ಥಾನವನ್ನು ಮುಂದುವರಿಸಬೇಕು ಎಂದು ಹೇಳಿದರು.

# ದರ್ಶನಾಪುರರಿಗೆ ಉನ್ನತ ಸಚಿವ ಸ್ಥಾನ ಕೊಡಿ : ಭೀಮಣ್ಣ ಮಾಸ್ಟರ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರಾಗಿದ್ದ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಉನ್ನತ ಸಚಿವ ಸ್ಥಾನ ನೀಡಬೇಕು ಎಂದು ಭೀಮಣ್ಣ ಮಾಸ್ತರ ಬುದನೂರ ಆಗ್ರಹಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಗಮನಕ್ಕೆ ಮನವಿ ಸಲ್ಲಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಕಳೆದ ಮೂರು ವರ್ಷಗಳಿಂದ ದರ್ಶನಾಪುರ ಅವರು ಸಚಿವರಾಗಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿ ಜನಮನ್ನಣೆ ಗಳಿಸಿದ್ದಾರೆ ಎಂದು ತಿಳಿಸಿದ್ದಾರೆ.



ಶಹಾಪುರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿರುವ ದರ್ಶನಾಪುರ ಅವರು ಸರ್ವ ಸಮುದಾಯದ ಜನರನ್ನು ವಿಶ್ವಾಸಕ್ಕೆ ತೆ-ಗೆದುಕೊಂಡು ಯಾದಗಿರಿ ಜಿಲ್ಲೆಯ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಿದ್ದಾರೆ.

ಶಾಸಕರಾಗಿ ಹಾಗೂ ಸಚಿವರಾಗಿ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದು ಈ ಭಾಗದ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ ಎಂದು ಅವರು ಪ್ರಶಂಸಿಸಿದ್ದಾರೆ.

ಸುಮಾರು ನಾಲ್ಕು ದಶಕಗಳ ರಾಜಕೀಯ ಅನುಭವ ಹೊಂದಿರುವ ದರ್ಶನಾಪುರ ಅವರು ಬಡಜನರ ಸಮಸ್ಯೆಗಳಿಗೆ ಸ್ಪಂದಿಸಿ, ಅಭಿವೃದ್ಧಿ ಕಾರ್ಯಗಳ ಮೂಲಕ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಆಡಳಿತಾತ್ಮಕ ಅನುಭವ ಮತ್ತು ಅಭಿವೃದ್ಧಿ ಪರ ದೃಷ್ಟಿಕೋನ ಹೊಂದಿರುವ ಅವರಿಗೆ ಸಚಿವ ಸಂಪುಟದಲ್ಲಿ ಹೆಚ್ಚಿನ ಜವಾಬ್ದಾರಿ ನೀಡಿದರೆ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದೆ ಎಂದು ಅಭಿ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ಆದ್ದರಿಂದ ರಾಜ್ಯದ ಸಚಿವ ಸಂಪುಟದಲ್ಲಿ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಉನ್ನತ ಸಚಿವ ಸ್ಥಾನ ಹಾಗೂ ಪ್ರಮುಖ ಖಾತೆಯನ್ನು ನೀಡುವ ಮೂಲಕ ಕಾಂಗ್ರೆಸ್ ಹೈಕಮಾಂಡ್ ಗೌರವಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ದರ್ಶನಾಪುರವರಿಗೆ ಸಚಿವ ಸ್ಥಾನ ಕೊಡಿ: ರಾಜ್ ಪಟೇಲ್ ಬುದನೂರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ರಾಜ್ಯ ಸರ್ಕಾರದಲ್ಲಿ ಸಣ್ಣ ಕೈಗಾರಿಕೆ ಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಶರಣಬಸಪ್ಪಗೌಡ ದರ್ಶನಾಪುರ ಅವರು ಪಕ್ಷ ಸಂಘಟನೆ ಹಾಗೂ ಜನಪರ ಅಭಿವೃದ್ಧಿ ಕಾರ್ಯಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದು, ಅವರನ್ನು ಸಂಪುಟ ದರ್ಜೆಯಲ್ಲಿ ಮುಂದುವರಿಸುವುದರ ಜೊತೆಗೆ ಉಪಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂದು ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಾಜ ಪಟೇಲ್ ಬೂದನೂರ್ ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಯಾದಗಿರಿ ಜಿಲ್ಲೆಯಲ್ಲಿ ನೀರಾವರಿ ಸೇರಿದಂತೆ ಹತ್ತು ಹಲವು ಜನಪರ, ರೈತರ ಪರ ಯೋಜನೆಗಳನ್ನು ತರುವ ಮೂಲಕ ಅಭಿವೃದ್ಧಿ ಕಾಮಗಾರಿಗಳ ರೂವಾರಿಯಾಗಿರುವ ಶರಣಬಸಪ್ಪ ದರ್ಶನಾಪುರ ಅವರನ್ನು ಸಚಿವ ಸಂಪುಟದಿಂದ ಯಾವುದೇ ಕಾರಣ-ಕ್ಕೂ ಕೈ ಬಿಡದೆ ಪಕ್ಷದ ವರಿಷ್ಠರು ದರ್ಶನಾಪುರ ಅವರನ್ನೇ ಸಚಿವರನ್ನಾಗಿ ಮುಂದುವರೆಸುವಂತೆ ಆಗ್ರಹಿಸಿದ್ದಾರೆ.



ಯಾದಗಿರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆ ಹಾಗೂ ಚುನಾವಣೆ ಸಮಯದಲ್ಲಿ ಯುವಕರನ್ನು ಉತ್ಸಾಹದಿಂದ ನಮ್ಮೆಲ್ಲರ ಕಂಡು ಶ್ರೇಯಸ್ಸನ್ನು ಬಯಸಿದ ಶಹಾಪುರ ಕ್ಷೇತ್ರದ ಶಾಸಕರಾಗಿ ಅನೇಕ ಕ್ರಿಯಾಶೀಲ ಕಾರ್ಯಗಳನ್ನು ಮಾಡಿರುವ ದರ್ಶನಾಪುರ ಅವರನ್ನು ಸಚಿವರ ಸ್ಥಾನದಲ್ಲೇ ಉಳಿಸಿಕೊಂಡು ಮುಂದುವರೆಸಬೇಕೆಂದು ಶಾಸಕರಾಗಿ ಮೂರು ಬಾರಿ ಸಚಿವರಾಗಿ ರಾಜ್ಯದಲ್ಲಿ ಉತ್ತಮವಾದ ಅಭಿವೃದ್ಧಿ ಕೆಲಸ ಮತ್ತು ಯಾದಗಿರಿ ಜಿಲ್ಲೆ ಮತ್ತು ಸವಾರ್ಂಗಣ ಅಭಿವೃದ್ಧಿಗಾಗಿ ಸಾಕಷ್ಟು ಮೂರು ವರ್ಷದಲ್ಲಿ ಅಭಿವೃದ್ಧಿ ಕೆಲಸವನ್ನು ಮಾಡಿದ್ದಾರೆ ಮತ್ತು ವಿಶೇಷವಾಗಿ ದಿನನಿತ್ಯ ಸಾರ್ವಜನಿಕರಿಗೆ ಭೇಟಿಯನ್ನು ಸೌಜನ್ಯತೆ ಮಾಡುವಂತ ಕೂಡ ಅವರದಾಗಿದ್ದು ಮತ್ತು ಇಂಥ ಒಬ್ಬ ನಾಯಕರನ್ನು ಸಚಿವ ಸಂಪುಟದಲ್ಲಿ ತೆ-ಗೆದುಕೊಂಡರೆ ಯಾದಗಿರಿ ಜಿಲ್ಲೆಯ ಸಾಕಷ್ಟು ಅಭಿವೃದ್ಧಿ ಆಗುತ್ತದೆ ಮತ್ತು ಕಾಂಗ್ರೆಸ್ ಪಕ್ಷದ ಎಲ್ಲಾ ಕಾರ್ಯಕರ್ತರಿಗೆ ಅನುಕೂಲವಾಗಲಿದೆ ಇಂಥ ಒಬ್ಬ ನಾಯಕನನ್ನು ಸಚಿವ ಸಂಪುಟದಲ್ಲಿ ಮುಂದುವರಿಸಬೇಕು ಎಂದು ಯಾದಗಿರಿ ಜಿಲ್ಲೆಯ ಜನರ ಆಸೆಯಾಗಿದ್ದು ಅದಕ್ಕಾಗಿ ಕರ್ನಾಟಕ ಸರ್ಕಾರದಲ್ಲಿ ಮತ್ತೆ ಅವರನ್ನು ಸಚಿವ ಸಂಪುಟದಲ್ಲಿ ಮುಂದುವರಿಸಬೇಕೆಂದು ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಾಜ್ ಪಟೇಲ್ ಬೂದನೂರ್ ಒತ್ತಾಯಿಸಿದ್ದಾರೆ.

# ಡಾ.ಅಜಯ್ ಸಿಂಗ್‌ಗೆ ಸಚಿವ ಸ್ಥಾನ ಕೊಡುವಂತೆ:ಸಂಜೀವ್ ಐರೆಡ್ಡಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಜೇವರ್ಗಿ ಮತಕ್ಷೇತ್ರದ ಜನಪ್ರಿಯ ಶಾಸಕರು ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ. ಅಜಯ್ ಸಿಂಗ್ ರವರಿಗೆ ಎರಡನೇ ಅವಧಿಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಉನ್ನತ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಪಕ್ಷದ ಯುವ ಮುಖಂಡ ಸಂಜೀವ್.ಎಸ್ ಐರೆಡ್ಡಿ ಬೆಂಡೆಬೆಂಬಳಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ ಒತ್ತಾಯಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಡಾ.ಅಜಯ್ ಸಿಂಗ್ ರವರು ಕಾಂಗ್ರೆಸ್ ಪಕ್ಷದ ಏಳಿಗೆಗಾಗಿ ಹಗಲು ಇರುಳು ಎನ್ನದೆ ಶ್ರಮಿಸಿದ್ದಾರೆ. ಕಾಂಗ್ರೆಸ್ ಪಕ್ಷ ನೀಡಿದ ಜವಾಬ್ದಾರಿಯನ್ನು ಅತ್ಯಂತ ಹಚ್ಚುಕಟ್ಟಾಗಿ ನಿರ್ವಹಿಸಿ ಜೇವರ್ಗಿ ಮತಕ್ಷೇತ್ರ ಮತ್ತು ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.ಇವರು ಯಾವುದೇ ಫಲಾಪೇಕ್ಷೆ ಇಲ್ಲದೆ ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ಟೊಂಕ ಕಟ್ಟಿನಿಂತಿದ್ದಾರೆ.ಅವರು ಹಲವು ಬಾರಿ ಶಾಸಕರಾಗಿ ಉತ್ತಮವಾದ ಸೇವೆ ಸಲ್ಲಿಸಿದ್ದಾರೆ ಇವರಿಗೆ ಸಚಿವ ಸ್ಥಾನ ನೀಡಿದ್ದೆ ಆದಲ್ಲಿ ಮತ್ತಷ್ಟು ರಾಜ್ಯ ಮತ್ತು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪುರಕವಾಗುತ್ತದೆ. ಕಾಂಗ್ರೆಸ್ ಪಕ್ಷಕ್ಕೆ ಶಾಸಕ ಡಾ. ಅಜಯ್ ಸಿಂಗ್ ರವರ ತಂದೆಯವರಾದ ಮಾಜಿ ಮುಖ್ಯಮಂತ್ರಿ ದಿವಂಗತ ಧರ್ಮಸಿಂಗ್ ರವರ ಕೊಡುಗೆ ಅಪಾರವಾಗಿದೆ ಆದ್ದರಿಂದ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಇವರ ಸೇವೆಯನ್ನು ಗುರುತಿಸಿ ಎರಡನೇ ಅವಧಿಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಉನ್ನತ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಯುವ ಮುಖಂಡ ಸಂಜೀವ್ ಐರೆಡ್ಡಿ ಬೆಂಡೆಬೆಂಬಳಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿಕೊಂಡಿದ್ದಾರೆ.

# ಜಮೀರ್ ಅಹ್ಮದಖಾನ್‌ಗೆ ಸಚಿವ ಸ್ಥಾನ ಕೊಡಿ : ಸುದರ್ಶನ ಪಾಟೀಲ ಮನವಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಎಲ್ಲಾ ಜಾತಿ, ಧರ್ಮ ಹಾಗೂ ಸಮುದಾಯಗಳನ್ನು ಸಮಾನವಾಗಿ ಕಾಣುವ, ಸಮಾಜದ ಎಲ್ಲ ವರ್ಗಗಳಿಗೂ ಗೌರವ ನೀಡುವ, ನೇರ ಹಾಗೂ ದಿಟ್ಟ ಮಾತುಗಳಿಂದ ಜನಮನ ಗೆದ್ದಿರುವ ಹಿರಿಯ ಕಾಂಗ್ರೆಸ್ ನಾಯಕ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು, ಮುಸ್ಲಿಂ ಸಮುದಾಯವನ್ನು ಒಗ್ಗೂಡಿಸಿ ಮತ ಚಲಾವಣೆಗೊಳಿಸಿದ ಹಾಗೂ ಶಾಸಕ ಜಮೀರ್ ಅಹ್ಮದ್ ಖಾನ್ ಅವರನ್ನು ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವರಾಗಿ ಸೇರ್ಪಡೆಗೊಳಿಸಬೇಕು ಎಂದು ಗುರುಮಠಕಲ್ ಕ್ಷೇತ್ರದ ಅಹಿಂದ ವರ್ಗದ ಯುವ ನಾಯಕ ಹಾಗೂ ಮಾಜಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಸುದರ್ಶನ ಪಾಟೀಲ ಜೈಗ್ರಾಮ್ ಆಗ್ರಹಿಸಿದ್ದಾರೆ. ಈ ಕುರಿತು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸುವುದಾಗಿ ಅವರು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಮುಸಲ್ಮಾನರ ಕೊಡುಗೆ ಅಪರವಾಗಿದೆ, ಅಲ್ಪಸಂಖ್ಯಾತರು ಎಂದು ಗುರುತಿಸಿಕೊಂಡಿರುವ ಅವರು ಒಗ್ಗಟ್ಟಾಗಿ ಈ ಪಕ್ಷಕ್ಕೆ ಒಟ್ಟು 90% ಮತಗಳನ್ನು ಚಲಾಯಿಸಿದ ಕೀರ್ತಿ ಜಮೀರ್ ಅಹಮ್ಮದ್ ಖಾನ್ ರವರಿಗೆ ದೊರೆಯುತ್ತದೆ. ಇದು ವಾಸ್ತವದ ಸುದ್ದಿ ಎಲ್ಲರಿಗೂ ಗೊತ್ತಿರುವ ವಿಷಯ ಜಮೀರ್ ಅಹ್ಮದ್ ಖಾನ್ ಅವರ ಪರಿಶ್ರಮ ಮತ್ತು ಶಕ್ತಿ ಬಹಳಷ್ಟು ಕಾಂಗ್ರೆಸ್ ಪಕ್ಷಕ್ಕೆ ಇದೆ ಎಂಬುದು ಯಾರು ಮರೆಯಬಾರದು. ಜಮೀರ್ ಅಹ್ಮದ್ ಖಾನ್ ಅವರು ಅಹಿಂದ ವರ್ಗಗಳ ಧ್ವನಿಯಾಗಿ ಕೆಲಸ ಮಾಡುತ್ತಿದ್ದು, ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರು ಹಾಗೂ ಸಮಾಜದ ಎಲ್ಲ ವರ್ಗಗಳ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ನಾಯಕರಾಗಿದ್ದಾರೆ. ಅವರ ರಾಜಕೀಯ ಅನುಭವ, ಪಕ್ಷದ ಸಂಘಟನೆಗೆ ನೀಡಿರುವ ಕೊಡುಗೆ ಹಾಗೂ ಜನಪರ ಕಾರ್ಯಗಳನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಸುದರ್ಶನ ಪಾಟೀಲ ಒತ್ತಾಯಿಸಿದ್ದಾರೆ. ರಾಜ್ಯದ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಜಮೀರ್ ಅಹ್ಮದ್ ಖಾನ್ ಅವರಂತಹ ಅನುಭವಿ ನಾಯಕರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಅಹಿಂದ ವರ್ಗದ ಜನರಲ್ಲಿ ಜಮೀರ್ ಅಹ್ಮದ್ ಖಾನ್ ಅವರಿಗೆ ವಿಶೇಷ ಬೆಂಬಲವಿದ್ದು, ಅವರ ಸೇವೆಯನ್ನು ಗುರುತಿಸಿ ಸಚಿವ ಸ್ಥಾನ ನೀಡುವ ಮೂಲಕ ಪಕ್ಷವು ಕಾರ್ಯಕರ್ತರ ಹಾಗೂ ಜನರ ನಿರೀಕ್ಷೆಯನ್ನು ಈಡೇರಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್‌ಗೆ ಕಳಕಳಿಯ ಮನವಿ ಮಾಡಿದ್ದಾರೆ.

# ಗ್ರೀನ್ ಪಾರ್ಕ್ ಉದ್ಯಾನವನ ವೀಕ್ಷಿಸಿದ ಬಯ್ಯಾಪುರ

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ



ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಹುಲಿಗುಡ್ಡದ ಸುಮಾರು 1.80 ರೂ ಕೋಟಿ ವೆಚ್ಚದಲ್ಲಿ ನಿರ್ಮಾಣ ಹಂತದಲ್ಲಿರುವ ಗ್ರೀನ್ ಗಾರ್ಡನ್ ಉದ್ಯಾನವನ ಅಭಿವೃದ್ಧಿಯ ಕಾಮಗಾರಿಯನ್ನು ವಿಧಾನಪರಿಷತ್ತ ಸದಸ್ಯರಾದ ಶ್ರೀ ಶರಣಗೌಡ ಪಾಟೀಲ ಬಯ್ಯಾಪುರ ಸೋಮವಾರದಂದು ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು ಕಾಮಗಾರಿಯು ವಿವಿಧ ಹಂತಗಳನ್ನು ವೀಕ್ಷಿಸಿದ ಬಳಿಕ ಅಧಿಕಾರಿಗಳೊಂದಿಗೆ ಚರ್ಚಿಸಿದ ಗ್ರೀನ್ ಗಾರ್ಡನ್ ಉದ್ಯಾನವನ ಮನರಂಜನೆ ಹಾಗೂ ಪರಿಸರ ಸಂರಕ್ಷಣೆಗೆ ಪೂರಕವಾಗಿರುವ ಮಹತ್ವದ ಯೋಜನೆಯಾಗಿದೆ ಎಂಬುದಾಗಿ ಹೇಳಿದರು ಉದ್ಯಾನವನ್ನು ಗುಣಮಟ್ಟದ ಕಾಮಗಾರಿ ಯೊಂದಿಗೆ ಅಭಿವೃದ್ಧಿಪಡಿಸಿ ನಿಗದಿತ ಅವಧಿ ಒಳಗೆ ಪೂರ್ಣಗೊಳಿಸಬೇಕೆಂದು ಹೇಳಿದರು ಕಾಮಗಾರಿಯ ವಿವರ ವಾಕಿಂಗ್ ಟ್ರ್ಯಾಕ್ ಕುಳಿತುಕೊಳ್ಳುವ ವ್ಯವಸ್ಥೆ ಮಕ್ಕಳ ಆಟದ ಪರಿಕರಗಳು ಮಕ್ಕಳು ಹಾಗೂ ಯುವಕರಿಗೆ ವಿವಿಧ ಆಟಿಕೆಯ ಮೂಲ ಸೌಕರ್ಯಗಳು ಹಿರಿಯ ನಾಗರಿಕರಿಗೆ ವಿಶ್ರಾಂತಿ ಹಾಗೂ ಮನೋರಂಜನ ಕೇಂದ್ರವಾಗಿ ರೂಪಗೊಳ್ಳಬೇಕೆಂದು ತಿಳಿಸಿದರು. ಈ ವೇಳೆ ಅರಣ್ಯ ಸಂರಕ್ಷಣಾಧಿಕಾರಿ ಸುರೇಶಬಾಬು ವಲಯ ಅರಣ್ಯ ಅಧಿಕಾರಿ ಸುಭಾಷ ಚಂದ್ರ ನಾಯಕ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಕರಡಕಲ್ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಪಾಮಯ್ಯ ಮುರಾರಿ ಟಿಎಪಿಎಂಎಸ್‌ನ ಅಧ್ಯಕ್ಷರಾದ ಶಶಿಧರ್ ಪಾಟೀಲ್ ಆಶಿಹಾಳ. ಸೋಮಶೇಖರ ಐದನಾಳ ಬಸವರಾಜಗೌಡ ಗಣೇಕಲ್ ಪ್ರಮೋದ್ ಕುಲಕರ್ಣಿ ಜಗದೀಶ ಪಾಟೀಲ ಪ್ರಕಾಶ ಕುರಿ ಅನಿಷ ಪಾಶ ಸಿದ್ದಪ್ಪ ಪರಂಗಿ ವಿಧಾನ ಪರಿಷತ್ತು ಆಪ್ತ ಕಾರ್ಯದರ್ಶಿ ಚೆನ್ನಾರೆಡ್ಡಿ ಬಿರಾದಾರ ಉಪಸ್ಥಿತರಿದ್ದರು

# ವಿಕಲಚೇತನರ ಸ್ವಾವಲಂಬಿ ಬದುಕಿಗೆ ಕೌಶಲ್ಯ ತರಬೇತಿ: ಉತ್ಪನ್ನಗಳ ಖರೀದಿಗೆ ಸಾರ್ವಜನಿಕರಿಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಜೂ. 8: ಎಪಿಡಿ ಸಂಸ್ಥೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೆಟಿ) ಸಹಯೋಗದಲ್ಲಿ ಗುರುಮಠಕಲ್‌ನಲ್ಲಿ ವಿಕಲಚೇತನರಿಗಾಗಿ ಹಮ್ಮಿಕೊಂಡಿರುವ 12 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರ ಯಶಸ್ವಿಯಾಗಿ ನಡೆಯುತ್ತಿದೆ.ಜೂನ್ 1ರಿಂದ ಆರಂಭವಾಗಿರುವ ಈ ತರಬೇತಿ ಶಿಬಿರದಲ್ಲಿ 30 ಮಂದಿ ವಿಕಲಚೇತನರು ಭಾಗವಹಿಸಿದ್ದು, ಪೇಪರ್ ಕವರ್, ಆಫೀಸ್ ಫೈಲ್ ಹಾಗೂ ಕೋರ್ಟ್ ಫೈಲ್ ತಯಾರಿಕೆ ಕುರಿತು ಪ್ರಾಯೋಗಿಕ ತರಬೇತಿ ಪಡೆಯುತ್ತಿದ್ದಾರೆ. ತರಬೇತಿಯ ಜೊತೆಗೆ ತಯಾರಿಸಿದ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸುವುದು, ಮಾರಾಟ ಕೌಶಲ್ಯ ಬೆಳೆಸಿಕೊಳ್ಳುವುದು ಹಾಗೂ ಸ್ವಯಂ ಉದ್ಯೋಗ ಆರಂಭಿಸುವ ಕುರಿತು ವಿಶೇಷ ಮಾರ್ಗದರ್ಶನ ನೀಡಲಾಗುತ್ತಿದೆ.ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಪನ್ಮೂಲ ವ್ಯಕ್ತಿ ಅಬ್ದುಲ್ಲಾ ಶೇಖ್ ಅವರು ತರಬೇತಿ ನೀಡುತ್ತಿದ್ದು, ವಿಕಲಚೇತನರು ತಮ್ಮ ಕೌಶಲ್ಯದ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಉತ್ತೇಜಿಸುತ್ತಿದ್ದಾರೆ. ತರಬೇತಿ ಶಿಬಿರವು ಜೂನ್ 13ರವರೆಗೆ ಮುಂದುವರಿಯಲಿದ್ದು, ಅಂದು ಸಮಾರೋಪ ಸಮಾರಂಭ ನಡೆಯಲಿದೆ.ಈ ಸಂದರ್ಭದಲ್ಲಿ ತರಬೇತಿ ಪಡೆಯುತ್ತಿರುವ ವಿಕಲಚೇತನರು ತಯಾರಿಸಿದ ಆಫೀಸ್ ಬಳಕೆಯ ಫೈಲ್‌ಗಳು ಹಾಗೂ ಇತರೆ ಸಾಮಗ್ರಿಗಳನ್ನು ಯಾದಗಿರಿ ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳು, ಕಾಲೇಜುಗಳು, ಪುರಸಭೆಗಳು, ಗ್ರಾಮ ಪಂಚಾಯಿತಿಗಳು, ತಾಲೂಕು ಪಂಚಾಯಿತಿಗಳು, ತಹಸೀಲ್ ಕಚೇರಿಗಳು ಹಾಗೂ ವಿವಿಧ ಸಂಸ್ಥೆಗಳು ಖರೀದಿಸುವ ಮೂಲಕ ಪ್ರೋತ್ಸಾಹಿಸಬೇಕು ಎಂದು ಎಪಿಡಿ ಸಂಸ್ಥೆ ಮನವಿ ಮಾಡಿದೆ.ವಿಕಲಚೇತನರು ತಯಾರಿಸಿದ ಉತ್ಪನ್ನಗಳ ಖರೀದಿಯಿಂದ ಅವರಿಗೆ ಆದಾಯದ ಮೂಲ ಸಿಗುವುದರ ಜೊತೆಗೆ ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಲು ಅವಕಾಶ ದೊರೆಯಲಿದೆ. ಸಮಾಜದ ವಿವಿಧ ವಲಯಗಳು ಈ ಕಾರ್ಯಕ್ಕೆ ಕೈಜೋಡಿಸಿದರೆ ವಿಕಲಚೇತನರ ಸ್ವಾವಲಂಬಿ ಬದುಕಿನ ಕನಸು ನನಸಾಗಲಿದೆ ಎಂದು ಎಪಿಡಿ ಸಂಸ್ಥೆಯ ತಾಲೂಕ ಸಂಯೋಜಕ ವಿರೂಪಾಕ್ಷ ಮಾಲಿಪಾಟೀಲ್ ಅಭಿಪ್ರಾಯಪಟ್ಟು ಯಾದಗಿರಿ ಜಿಲ್ಲೆಯವರು ಖರೀದಿಗೆ 9880666117 ಸಂಖ್ಯೆಗೆ ಸಂಪರ್ಕಿಸಲು ಕೋರಿದ್ದಾರೆ.

# ಮೊಹರಂ ಹರಾಜು ಪ್ರಕ್ರಿಯೆ ಮುಂದೂಡಿಕೆ

• ಮಲ್ಲಮ್ಮ ನುಡಿ ವಾರ್ತೆಮುದಗಲ್



ಮೊಹರಂ ಮಹಾರಾಜ ಪ್ರಕ್ರಿಯೆ ಮುಂದೂಡಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಕೆಎಂಎಸ್ ಪ್ರವೀಣ್ ಕುಮಾರ ಭೋಗಾರ್ ಶನಿವಾರ ಹೇಳಿದರು.

ಪಟ್ಟಣದ ಪುರಸಭೆ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ಮೊಹರಂ ಹರಾಜು ಪ್ರಕ್ರಿಯಲ್ಲಿ ಮಾತನಾಡಿದರು. ಹರಾಜು ಪ್ರಕ್ರಿಯೆಯಲ್ಲಿ ಇಬ್ಬರು ಭಾಗವಹಿಸಿದ್ದರು.

ನೆಲಬಾಡಿಗೆ ಹಾಗೂ ಜೋಕಾಲಿ ಹಾಕುವ ಬಿಡ್ಡದಾರರು ದಾಖಲಾತಿಗಳು ಸರಿಯಾಗಿ ಸಲ್ಲಿಸದ ಕಾರಣ ಹರಾಜು ಪ್ರಕ್ರಿಯೆ ಮುಂದೂಡಲಾಗಿದೆ ಎಂದು ತಿಳಿಸಿದರು.ಪುರಸಭೆ ಸಿಬ್ಬಂದಿಗಳು ಹಾಗೂ ಬಿಡ್ಡಾರರು ಇದ್ದರು.

# ಪರಿಸರ ಸಂರಕ್ಷಣೆಗೆ ವಿದ್ಯಾರ್ಥಿಗಳು ಮುಂದಾಗಲಿ: ಪ್ರಕಾಶ ಅಂಗಡಿ

• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ



ಜೂ.8: ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣ ನಿರ್ಮಾಣ ಇಂದಿನ ಅಗತ್ಯವಾಗಿದ್ದು, ವಿದ್ಯಾರ್ಥಿಗಳು ಪರಿಸರದ ಬಗ್ಗೆ ಪ್ರೀತಿ, ಕಾಳಜಿ ಮತ್ತು ಜವಾಬ್ದಾರಿಯನ್ನು ಬೆಳೆಸಿಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಪ್ರಕಾಶ ಅಂಗಡಿ ಹೇಳಿದರು.ತಾಲೂಕಿನ ಕನ್ನೆಳ್ಳಿ ಗ್ರಾಮದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಸರ್ಕಾರಿ ಪ್ರೌಢಶಾಲೆ ಕನ್ನೆಳ್ಳಿ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಾನವನ ಆರೋಗ್ಯಕರ ಬದುಕಿಗೆ ಶುದ್ಧ ಗಾಳಿ, ನೀರು ಹಾಗೂ ಸಮತೋಲಿತ ಪರಿಸರ ಅತ್ಯಗತ್ಯವಾಗಿದೆ. ಮರ-ಗಿಡಗಳು ಪರಿಸರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡ ನೆಟ್ಟು ಅದರ ಪೋಷಣೆ ಮಾಡುವ ಸಂಕಲ್ಪ ಕೈಗೊಳ್ಳಬೇಕು ಎಂದು ಅವರು ಕರೆ ನೀಡಿದರು.ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಸಂಯೋಜಕ ನಾಗೇಶ್ ಮಾತನಾಡಿ, ಸಂಸ್ಥೆಯ ವತಿಯಿಂದ ಪ್ರತಿವರ್ಷ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ಪ್ರಧಾನಗುರು ಬಸಯ್ಯಸ್ವಾಮಿ, ಶಿಕ್ಷಕ ಮಲ್ಲಿಕಾರ್ಜುನ, ಯೋಜನೆಯ ವಲಯ ಸಂಯೋಜಕ ಬಸವರಾಜ, ಗ್ರಾಮದ ಸಿದ್ದಯ್ಯಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ವಿನೋದ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ದುಶ್ಚಟಗಳ ದಾಸರಾಗಬೇಡಿ : ಡಾ.ವೀವೇಕ್



• **ಮಲ್ಲಮ್ಮ ನುಡಿ ವಾರ್ತೆಯಲಬುರ್ಗಾ**

ದುಶ್ಚಟಗಳ ದಾಸರಾಗಬೇಡಿ, ಕೆಟ್ಟ ಹವ್ಯಾಸಗಳಿಂದ ದೂರವಿದ್ದಾಗ ಜೀವನದಲ್ಲಿ ನೆಮ್ಮದಿ ಶಾಂತಿ ಪಡೆದುಅರೋಗ್ಯವಂತರಾಗಲು ಸಾದ್ಯವಾಗುತ್ತದೆಎಂದು ಡಾ.ವೀವೇಕ ವಾಗಲೇ ಅವರು ಮೆ.5 ರಂದು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆಯ ಸಹಕಾರದಲ್ಲಿ ಜರುಗಿದ ಯಲಬುರ್ಗಾ ತಾಲೂಕಿನ ಬಂಡಿ ಗ್ರಾಮದ ಆಂಜನೇಯ ದೇವಸ್ಥಾನದಲ್ಲಿ ಸ್ವಾಸ್ಥ್ಯ ಸಂಕಲ್ಪ, ತಂಬಾಕು ವಿರೋಧಿದಿನಾಚರಣಾಯ ಕಾರ್ಯಕ್ರಮದಲ್ಲಿ ಅದ್ಯಕ್ಷತೆವಹಿಸಿ ಮಾತನಾಡಿದರು. ಯುವ ಸಮುದಾಯ ಮೋಜಿಗಾಗಿ ತಂಬಾಕುಗಳಿಂದ ತಯಾರಾದಬೀಡಿ, ಸೀಗರೇಟ ಸೇದುವಅಭ್ಯಾಸಕ್ಕೆಅಂಟಿಕೊಂಡು ಇದರ ಜೋತೆಗೆ ಗುಟಕಾಗಳನ್ನು ತಿನ್ನುತ್ತಾ, ಅತಿಯಾದ ಚಟಗಳಿಂದ 'ಕ್ಯಾನ್ಸರರೋಗಳಿಗೆತುತ್ತಾಗಿ ಚಟಗಳಿಗೆ ದಾಸರಾಗಿ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳಬೇಡಿ ಎಂದು ತಾಲೂಕಾಯೋಜನಾಧಿಕಾರಿ ಗಣೇಶ ಅವರು ದೀಪಬೇಳಗಿಸಿ ಮಾತನಾಡಿದರು.

ಮೇಲ್ವಿಚಾರಕಿ ಕಾವ್ಯ ಸಿರಿಗೇರಿ, ಆರೋಗ್ಯ ಇಲಾಖೆಯ ಯಲ್ಲಪ್ಪತಳವಾರ, ವೀರಣ್ಣ ಅಂಗಡಿ ಹಾಗು ಶಿಕ್ಷಕರಾದ ಶರಣಗೌಡ ಮಾಲಿಪಾಟೀಲ್, ಉಮೇಶ ತಳ್ಳಿಕೇರಿಹಾಗು ಸೇವಾಪ್ರತಿನಿದಿಗಳಾದ ರತ್ನಾ, ಪ್ರೇಮಾ ಸೇರಿದಂತೆ ಇತರರು ಇದ್ದರು.

# ದಂಡದಲ್ಲಿ ಶೇ.50 ಪಾವತಿಗೆ ಅವಕಾಶ ಸದುಪಯೋಗಕ್ಕೆ ಕರೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ**



ಕರ್ನಾಟಕ ರಾಜ್ಯದ ಸಾರಿಗೆ ಇಲಾಖೆಯಲ್ಲಿ 1991 ರಿಂದ 2022ರ ಅವಧಿಯಲ್ಲಿ ಮೋಟಾರು ವಾಹಾನ ಕಾಯ್ದೆ /ನಿಯಮಗಳ ಉಲ್ಲಂಘನೆ ಸಂಬಂಧ ದಾಖಲಾಗಿ.ಬಾಕಿ ಇರುವ ಡಿ.ಎಸ್.ಎ (ಇಲಾಖಾ ಶಾಸನ)ಪ್ರಕರಣಗಳ ದಂಡದ ಮೊತ್ತದಲ್ಲಿ 50%(ಶೇ.ಐವತರಷ್ಟು ಮಾತ್ರ) ರಿಯಾಯಿತಿ ನೀಡಿ ದಿನಾಂಕ.21-06-2026 ರಿಂದ 10-07-2026 ರವರೆಗೆ ಕಾಲಾವಕಾಶ ನೀಡಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ವಾಹನ ಮಾಲೀಕರುಗಳು ಇದರ ಸದುಪಯೋಗ ಪಡೆದುಕೊಳ್ಳಲು ಈ ಮೂಲಕ ಕೋರಿದೆ ಹಾಗಾಗಿ ಬೀದರ ಜಿಲ್ಲೆಯ ಭಾರಿ ವಾಹನ.ಗುಡ್ಸ ವಾಹನ ಮತ್ತು ಇನ್ನು ಹಲಾವರು ವಾಹನದ ಮಾಲಿಕರು ತಮ್ಮ ವಾಹನದ ಮೇಲೆ ಕೇಸ ಇದ್ದರೆ ಈ ಯೋಜನೆ ಸದುಪಯೋಗ ಪಡೆದುಕೋಳ್ಳಬೆಕೆಂದು ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಹ್ಮದ ಜಾಫರ್ ಸಾದ್ದಿಕ್ ಅವರು ವಾಹನ ಮಾಲಿಕರಲ್ಲಿ ಪತ್ರಿಕೆ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ನಾರಾಯಣಪುರದ ನವೋದಯ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ.



• **ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ**

ದೇಶದ ಪ್ರತಿಯೊಬ್ಬ ನಾಗರಿಕರ ಗಿಡ ಮರ ರಕ್ಷಿಸಲು ಎಲ್ಲರ ಕರ್ತವ್ಯ ಎಂದು ಪ್ರಿನ್ಸಿಪಲ್ ನ್ಯಾಯಾಧೀಶರಾದ ಗೌರವಾನ್ವಿತ ಹನುಮಂತರಾವ್ ಕುಲಕರ್ಣಿ ಎಂದು ಹೇಳಿದರು. ತಾಲೂಕಿನಜವಾಹರ ನವೋದಯ ವಿದ್ಯಾಲಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕಾ ವಕೀಲರ ಸಂಘ ಹಾಗೂ ವಲಯ ಅರಣ್ಯ ಅಧಿಕಾರಿಗಳ ಕಾರ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ವಿಶ್ವ ಪರಿಸರ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿ ವಿಶ್ವ ಪರಿಸರ ದಿನಾಚರಣೆಯು 1972 ರಿಂದ ವಿಶ್ವಸಂಸ್ಥೆಯು ಒಂದು ನಿರ್ಧಾರವನ್ನು ಪ್ರಕಟಿಸಿ ಇನ್ನು ಮುಂದೆ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆಯನ್ನಾಗಿ ಆಚರಿಸಬೇಕು. ಮರಗಳನ್ನು ಬೆಳೆಸಿ ಸುಸ್ಥಿರ ಅಭಿವೃದ್ಧಿಯನ್ನು ಕಾಪಾಡಬೇಕು ಎಂಬ ಉದ್ದೇಶದಿಂದ ವಿಶ್ವ ಪರಿಸರ ದಿನಾಚರಣೆ ಆರಂಭಗೊಂಡಿತು ಎಂದು ಮಕ್ಕಳಿಗೆ ಕಿವಿ ಮಾತು ಹೇಳಿದರು. ಜ್ಞಾನೇಶ್ವರ ವಿಠಲ್ ಮಾಳಗಿ ಮಾತನಾಡಿ ಪ್ರತಿಯೊಬ್ಬ ಮಕ್ಕಳು ತಮ್ಮ ತಮ್ಮ ಹೆಸರಿನಲ್ಲಿ ಗಿಡವನ್ನು ನೆಟ್ಟು ಕಾಪಾಡಿ, ಪರಿಸರಕ್ಕೆ ಬಹುದೊಡ್ಡ ಕೊಡುಗೆಯನ್ನು ಕೊಡಬೇಕೆಂದು ಕರೆಕೊಟ್ಟರು. ಸರ್ಕಾರಿ ಅಭಿಯೋಜಕರಾದ ಬಾಲಾಜಿ ಆದೇಪ್ಪಾ ಮಾತನಾಡಿ ಪರಿಸರ ಕಾಳಜಿಯನ್ನು ಪ್ರತಿಯೊಬ್ಬರು ಹೊಂದಿರಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಸಾಮಾಜಿಕ ವಲಯ ಅರಣ್ಯಾಧಿಕಾರಿ ಪ್ರೇಮ ಶೇಖರ ಮಾತನಾಡಿ ವಿಶ್ವದಲ್ಲಿ ಅರಣ್ಯ ನಾಶವಾಗುತ್ತಿದೆ ಪರಿಸರ ಹಾಳಾಗುತ್ತಿದೆ ಪ್ರತಿಯೊಬ್ಬ ವ್ಯಕ್ತಿ ಕೈಜೋಡಿಸಿದರೆ ಅದರ ಸಂರಕ್ಷಣೆ ಸಾಧ್ಯವಿದೆ. ಪ್ರತಿ ವರ್ಷ ಪರಿಸರ ಸಂರಕ್ಷಣೆಯ ಘನೊದ್ದೇಶವನ್ನು ಗಿಡ ನೆಡುವುದರ ಮೂಲಕ ಅದನ್ನು ನೆರವೇರಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ವಿದ್ಯಾಲಯದ ಪ್ರಾಚಾರ್ಯರಾದ ನಾಗರಾಜನ್ ಪರಿಸರ ಸಂರಕ್ಷಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಹಿರಿಯ ನ್ಯಾಯಾಧೀಶರು ಪ್ರಾಚಾರ್ಯರಿಗೆ ಸಸಿ ಒಂದನ್ನು ವಿತರಿಸುವದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಬಂದಿರುವ ಎಲ್ಲಾ ತಿಥಿಗಳಿಗೆ ನ್ಯಾಯಾಧೀಶರು ಒಂದೊಂದು ಸಸಿ ನೀಡಿ ಇದನ್ನು ಬೆಳೆಸುವಂತೆ ಕರೆ ಕೊಟ್ಟರು. ಶಿವಕುಮಾರ ವಲಯ ಅರಣ್ಯ ಇಲಾಖೆ ವಿಶೇಷ ಕಾಳಜಿ ವಹಿಸಿ ವಿದ್ಯಾಲಯಕ್ಕೆ ಉಚಿತವಾಗಿ ಸಸಿಗಳನ್ನು ವಿತರಿಸುವುದಲ್ಲದೆ , ತಮ್ಮ ಸಿಬ್ಬಂದಿಯೊಡನೆ ವಿದ್ಯಾಲಯಕ್ಕೆ ಬಂದು ತಾವೇ ಸ್ವತಃ ಗಿಡ ನೆಡುವ ವ್ಯವಸ್ಥೆಯನ್ನು ಮಾಡಿಕೊಟ್ಟರು. ಈ ಸಂದರ್ಭದಲ್ಲಿ ರೇಣುಕಾ ಮಠಪತಿ. ಹಾಗೂ ಜಗದೇವಿ ಚೊಂಡೆ. ಗಿ, ಕೆ ರಾಜೇಶಂ, ಪಿ.ಡಿ.ಶಹಾ, ಬಾಲಾಜಿ, ಅಲ್ಕಾದೇವಿ, ಸತೀಶ್ ಕುಮಾರ್ ಸ್ವಾಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಲಕ್ಷ್ಮಿಕಾಂತ ಸ್ವಾಗತಿಸಿದರು. ಧರ್ಮಣ್ಣ ಚಿಟ್ಟಾ ನಿರೂಪಿಸಿದರು. ಮದನ್ ಲಾಮತುರೆ ವಂದಿಸಿದರು.

# ಪಡಿತರ ಅಕ್ಕಿ ಅಕ್ರಮ ಸಾಗಾಟ ಪತ್ತೆ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ಬಡವರ ಹೊಟ್ಟೆಸೇರಬೇಕಿದ್ದ ಅನ್ನಭಾಗ್ಯಯೋಜನೆಯ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಜಾಲವನ್ನು ಖಚಿತ ಮಾಹಿತಿ ಮೇರೆಗೆ ಪತ್ತೆ ಹಚ್ಚಿದ ವಿವಿಧ ಸಂಘಟನೆಗಳ ಮುಖಂಡರು, 112 ಸಹಾಯವಾಣಿಗೆ ಕರೆ ಮಾಡಿ ವಾಹನವನ್ನು ತಡೆದು ಪೊಲೀಸರ ವಶಕ್ಕೆ ಒಪ್ಪಿಸಿದ ಘಟನೆ ನಡೆದಿದೆ. ಕುಡುತಿನಿ ಭಾಗದ ವ್ಯಕ್ತಿಯ ಮೂಲಕ ಕ್ಯಾಂಟರ್ ವಾಹನದಲ್ಲಿ 50 ಕೆಜಿ ತೂಕದ ಚೀಲಗಳಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಗಂಗಾವತಿ ಮೂಲಕ ಬೇರೆಡೆಗೆ ಸಾಗಾಟ ಮಾಡಲಾಗುತ್ತಿತ್ತು. ಖಚಿತ ಮಾಹಿತಿ ಪಡೆದ ಸಂಘಟನೆ ಮುಖಂಡರು 112 ಸಹಾಯವಾಣಿಗೆ ಕರೆ ಮಾಡಿ, ಗಂಗಾವತಿ ನಗರದ ಮರಳಿ ಗ್ರಾಮದ ಸಮೀಪದ ಟೋಲ್ ಗೇಟ್ ಬಳಿ ವಾಹನವನ್ನು ತಡೆದು 112 ಸಹಾಯವಾಣಿ ಪೊಲೀಸ್ ಅಧಿಕಾರಿ ಮಂಜುನಾಥ್ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದರು. ಈ ವೇಳೆ ಕ್ಯಾಂಟರ್ ವಾಹನದಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರಿಗೆ ಮಾಹಿತಿ ನೀಡಿ ವಾಹನವನ್ನು ಅವರ ವಶಕ್ಕೆ ಒಪ್ಪಿಸಿದರು. ಬಡವರಿಗಾಗಿ ಸರ್ಕಾರ ನೀಡುವ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಕೆಲ ಅಕ್ರಮ ದಂಧೆಕೋರರು ಪಡಿತರ ಚೀಟಿದಾರರಿಂದ ಕಡಿಮೆಬೆಲೆಗೆ ಖರೀದಿಸಿ ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಜಾಲದ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆ ಮುಖಂಡರು ಆಗ್ರಹಿಸಿದರು. ನಂತರ ಪೊಲೀಸ್ ಠಾಣೆಗೆ ಆಗಮಿಸಿದ ಮುಖಂಡರು, ಪಡಿತರ ಅಕ್ಕಿ ಅಕ್ರಮ ದಂಧೆಯಲ್ಲಿ ತೊಡಗಿರುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನುಬದ್ಧ ಕ್ರಮ ಜರುಗಿಸಬೇಕೆಂದು ಸಂಬಂಧಪಟ್ಟ ಇಲಾಖೆಯನ್ನು ಮಾಧ್ಯಮದ ಮೂಲಕ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಗ್ರಾಮೀಣ ಅಧಿಕಾರಿ ಶೇಖರಪ್ಪ ಅವರು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿದರು. ಪ್ರಕರಣದ ಕುರಿತು ಪೊಲೀಸ್ ಇಲಾಖೆಯ ತನಿಖೆ ಪೂರ್ಣಗೊಂಡ ನಂತರ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಜನಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಬಾಬುಗೌಡ, ಕರ್ನಾಟಕ ರಕ್ಷಣಾ ಸೇನಾ ಜಿಲ್ಲಾಧ್ಯಕ್ಷ ಹನುಮೇಶ್ ನಡಲಮನಿ, ಅಖಿಲ ಭಾರತ ಮಾದಿಗ ದಂಡೋರ ತಾಲೂಕು ಅಧ್ಯಕ್ಷ ಯಮನೂರಪ್ಪ ಗೋನಾಳ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಗಂಗಾವತಿ ತಾಲೂಕು ಅಧ್ಯಕ್ಷ ಬಸವರಾಜ ಕಲ್ಗುಡಿ, ಕಲ್ಯಾಣ ಕರ್ನಾಟಕ ಜಿಲ್ಲಾಧ್ಯಕ್ಷ ಆಂಜನೇಯ ಈಡಿಗೇರ್, ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

# ಗಡಿ ಜಿಲ್ಲೆಯಲ್ಲಿ ಸಂಗೀತದ ನೀನಾದ : ಸಂಜೀವಕುಮಾರ ಅತಿವಾಳೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ**



ನಗರದ ರಾಂಪೂರೆ ಕಾಲೋನಿಯಲ್ಲಿರುವ ಶ್ರೀ ದತ್ತಾಶ್ರಮದ ಆವರಣದಲ್ಲಿ ರವಿವಾರ ಸಂಜೆ ನಡೆದ ಶ್ರೀ ಕುಮಾರೇಶ್ವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಕೈಲಾಶ ನಗರ, ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ನಡೆದ "ನಾದಮಯ ಸಂಗೀತ ಕಾರ್ಯಕ್ರಮ"ವನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಸದಸ್ಯರಾದ ಸಂಜೀವಕುಮಾರ ಅತಿವಾಳೆ ಉದ್ಘಾಟಿಸಿ ಮಾತನಾಡಿದ ಅವರು, ಗಡಿ ಜಿಲ್ಲೆಯಲ್ಲಿ ಕನ್ನಡ ನಾಡು ನುಡಿ, ಭಾಷೆ, ಸಂಸ್ಕೃತಿ, ಕಲೆ ಹಾಗೂ ಸಂಗೀತ ಉಳಿಸಿ ಬೆಳೆಸಲು ಸರ್ಕಾರದ ಸಹಾಯಧನದಡಿ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಮೂಲಕ ಕಲೆ ಹಾಗೂ ಕಲಾವಿದರನ್ನು ಉಳಿಸಿ ಬೆಳೆಸುವ ಕಾರ್ಯ ಶ್ಲಾಘನೀಯವಾಗಿದೆ ಎಂದರು. ಅನೇಕ ಕಲಾವಿದರಲ್ಲಿ ಪ್ರತಿಭೆಗಳಿದ್ದರೂ ವೇದಿಕೆ ಸಿಗದೇ ಇರುವುದರಿಂದ ಅವರ ಕಲೆ ಬೆಳಕಿಗೆ ಬರಲು ಸಾಧ್ಯವಾಗುತ್ತಿಲ್ಲ. ಇಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆದಾಗ ಮಾತ್ರ ಕಲಾವಿದರು ಮತ್ತು ಕಲೆಗಳು ಉಳಿಯಲು ಸಾಧ್ಯವೆಂದರು. ಮುಖ್ಯ ಅತಿಥಿ ಶ್ರೀ ವೈಷ್ಣೋದೇವಿ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಸಂಗಮೇಶ ಬಿರಾದರ ಮಾತನಾಡಿ, ನಾದಮಯ ಸಂಗೀತ ಆಲಿಸುವುದರಿಂದ ಮಾನಸಿಕ ನೆಮ್ಮದಿ ಸಿಗಲಿದೆ. ಶಾಸ್ತ್ರೀಯ ಸಂಗೀತ ಹಾಗೂ ಪಾಶ್ಚಾತ್ಯ ಸಂಗೀತದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಇತ್ತೀಚಿನ ದಿನಗಳಲ್ಲಿ ಡಿ.ಜೆ. ಹಾಡುಗಳು ಯುವಕರ ಮನಸ್ಸುಗಳು ಹಾಳು ಮಾಡುತ್ತಿವೆ. ಅಬ್ಬರದ ಡಿಜೆ ಸೌಂಡ್ ಹೃದಯ ಒಡೆಯುತ್ತಿದ್ದರೆ, ನಾದಮಯ ಸಂಗೀತವು ಹೃದಯ ಹಾಗೂ ಮನಸ್ಸಿಗೆ ನೆಮ್ಮದಿ ನೀಡುತ್ತಿವೆ ಎಂದರು. ದಿವ್ಯಸಾನಿಧ್ಯ ವಹಿಸಿ ಶ್ರೀ ಕಿರಣ ಮಹಾರಾಜರು ಮಾತನಾಡಿ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಮಂದಿರಗಳಲ್ಲಿ ವಾರಕ್ಕೊಮ್ಮೆ ಭಜನೆ ಹಾಗೂ ಸಂಗೀತ ಕಾರ್ಯಕ್ರಮಗಳು ಆಯೋಜಿಸಿ, ನಮ್ಮ ಕಲೆ ಸಂಸ್ಕೃತಿ ಉಳಿಸಿ ಬೆಳಸಲು ಕರೆ ಕೊಟ್ಟರು. ಶ್ರೀ ಕುಮಾರೇಶ್ವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ರಾಜಕುಮಾರ ಸ್ವಾಮಿ ಬಂಪಳ್ಳಿ ಅಧ್ಯಕ್ಷತೆ ವಹಿಸಿದರು. ಖ್ಯಾತ ಸಾಹಿತಿ ವಿನೋದ ಹೊನ್ನಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೊದಲಿಗೆ ಶ್ರೀ ಪಂಡಿತ ಪುಟ್ಟರಾಜ ಕವಿಗವಾಯಿಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಂಗೀತ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕು. ಪ್ರಗತಿ ಹಿರೇಮಠ ಹಾಗೂ ಸಿದ್ದುಸಾಯಿ ನಾನಕೇರಿ ಶಾಸ್ತ್ರೀಯ ಸಂಗೀತ ನಡೆಸಿಕೊಟ್ಟರು. ಇವರಿಗೆ ಸಂಗಯ್ಯ ಹಿರೇಮಠ ಹಾಗೂ ಸಂಜೀವ ಸ್ವಾಮಿ ಉಜನಿ ಹಾರ್ಮೋನಿಯಂ ಸಾಥ ಮಾಡಿದರೆ ಗುರುದಾಸ ಸ್ವಾಮಿ ಹಾಗೂ ಪವನ ಡಪ್ಪೂರ ತಬಲಾ ಸಾಥ ಮಾಡಿದರು.

ಗುಮ್ಮೆ ಕಾಲೋನಿಯ ಅಕ್ಕಮಹಾದೇವಿ ಮಹಿಳಾ ಭಜನೆ ಮತ್ತು ಸಾಂಸ್ಕೃತಿಕ ಸಂಘ ಹಾಗೂ ರಾಂಪೂರೆ ಕಾಲೋನಿಯ ಅಕ್ಕನ ಬಳಗ ಸಾಂಸ್ಕೃತಿಕ ಸಂಘದವರು ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು. ಕವಿತಾ ಸ್ವಾಮಿ ಹಾಗೂ ರಾಜೇಶ್ವರಿ ಸ್ವಾಗತ ಗೀತೆ ನಡೆಸಿಕೊಟ್ಟರು. ಪ್ರಶಾಂತ ವಿಶ್ವಕರ್ಮ ಸ್ವಾಗತಿಸಿ ನಿರೂಪಿಸಿದರು. ಬಸಯ್ಯ ಸ್ವಾಮಿ ವಂದಿಸಿದರು.

ಸಂಜೀವಕುಮಾರ ಸ್ವಾಮಿ ಉಜನಿ-ಜಾನಪದ ಗೀತೆ, ಕಿರಣ ಸ್ವಾಮಿ ಹಿರೇಮಠ-ವಚನ ಗಾಯನ, ಮಲ್ಲಿಕಾರ್ಜುನ ಸ್ವಾಮಿ ಐನೊಳಿ-ದಾಸರಪದ, ಮಲ್ಲಿಕಾರ್ಜುನ ನಾಗಮಾರಪಳ್ಳಿ-ತತ್ವಪದ, ಹಿರಿಯ ಕಲಾವಿದರಾದ ಶಂಭುಲಿಂಗ ವಾಲ್ದೊಡ್ಡಿ ಹಾಗೂ ಅಶ್ವಿನಿ ಸ್ವಾಮಿ ಬಂಪಳ್ಳಿ ಭಾವಗೀತೆ ನಡೆಸಿಕೊಟ್ಟರು. ಬಸವರಾಜ ಶೀಲವಂತರ ಭೈರವಿ ಗೀತೆಯೊಂದಿಗೆ ಸಂಗೀತ ಕಾರ್ಯಕ್ರಮಕ್ಕೆ ವಿರಾಮ ನೀಡಲಾಯಿತು.

ಈ ಸಂದರ್ಭದಲ್ಲಿ ಶ್ರೀನಿವಾಸ, ರಾಜಶೇಖರ ಮೀಸೆ, ಅಮೃತ ಚವ್ಹಾಣ, ವೀರಶೆಟ್ಟಿ ಕಾಗಾ, ಶಶಿಕಾಂತ ಪಾಟೀಲ್, ಬಸವರಾಜ ಸ್ವಾಮಿ, ಶಿವರಾಜ ಸ್ವಾಮಿ, ಲಕ್ಷ್ಮೀಬಾಯಿ ಸ್ವಾಮಿ, ಸಂತೋಷ ಪಾಟೀಲ್, ಮನೋಜ ಮುಂತಾದವರು ಉಪಸ್ಥಿತರಿದ್ದರು.

# ಕ್ಷಿಪ್ರ ಕಾರ್ಯಾಚರಣೆ, 6 ಗಂಟೆಗಳಲ್ಲಿ ಆರೋಪಿಗಳ ಬಂಧನ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**



ಗಂಗಾವತಿ ನಗರದ ಗುಂಡಮ್ಮ ಕ್ಯಾಂಪ್ ಹಾಗೂ 01 ನೇ ವಾರ್ಡ್‌ನಲ್ಲಿ ದಿನಾಂಕ 06-06-2026ಹಾಗೂ ರಂದು ಫಿರ್ಯಾದಿ ಖಾಜಾಸಾಬ ತಂದೆ ಮುದಗಲ್ ಸಾಬ್ ಮತ್ತು ಗಂಗಮ್ಮ ಗಂಡ ಸಿದ್ದವೀರಪ್ಪ ಇವರ ಮನೆ ಕಳ್ಳತನ ಪ್ರಕರಣ ಗುನ್ನೆ ನಂ.124/2026 ಹಾಗೂ 125/2026 ನೇದ್ದರ ಪ್ರಕರಣಗಳಲ್ಲಿ ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ಡಾ ರಾಮ ಎಲ್, ಅರಸಿದ್ದಿ ಐ.ಪಿ.ಎಸ್ ಹಾಗೂ ಮಾನ್ಯ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಹೇಮಂತ ಕುಮಾರ ಐಪಿಎಸ್ ಹಾಗೂ ಜೆ.ಎಸ್. ನ್ಯಾಮಗೌಡರ್, ಡಿ.ಎಸ್.ಪಿ. ಗಂಗಾವತಿ ರವರ ಮಾರ್ಗದರ್ಶನದಲ್ಲಿ, ಪ್ರಕಾಶ ಯಾತನೂರ ಪೊಲೀಸ್ ಇನ್ಸಪೆಕ್ಟರ್ ಗಂಗಾವತಿ ನಗರ ಠಾಣೆ, ರವರ ನೇತೃತ್ವದಲ್ಲಿ ಶ್ರೀ ಟಿ.ಜೆ ನಾಗರಾಜ ಪಿ.ಎಸ್.ಐ ಸಿಬ್ಬಂದಿಯವರಾದ ಮರಿಶಾಂತಗೌಡ ಸಿಹೆಚ್‌ಸಿ 21, ಭೀಮಾನಾಯ್ಕ ಹೆಚ್.ಸಿ. 46, ಫಕೀರಪ್ಪ ಹೆಚ್.ಸಿ. 104, ರಮೇಶ ಹೆಚ್.ಸಿ. 115, ಮೈಲಾರಪ್ಪ ಸಿಪಿಸಿ 171, ರಾಘವೇಂದ್ರ ಹೆಚ್.ಸಿ 241, ಪರಶುರಾಮ ಹೆಚ್.ಸಿ. 190, ಸುಭಾಷ ಹೆಚ್.ಸಿ 191, ವಿಶ್ವನಾಥ ಸಿಪಿಸಿ 06, ದುರುಗಪ್ಪ ಸಿಪಿಸಿ 571 ಗಂಗಾವತಿ ನಗರ ಪೊಲೀಸ್ ಠಾಣೆ ಹಾಗೂ ಕೊಪ್ಪಳ ಜಿಲ್ಲಾ ಸಿಡಿಆರ್ ವಿಭಾಗ ಪ್ರಸಾದ್ ಹಾಗೂ ಮಂಜುನಾಥ ಪೊಲೀಸ್ ಸಿಬ್ಬಂದಿಯವರನ್ನೊಳಗೊಂಡ ಒಂದು ತಂಡ ರಚನೆ ಮಾಡಿ ಕ್ಷಿಪ್ರಗತಿಯಲ್ಲಿ ಕಾರ್ಯಾಚರಣೆ ಕೈಗೊಂಡರು ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡ ಪ್ರಕರಣ ದಾಖಲಾದ 6 ಗಂಟೆ ಅವಧಿಯಲ್ಲಿ ಕಳ್ಳತನ ಮಾಡಿದ ಆರೋಪಿತರಾದ 1] ಸಾಹಿಲ್ ಸೋನು ತಂದೆ ಜಿಲಾನಿಪಾಷ ವಯಸ್ಸು 21 ವರ್ಷ, ಜಾ. ಮುಸ್ಲಿಂ ಯು. ಗ್ಲಾಸ್ ಕೆಲಸ ಸಾ. ಕಸಬರ ಓಣಿ ಗುಂಡಮ್ಮ ಕ್ಯಾಂಪ ಗಂಗಾವತಿ 2) ವಿರೇಶ ತಂದೆ ನಿಂಗಪ್ಪ ಚಲುವಾದಿ ವಯಸ್ಸು 20 ವರ್ಷ, ಜಾ. ಚಲುವಾದಿ ಉ ಕೂಲಿ ಕೆಲಸ ಸಾ. ಚಲುವಾದಿ ಓಣಿ ಗಂಗಾವತಿ ಮತ್ತು ಒಬ್ಬ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ರವರಿಂದ ಎರಡು ಕಳ್ಳತನ ಪ್ರಕರಣಗಳಲ್ಲಿ ಒಟ್ಟು 100 ಗ್ರಾಂ ತೂಕದ ಬಂಗಾರ, 1450 ಗ್ರಾಂ ತೂಕದ ಬೆಳ್ಳಿ ಆಭರಣ ಹಾಗೂ ನಗದು ಹಣ ಒಟ್ಟು 19,00,000/-ರೂ ಬೆಲೆ ಬಾಳುವುದನ್ನು ಜಪ್ತಿಪಡಿಸಿಕೊಂಡು ಆರೋಪಿತರಿಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದು ಇರುತ್ತದೆ ತನಿಕ ತಂಡದ ಕಾರ್ಯವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೊಪ್ಪಳ ರವರು ಪ್ರಶಾಂತ್ ಸಿಸಿ ಬಹುಮಾನ ಘೋಷಿಸಿದ್ದು ಇರುತ್ತದೆ.

# ಪ್ರತಿಯೊಬರೂ ಪರಿಸರ ಪೋಷಿಸಿ ಬೆಳೆಸುವುದು ಅಗತ್ಯ: ರಾಜಕುಮಾರ

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**



ಸಸಿ ನೆಡುವ ಮೂಲಕ ಪರಿಸರ ಪೋಷಿಸಿ ಬೆಳೆಸುವುದು ಅಗತ್ಯವಾಗಿದೆ ಎಂದು ಪತ್ರಕರ್ತ ರಾಜಕುಮಾರ್ ಆರ್. ಹಡಪದ ತಿಳಿಸಿದರು. ಪಟ್ಟಣದ ಫಾತಿಮಾಪುರನಲ್ಲಿರುವ ಶ್ರೀ ಮೈಸಮ್ಮಾ ದೇವಿಯ ದೇವಸ್ಥಾನದ ಆವರಣದಲ್ಲಿ ಯುವಕರು ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಪರಿಸರದ ದಿನ ಮಾತ್ರ ಗಿಡ ನೆಟ್ಟರೆ ಸಾಲದು, ವರ್ಷವಿಡೀ ಈ ಕಾರ್ಯದಲ್ಲಿ ತೊಡಗಿ ಪರಿಸರವನ್ನು ಉತ್ತಮಗೊಳಿಸುವುದು ಅವಶ್ಯಕ, ಗಿಡ ನೆಟ್ಟು ಹೋಗುವುದರ ಜೊತೆ ಅದನ್ನು ಪೋಷಿಸಿವುದು ಅತೀ ಮುಖ್ಯ ಎಂದರು. ಈ ಸಂದರ್ಭದಲ್ಲಿ ಪ್ರಕಾಶ ರೆಡ್ಡಿ ಮುಡಬಿ, ಮುನೀರ ಪಟೇಲ್ ಅಲ್ಲೂರ್, ಶಿವರಾಜ ಸ್ವಾಮಿ ನಂದಗಾಂವ, ಸೈಯದ್ ಬೇಲೂರ್, ಬಸವರಾಜ ಯಲಮಡಗಿ, ಹಣಮಂತ ರೆಡ್ಡಿ ರಾಂಪುರ, ಜಗನ್ನಾಥ ಕಂದಗುಳ, ತುಕಾರಾಮ ಸೀತಾಳಗೇರಾ ಸೇರಿದಂತೆ ಯುವಕರು ಉಪಸ್ಥಿತರಿದ್ದರು.

# ರಸ್ತೆ ಸುರಕ್ಷತಾ ನಿಯಮ ಪಾಲಿಸಬೇಕು: ಸಿಪಿಐ ರವೀಂದ್ರನಾಥ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ವಾಹನ ಚಾಲಕರು ಕಡ್ಡಾಯವಾಗಿ ರಸ್ತೆ ಸುರಕ್ಷತಾ ನಿಯಮಗಳನ್ನ ಪಾಲಿಸಬೇಕೆಂದು ಸಿಪಿಐ ರವೀಂದ್ರನಾಥ ತಿಳಿಸಿದರು. ಸೋಮವಾರ ಪಟ್ಟಣದ ಹಳೆ ಬಸ್ ನಿಲ್ದಾಣದ ಹತ್ತಿರ ಇರುವ ಸರ್ಕಾರಿ ಕನ್ಯಾ ಪ್ರೌಢ ಶಾಲಾ ಆವರಣದಲ್ಲಿ ಮಾದಕ ದ್ರವ್ಯ ನಿಷೇಧ ಜಾಗೃತಿ ಹಾಗೂ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಅನೇಕ ಅಪಘಾತಗಳು ಆಗುತ್ತಿವೆ. ಅಪಘಾತದಲ್ಲಿ ಅಮಾಯಕ ಜನರು ಜೀವ ಕಳೆದುಕೊಂಡು ಅವಲಂಬಿತ ಕುಟುಂಬಗಳು ಬೀದಿ ಪಾಲಾಗುತ್ತಿವೆ, ಅದರಿಂದ ವಾಹನ ಚಾಲಕರು ವಾಹನದಲ್ಲಿ ಕುಳಿತುಕೊಂಡಾಗ ತಮ್ಮ ಕುಟುಂಬವನ್ನು ಒಮ್ಮೆ ನೆನಪಿಸಿಕೊಂಡು ಜಾಗೃತರಾಗಿ ವಾಹನ ಚಾಲಾಯಿಸಿ ಎಂದು ಸಲಹೆ ನೀಡಿದರು. ವಾಹನ ಚಾಲನೆ ಮಾಡುವ ಪ್ರತಿಯೊಬ್ಬರು ರಸ್ತೆ ನಿಯಮಗಳನ್ನ ಹಾಗೂ ಸಂಚಾರ ಚಿಹ್ನೆಗಳನ್ನ ಚೆನ್ನಾಗಿ ಅರಿತುಕೊಳ್ಳಬೇಕು. ಬೇಜವಾಬ್ದಾರಿ ಅಥವಾ ನಿರ್ಲಕ್ಷ್ಯ ತೋರದೆ ರಸ್ತೆ ನಿಯಮಗಳನ್ನ ಪಾಲನೆ ಮಾಡಬೇಕು ಎಂದರು. ಪಿಎಸ್ಐ ಬಸಲಿಂಗಪ್ಪ ಎಂ. ಗೋಧಿಹಾಳ ಮಾತನಾಡಿ, ಮಾದಕ ವಸ್ತುಗಳ ಸೇವನೆಗೆ ಹೆಚ್ಚಾಗಿ ಯುವಕರು ದಾಸರಾಗುತ್ತಿದ್ದಾರೆ. ಜೀವನದಲ್ಲಿ ಗುರಿ ಇಟ್ಟುಕೊಂಡು ಅದನ್ನು ಸಾಧಿಸಲು ಶ್ರಮಿಸಬೇಕು. ಇಂತಹ ದುಶ್ಚಟಗಳು ತಡೆಗಟ್ಟಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು. ಮಾದಕ ವಸ್ತುಗಳಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿದುಕೊಂಡು ಅದರಿಂದ ಸದಾ ದೂರವಿರಬೇಕು ಎಂದು ಚಾಲಕರಿಗೆ ಮತ್ತು ಸಾರ್ವಜನಿಕ ತಿಳಿಸಿದರು. ಈ ಸಂದರ್ಭದಲ್ಲಿ ಕ್ರೈಂ ಪಿಎಸ್ಐ ಶಿವರಾಯ, ಪೊಲೀಸ್ ಸಿಬ್ಬಂದಿಗಳಾದ ರಾಜರೆಡ್ಡಿ, ಪ್ರೇಮ ರಾಠೋಡ ಸೇರಿದಂತೆ ವಾಹನ ಚಾಲಕರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಜೂ. 13 ರಂದು ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 6ನೇ ಘಟಿಕೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಜೂ.08-ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 6ನೇ ಘಟಿಕೋತ್ಸವವು ಇದೇ ಜೂನ್ 13 ರಂದು ಸಂಜೆ 4.30 ಗಂಟೆಗೆ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಕಾಲೇಜಿನ ಆವರಣದಲ್ಲಿ ಜರುಗಲಿದೆ.

ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕಿ ಡಾ. ಬಿ.ಎಲ್. ಸುಜಾತಾ ರಾಠೋಡ, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಮುಂಬೈನ ಅಡ್ರಿನಾಲಿನ್ ಮೆಡ್ಎಡ್ ಸಂಸ್ಥಾಪಕ ಹಾಗೂ ಜನರಲ್ ಫಿಜಿಶಿಯನ್ ಡಾ. ವಿಶಾಲ ಗಬಾಲೆ ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು.

# ಶಾಸಕ ಲಕ್ಷ್ಮಣ್ ಸವದಿಗೆ ಸಚಿವ ಸ್ಥಾನ ಕೊಡಲು ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ರಾಜ್ಯದ ನೂತನ ಮುಖ್ಯಮಂತ್ರಿ ಡಿಕೆಶಿ ಸಚಿವ ಸಂಪುಟದಲ್ಲಿ ಅಥಣಿ ಶಾಸಕ ಲಕ್ಷ್ಮಣ್ ಸವದಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿಗಳನ್ನು ಕೊಪ್ಪಳ ಜಿಲ್ಲಾ ಗಾಣಿಗೇರ ಸಮಾಜದ ಮುಖಂಡರಾದ ರುದ್ರಮುನಿ ಗಾಳಿಯವರು ಆಗ್ರಹಿಸಿದ್ದಾರೆ.ಅವರು ಸೋಮವಾರದಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರದ ಇತಿಹಾಸದಲ್ಲಿ ಗಾಣಿಗ ಸಮಾಜದ ಯಾರೊಬ್ಬರಿಗೂ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡದೆ ಇರುವುದು ಶೋಚನೀಯ ಹಾಗೂ ನೋವಿನ ಸಂಗತಿ, ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರೇ ಶಾಸಕ ಲಕ್ಷ್ಮಣ ಸವದಿ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತಂದಿದ್ದಾರೆ, ಬಿಜೆಪಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಗಳಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿ ಸಾಕಷ್ಟು ಅನುಭವ ಇದೆ ಹೀಗಾಗಿ ಎರಡನೇ ಪಟ್ಟಿಯಲ್ಲಿ ಲಕ್ಷ್ಮಣ್ ಸವದಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದರು.ಕೊಪ್ಪಳ ಜಿಲ್ಲಾ ಗಾಣಿಗರ ಸಮಾಜದ ಅಧ್ಯಕ್ಷ ತೋಟಪ್ಪ ಕಾಮನೂರ್ ಮಾತನಾಡಿ ರಾಜ್ಯದಲ್ಲಿ ಗಾಣಿಗ ಸಮಾಜ 40–50 ಲಕ್ಷ ಜನಸಂಖ್ಯೆ ಇದ್ದು ಸಾಮಾಜಿಕ ನ್ಯಾಯದಡಿ ಸಚಿವ ಸ್ಥಾನ ನೀಡಬೇಕು, ಲಕ್ಷ್ಮಣ ಸವದಿ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಘಟನಾ ಸಾಮರ್ಥ್ಯ ಹಾಗೂ ಜನಪ್ರಿಯತೆಯಿಂದ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಗೆಲ್ಲಲು ಬಹುದೊಡ್ಡ ಕಾಣಿಕೆ ಸಲ್ಲಿಸಿದ್ದಾರೆ, ವಿಧಾನಸಭಾ ಚುನಾವಣೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಕಷ್ಟು ಶ್ರಮವಹಿಸಿದ್ದಾರೆ ಹೀಗಾಗಿ ಮುಖ್ಯಮಂತ್ರಿ ಡಿಕೆಶಿ ಅವರು ಎರಡನೇ ಪಟ್ಟಿಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.ಸುದ್ದಿಗೋಷ್ಠಿಯಲ್ಲಿ ಗಾಣಿಗೇರ್ ಸಮಾಜದ ಮುಖಂಡರಾದ ಸಂಗನಗೌಡ ಬಿಟಿ ಪಾಟೀಲ್, ವೀರಣ್ಣ ಗಾಣಿಗೇರ್, ಮಂಜು ಪಾಟೀಲ್ ಹಂದ್ರಾಳ, ಎನ್. ಸಿ ಗೌಡರ, ಸಂಗನಗೌಡ ಪೊಲೀಸ್ ಪಾಟೀಲ್, ಮಾರುತಿ ನಿಲೂಗಲ್, ಶಂಕರಗೌಡ ಮಾಲಿ ಪಾಟೀಲ್ ಉಪಸ್ಥಿತರಿದ್ದರು.

# ರಸ್ತೆ ಸುರಕ್ಷತೆ, ನಿಯಮಗಳ ಬಗ್ಗೆ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಿ:ಇಟ್ನಾಳ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಪ್ರಾದೇಶಿಕ ಸಾರಿಗೆ ಇಲಾಖೆ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ರಸ್ತೆ ಸುರಕ್ಷತೆ ಕುರಿತು ಶಾಲಾ–ಕಾಲೇಜು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ರಸ್ತೆ ಸುರಕ್ಷತೆ ನಿಯಮ ಮತ್ತು ಕಾನೂನುಗಳ ಬಗ್ಗೆ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಹೇಳಿದರು.

ಅವರು ಶನಿವಾರದಂದು ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಿದಾಗ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತವೆ. ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅವಶ್ಯಕತೆ ಇರುವಲ್ಲಿ ಸೈನ್ ಬೋರ್ಡ್,ಲೈಟಿಂಗ್ ವ್ಯವಸ್ಥೆಗಳನ್ನು ಮಾಡಬೇಕು. ಸಂಬಂಧಿಸಿದ ರಸ್ತೆ ಅಭಿವೃದ್ಧಿ ಪ್ರಾಧಿಕಾರದವರು ಈ ಬಗ್ಗೆ ಕ್ರಮ ವಹಿಸಬೇಕು. ಇವುಗಳಿಗೆ ಅನುದಾನ ಬೇಕಾದರೆ ಸಂಬಂಧಿಸಿದ ಇಲಾಖೆಯವರು ತಮ್ಮ ಮೇಲಾಧಿಕಾರಿಗಳಿಗೆ ಪ್ರಪೋಸಲ್ ಕಳಿಸಿ ಮಾಡಿಸಬೇಕು. ಸೈನ್ಬೋರ್ಡಗಳು ಇರುವಲ್ಲಿ ಲೈಟಿಂಗ್ ವ್ಯವಸ್ಥೆ ಇರಬೇಕು ಎಂದು ಹೇಳಿದರು.

ಬ್ಲ್ಯಾಕ್ ಸ್ಪಾಟ್ಗಳು ಇರುವಲ್ಲಿ ಕ್ಯಾಮರಾಗಳನ್ನು ಅಳವಡಿಸುವುದರ ಜೊತೆಗೆ ಲೈಟಿಂಗ್ ವ್ಯವಸ್ಥೆ ಹಾಗೂ ಸೈನ್ ಬೋರ್ಡಗಳಿದ್ದರೆ ಜನರು ಅಂತಹ ಸ್ಥಳಗಳಲ್ಲಿ ಸಂಚರಿಸುವಾಗ ಮುಂಜಾಗ್ರತೆ ವಹಿಸುವುದರಿಂದ ಅಪಘಾತಗಳಾಗದಂತೆ ತಡೆಯಬಹುದು. ಈಗಾಗಲೇ ರಸ್ತೆಗಳಲ್ಲಿ ಬ್ಯಾರಿಕೇಡ್ ಇರುವಲ್ಲಿ ರೋಡಹಂಪ್ಸಗಳನ್ನು ಮಾಡಿದ ನಂತರ ಅವುಗಳನ್ನು ತೆರವುಗೊಳಿಸಿ ಎಷ್ಟು ಸ್ಥಳಗಳಲ್ಲಿ ಇವುಗಳನ್ನು ಮಾಡಬೇಕು ಎಂಬುದನ್ನು ಗುರುತಿಸಿ ಎಂದು ಅವರು ಸೂಚಿಸಿದರು.

ಹೆದ್ದಾರಿಗಳಲ್ಲಿ ಒಳ್ಳೆಯ ಗುಣಮಟ್ಟದ ಕ್ಯಾಮರಾಗಳನ್ನು ಅಳವಡಿಸಬೇಕು. ವಾಹನಗಳ ನಂಬರ ಪ್ಲೇಟ್ ಮಾತ್ರವಲ್ಲದೆ ಅವುಗಳ ವೇಗ ಹಾಗೂ ವಾಹನ ಸವಾರರು ಸೀಟ್ಬೆಲ್ಟ್ ಧರಿಸಿದ್ದಾರೆ ಅಥವಾ ಇಲ್ಲಾ ಎನ್ನುವುದನ್ನು ಕುಳಿತಲ್ಲಿಂದಲೇ ನೋಡುವಷ್ಟು ಉತ್ತಮ ಕ್ಯಾಮರಾಗಳಿದ್ದು, ಅಂತಹವುಗಳನ್ನು ಅಳವಡಿಸಿ. ಜಿಲ್ಲೆಯಲ್ಲಿ ಹಾದು ಹೋಗುವ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಗ್ರಾಮೀಣ ರಸ್ತೆಗಳು ಉತ್ತಮ ಗುಣಮಟ್ಟದಲ್ಲಿ ನಿರ್ಮಿಸದಿದ್ದರೆ ಭಾರವಾದ ವಾಹನಗಳು ಸಂಚರಿಸಿದಲ್ಲಿ ರಸ್ತೆಗಳು ಹಾಳಾಗಿ ಹೋಗುತ್ತವೆ ಈ ಕುರಿತು ಸಂಬಂಧಿಸಿದ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು. ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ನಗರ ವ್ಯಾಪ್ತಿಯಲ್ಲಿ ಅಗತ್ಯ ಪ್ರಮಾಣದಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಬೇಕು ಎಂದು ಹೇಳಿದರು.

ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಮಾತನಾಡಿ, ದೇವಸ್ಥಾನ, ಮದುವೆ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಟ್ರ್ಯಾಕ್ಟರ್ ಮತ್ತು ಟಂಟಂಗಳಲ್ಲಿ ತೆರಳುವುದನ್ನು ನಿಯಂತ್ರಿಸಬೇಕು. ಇತ್ತೀಚಿಗೆ ಮುನಿರಾಬಾದ್ ಬಳಿ ನಡೆದ ಟ್ರ್ಯಾಕ್ಟರ್ಗಳಲ್ಲಿ ಅಪಘಾತದಲ್ಲಿ 7 ಜನ ಮೃತಪಟ್ಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ. ಟ್ರ್ಯಾಕ್ಟರ್ ಗಳು ಮಾನವ ಸಾಗಣೆಗೆ ಇರುವ ವಾಹನವಲ್ಲ. ಸರಕು ಸಾಗಣೆ ವಾಹನ ಎಂಬುದನ್ನು ಜನರಿಗೆ ಮನದಟ್ಟು ಮಾಡಿ. ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಸರಕು ಸಾಗಣೆ ವಾಹನಗಳನ್ನು ಯಾವುದೇ ಕಾರಣಕ್ಕೂ ಮಾನವ ಸಾಗಣೆಗೆ ಬಳಸಬಾರದು. ಇಂತಹ ಪ್ರಕರಣಗಳು ಕಂಡುಬಂದಲ್ಲಿ ಮುಲಾಜಿಲ್ಲದೆ ಪ್ರಕರಣ ದಾಖಲಿಸಿ, ಇನಸ್ಪೆಕ್ಟರ್ ಜಪ್ತಿ ಮಾಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ ಅವರು ಮಾತನಾಡಿ, ಇತ್ತೀಚಿಗೆ ನಡೆದ ಟ್ರ್ಯಾಕ್ಟರ್ ಅಪಘಾತವನ್ನು ಆಧಾರವಾಗಿಟ್ಟುಕೊಂಡು ಸೇತುವೆ ರಸ್ತೆ ದುರಸ್ತಿ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಹೊಸಪೇಟೆಯಿಂದ ಸಂಪರ್ಕಗೊಳ್ಳುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಡ್ಡಾಯವಾಗಿ ಅಪಘಾತ ವಲಯದ ಸೂಚನಾ ಫಲಕ ಅಳವಡಿಸಬೇಕು ಕಡ್ಡಾಯವಾಗಿ ಸಿಸಿ ಟಿವಿ ಕ್ಯಾಮೇರಾವನ್ನು ಕೂಡ ಅಳವಡಿಸಬೇಕು. ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪಾರ್ಕಿಂ–ಗ್ ಸೌಲಭ್ಯ, ವೇಗದ ವಾಹನ ಚಾಲನೆ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದವರು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು. ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ಪಿ.ಹೇಮಂತರಾಜ್, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ ಕೆ., ಎನ್. ಎಚ್. 50 ಹೊಸಪೇಟೆ ಸೈಟ್ ಇಂಜಿನಿಯರ್ ದಾನೇಶ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ, ಶಿಕ್ಷಣ ಇಲಾಖೆಯ ಎ ಬಸವರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮುಧೋಳ: ಪಿ.ಕೆ.ಪಿ.ಎಸ್. ವತಿಯಿಂದ ರೈತರಿಗೆ ರಸಗೊಬ್ಬರ ವಿತರಣೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನ ಮುಧೋಳ (ಬಿ) ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ (ಪಿ.ಕೆ.ಪಿ.ಎಸ್) ವತಿಯಿಂದ ಮುಂಗಾರು ಹಂಗಾಮಿನ ಅಂಗವಾಗಿ ರೈತರಿಗೆ ಅಧಿಕೃತವಾಗಿ ರಸಗೊಬ್ಬರ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.ಸಂಘದ ಅಧ್ಯಕ್ಷರಾದ ಗುರುನಾಥ ನಾಗನಾಥರಾವ ವಟಗೆ ಅವರು ರಸಗೊಬ್ಬರ ಚೀಲಗಳನ್ನು ವಿತರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.ಸದ್ಯ ಮಾರುಕಟ್ಟೆಯಲ್ಲಿ ಹಾಗೂ ಸಹಕಾರ ಸಂಘದಲ್ಲಿ ರೈತರ ಬೇಡಿ–ಕೆಗೆ ಅನುಗುಣವಾಗಿ ಪ್ರಮುಖ ರಸಗೊಬ್ಬರಗಳು ಲಭ್ಯವಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು. ಸಂಘದಲ್ಲಿ ಸದ್ಯ ಲಭ್ಯವಿರುವ ಪ್ರಮುಖ ಗೊಬ್ಬರಗಳ ವಿವರ ಈ ಕೆಳಗಿನಂತಿದೆ: 17:17:17 ರಸಗೊಬ್ಬರ, 15:15:15 (ಭಾರತ್ NPK) ರಸಗೊಬ್ಬರ, 16:12:16 (ಸಂಪೂರ್ಣ) ರಸಗೊಬ್ಬರ, 18:46:0 (ಭಾರತ್ ದಪ್) ರಸಗೊಬ್ಬರ, ಹಾಗೂ ಇಫ್ಕೋ (IFFCO) ನ್ಯಾನೋ ಯೂ–ರಿಯಾ ಪ್ಲಸ್ (ದ್ರವ ರೂಪದ ಗೊಬ್ಬರ).

ರೈತರಿಗೆ ಯಾವುದೇ ರೀತಿಯ ಕೊರತೆಯಾಗದಂತೆ ಸಕಾಲದಲ್ಲಿ ಗುಣಮಟ್ಟದ ರಸಗೊಬ್ಬರಗಳನ್ನು ದಾಸ್ತಾನು ಮಾಡಲಾಗಿದ್ದು, ಮುಧೋಳ ವ್ಯಾಪ್ತಿಯ ರೈತ ಬಾಂಧವರು ಸಂಘಕ್ಕೆ ಭೇಟಿ ನೀಡಿ ಅಗತ್ಯವಿರುವ ಗೊಬ್ಬರವನ್ನು ಪಡೆದುಕೊಳ್ಳಬಹುದು ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿ.ಇ.ಒ) ಬಸವರಾಜ ಸ್ವಾಮಿ ಮಾಹಿತಿ ನೀಡಿದ್ದಾರೆ.

ಈ ಉದ್ಘಾಟನಾ ಸಂದರ್ಭದಲ್ಲಿ ಸಂಘದ ಆಡಳಿತ ಮಂಡಳಿಯ ಪದಾಧಿಕಾರಿಗಳು, ಪ್ರಮುಖರು ಹಾಗೂ ಸ್ಥಳೀಯ ರೈತ ಮಹಿಳೆಯರು ಮತ್ತು ಪುರುಷರು ಉಪಸ್ಥಿತರಿದ್ದರು.

# ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಪರಿಸರ ಅರಿವು ಅವಶ್ಯ



• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ ಸಿ ಟ್ರಸ್ಟ್ ತಾಲೂಕು ವತಿಯಿಂದ ತಾಲೂಕಿನ ಯರನಾಳ ಕಾರ್ಯಕ್ಷೇತ್ರದ ಶ್ರೀ ಚಂದ್ರಮ್ಮದೇವಿ ದೇವಸ್ಥಾನ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಹಾಗೂ ಸಸಿನಾಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಚಂದ್ರಮ್ಮ ದೇವಿ ದೇವಸ್ಥಾನ ಕಮಿಟಿ ಅಧ್ಯಕ್ಷರಾದ ಶಿವಪ್ಪ ಕೊಲಕರ. ಕೃಷಿ ಮೇಲ್ವಿಚಾರಕ ರಾಜು ಬೆಟಗೇರಿ ಮಾತನಾಡಿ, ಪರಿಸರ ಕಾರ್ಯಕ್ರಮವನ್ನು ಜೂನ್ 5 ಕ್ಕೆ ಸೀಮಿತಗೊಳಿಸದೆ ಪ್ರತಿದಿನ ಪರಿಸರ ಸಂರಕ್ಷಣೆ ಮಾಡಬೇಕು. ಮರ ಗಿಡಗಳನ್ನು ನಾಶ ಮಾಡುವುದರಿಂದ ಪರಿಸರದಲ್ಲಿ ಅತಿವೃಷ್ಟಿ–ಅನಾವೃಷ್ಟಿ ಅಂತ ದುಷ್ಪರಿಣಾಮಗಳು ಆಗುತ್ತವೆ. ಈ ಎಲ್ಲ ಸಮಸ್ಯೆಗಳನ್ನು ದೂರ ಮಾಡಲು ಮನೆಗೊಂದು ಮರ ಊರಿಗೊಂದು ವನ ಇರಬೇಕೆಂದರು. ಸಮಿತಿ ಸದಸ್ಯ ಯಮನಪ್ಪ ಕೋಲಕರ ಮಾತನಾಡಿ, ಪರಿಸರ ಎಂದರೆ ನಮ್ಮ ಸುತ್ತಮುತ್ತಲಿರುವ ಗಾಳಿ,ನೀರು, ಮಣ್ಣು ಪ್ರಕೃತಿಯ ಕೊಡುಗೆ ಇವನ್ನು ಸರಿಯಾಗಿ ಸಮರ್ಪಕವಾಗಿ ಬಳಸಿಕೊಂಡಿದ್ದಲ್ಲಿ ಭೂಮಿ ಮೇಲೆ ವಾಸಿಸುವ ಯಾವ ಜೀವಿಗಳು ತೊಂದರೆ ಆಗುವುದಿಲ್ಲ. ಮಾನವ ದುಷ್ಕೃತ್ಯದಿಂದ ಪರಿಸರವನ್ನು ಮಲಿನಗೊಳಿಸಿ ಮರಗಳನ್ನು ಕಡಿದು ಪರಿಸರ ಕೆಡಿಸುವವರನ್ನು ಬಿಟ್ಟು ಪರಿಸರ ರಕ್ಷಣೆಗೆ ಧರ್ಮಸ್ಥಳ ಧರ್ಮಾಧಿಕಾರಿಗಳು ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಪಣತೊಟ್ಟಿದ್ದಾರೆ. ಗ್ರಾಮಸ್ಥರು ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು. ಸ್ವಸಹಾಯ ತಂಡದ ಸದಸ್ಯರು,ಊರಿನ ಹಿರಿಯರು, ಸೇವಾ ಪ್ರತಿನಿಧಿ ರಾಜೇಶ್ವರಿ,ಭುವನೇಶ್ವರಿ ಭಾಗವಹಿಸಿದ್ದರು.

# ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಔರಾದ



ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಔರಾದ(ಬಿ) ಪಟ್ಟಣದಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ಕೋರ್ಟ್ ಕಾಂಪ್ಲೆಕ್ಸ್ ಕಟ್ಟಡದ ಕಾಮಗಾರಿ ಸ್ಥಳಕ್ಕೆ ಜೂನ್ 8ರಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು.ಈ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡದಲ್ಲಿ ಸಂಚರಿಸಿ ಕಾಮಗಾರಿಯ ಪ್ರಗತಿ, ಗುಣಮಟ್ಟ ಹಾಗೂ ವಿವಿಧ ಸೌಲಭ್ಯಗಳ ಕುರಿತು ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದರು. ಸ್ಥಳದಲ್ಲಿದ್ದ ವಕೀಲರು ಕೋರ್ಟ್ ಆವರಣದಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಶಾಸಕರ ಗಮನಕ್ಕೆ ತಂದರು. ಕಾಮಗಾರಿ ಯಾವಾಗ ಮುಗಿಸುವಿರಿ ಎಂದು ಗುತ್ತಿಗೆದಾರರನ್ನು ಪ್ರಶ್ನಿಸಿದಾಗ, ಬಿಲ್ಲುಗಳೇ ಆಗುತ್ತಿಲ್ಲ. ಹಾಗಾಗಿ ಕಾಮಗಾರಿ ವಿಳಂಬವಾಗುತ್ತಿದೆ. ಬಿಲ್ಲುಗಳನ್ನು ಬೇಗ ಮಾಡಿಸಿಕೊಡಿ ಬೇಗ ಪೂರ್ಣಗೊಳಿಸುತ್ತೇವೆ ಎಂದು ಶಾಸಕರಲ್ಲಿ ಮನವಿ ಮಾಡಿಕೊಂಡರು.ಈ ವೇಳೆ ಮಾತನಾಡಿದ ಶಾಸಕರು, ಔರಾದ(ಬಿ) ಪಟ್ಟಣದಲ್ಲಿ ದೊಡ್ಡ ಕೋರ್ಟ್ ಕಾಂಪ್ಲೆಕ್ಸ್ ಲಭ್ಯವಿಲ್ಲದ ಕಾರಣ ನಮ್ಮ ಜನತೆಗೆ ಸಾಕಷ್ಟು ಸಮಸ್ಯೆಗಳಾಗುತ್ತಿದ್ದವು. ಜಿಲ್ಲಾ ಕೇಂದ್ರಕ್ಕೆ ಓಡಾಡುವ ಪರಿಸ್ಥಿತಿಯಿತ್ತು. ನಮ್ಮ ತಾಲ್ಲೂಕಿನಲ್ಲಿ ದೊಡ್ಡ ಮತ್ತು ಸುಂದರ ಕೋರ್ಟ್ ನಿರ್ಮಿಸಬೇಕೆಂಬುದು ನನ್ನ ಬಹಳಷ್ಟು ದಿನಗಳ ಆಶಯವಾಗಿತ್ತು. ಅದರಂತೆ ವಕೀಲರಿಂದಲೂ ಸಾಕಷ್ಟು ಬೇಡಿಕೆಗಳು ಬರುತ್ತಿದ್ದವು. ಆದ್ದರಿಂದ ನಾನು ಸಚಿವನಾಗಿದ್ದ ಸಂದರ್ಭದಲ್ಲಿ 13.20 ಕೋಟಿ ರೂಪಾಯಿ ವೆಚ್ಚದ ಈ ಮಹತ್ವಾಕಾಂಕ್ಷಿ ಯೋಜನೆಗೆ ಸರ್ಕಾರದಿಂದ ಅನುಮೋದನೆ ಪಡೆದು, ಕಾಮಗಾರಿ ಆರಂಭಿಸಿದ್ದೇನೆ. ಮೊದಲು ಕಟ್ಟಡ ನಿರ್ಮಾಣಕ್ಕೆ ಸಾಕಷ್ಟು ಅಡ್ಡಿಗಳಿದ್ದವು. ಎಲ್ಲವನ್ನು ಸರಿಪಡಿಸಿ ತಾಲ್ಲೂಕಿನಲ್ಲಿ ಸುಂದರ ಮತ್ತು ಭವ್ಯವಾದ ಕೋರ್ಟ್ ಕಾಂಪ್ಲೆಕ್ಸ್ ನಿರ್ಮಾಣಗೊಳ್ಳುತ್ತಿದೆ ಎಂದರು.

ಸುಮಾರು 1.15 ಎಕರೆ ನಿವೇಶನದಲ್ಲಿ ಭವ್ಯ ಮತ್ತು ಸುಂದರವಾದ ಬಹುಮಹಡಿಯ ಕೋರ್ಟ್ ಕಾಂಪ್ಲೆಕ್ಸ್ ನಿರ್ಮಾಣವಾಗುತ್ತಿದ್ದು, ಕೋರ್ಟ್ ಹಾಲ್‌ಗಳು, ನ್ಯಾಯಾಧೀಶರ ಕೊಠಡಿಗಳು, ಗ್ರಂಥಾಲಯ ಸೇರಿದಂತೆ ಅಗತ್ಯವಿರುವ ಎಲ್ಲ ರೀತಿಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ನ್ಯಾಯಾಂಗ ವ್ಯವಸ್ಥೆಗೆ ಅನುಕೂಲಕರ ವಾತಾವರಣ ನಿರ್ಮಾಣವಾಗಲಿದೆ ಎಂದು ಹೇಳಿದರು.ಅಂ–ದಾಜು ಪತ್ರಿಕೆಯಲ್ಲಿರುವಂತೆ ಎಲ್ಲ ಕಾಮಗಾರಿಗಳು ಗುಣಮಟ್ಟದಿಂದ ಆಗಬೇಕು.ಮತ್ತು ಕಾಲಮಿತಿಯೊಳಗಾಗಿ ಸಂಪೂರ್ಣ ಕೆಲಸ ಪೂರ್ಣಗೊಳ್ಳಬೇಕು. ಕೆಲಸದ ಗುಣಮಟ್ಟದ ಬಗ್ಗೆ ಯಾವುದೇ ರೀತಿಯ ದೂರುಗಳು ಬಾರದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು. ಕೋರ್ಟ್ ಆವರಣದಲ್ಲಿ ಸುಂದರ ಉದ್ಯಾನವನ ನಿರ್ಮಿಸಬೇಕು. ಖಾಲಿಯಿರುವ ಸ್ಥಳದಲ್ಲಿ ಮತ್ತು ರಸ್ತೆಯ ಬದಿಗಳಲ್ಲಿ ಸಸಿಗಳನ್ನು ನೆಡಬೇಕು. ಮುಂದಿನ ದಿನಗಳಲ್ಲಿ ಕೋರ್ಟ್ಗೆ ಆಗಮಿಸುವ ಜನತೆಗೆ ನೆರಳು ಮತ್ತು ಉತ್ತಮ ವಾತಾವರಣ ನಿರ್ಮಿಸುವ ವ್ಯವಸ್ಥೆಯಾಗಬೇಕು. ಎಷ್ಟು ಗಿಡಗಳು ಬೇಕೋ ಕೇಳಿ ಅರಣ್ಯ ಇಲಾಖೆಯಿಂದ ಸಸಿಗಳನ್ನು ಒದಗಿಸಲು ಕ್ರಮ ವಹಿಸುತ್ತೇನೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಪ್ರೇಮಸಾಗರ, ವಕೀಲರಾದ ಸಂತೋಷ ಉಪ್ಪೆ, ಅನೀಲ ವಾಡೇಕರ್, ಸುನೀಲ ಯಾದವ, ಸುನೀಲ ಜಾಧವ, ಆರ್.ಪಿ ಜಾಧವ, ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಸಚಿನ ರಾಠೋಡ, ದಯಾನಂದ ಘೂಳೆ, ಕೇರಬಾ ಪವಾರ್, ಪ್ರಕಾಶ ಅಲ್ಮಾಜೆ, ಗುಂಡಪ್ಪ ಮುಧಾಳೆ, ಬಸವರಾಜ ಹಳ್ಳೆ, ಸಂತೋಷ ಪೋಕಲವಾರ, ಶಿವಾಜಿ ಬೋಗಾರ, ಸಂತೋಷ ಸೋಂಬ್ರೆ, ಸಂದೀಪ ಪಾಟೀಲ, ಪ್ರದೀಪ ಪವಾರ, ಆನಂದ ದ್ಯಾಡೆ ಸೇರಿದಂತೆ ಇಲಾಖೆಯ ಅಧಿಕಾರಿಗಳು, ನ್ಯಾಯವಾದಿಗಳು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

# ಕಡಿಮೆ ತೂಕ: ಗ್ಯಾಸ್ ಏಜೆನ್ಸಿ ವಿರುದ್ಧ ಮೊಕದ್ದಮೆ ದಾಖಲು

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜೂ.08–ದಿ.ಮಾರ್ಡನ ಹೆಚ್.ಪಿ. ಗ್ಯಾಸ್ ಏಜೆನ್ಸಿ ಭೇಟಿ ನೀಡಿ ಗ್ರಾಹಕರಿಗೆ ವಿತರಣೆ ಮಾಡುವ ಸುಮಾರು 08 ಎಲ್.ಪಿ.ಜಿ. ಸಿಲಿಂಡರ್‌ಗಳನ್ನು ತಪಾಸಣೆ ಮಾಡಿದಾಗ ಸಿಲಿಂಡರ್‌ಗಳಲ್ಲಿ ಸುಮಾರು 300 ರಿಂದ 400 ಗ್ರಾಂ ತೂಕ ಕಡಿಮೆ ಇರುವ ಪ್ರಯುಕ್ತ ವಿತರಕರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ ಎಂದು ಕಲಬುರಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಜಿಲ್ಲೆಯ ಎಲ್.ಪಿ.ಜಿ. ಸಿಲಿಂಡರ್‌ಗಳಲ್ಲಿ ಸುಮಾರು 2 ರಿಂದ 3 ಕೆ.ಜಿ ಕಡಿಮೆ ತೂಕ ಬಂದಿರುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋ ಪ್ರಯುಕ್ತ ಜಿಲ್ಲಾಧಿಕಾರಿಗಳು ಪರಿಶೀಲಿಸಲು ನಿರ್ದೇಶನ ನೀಡಿದ್ದರು. ಈ ಹಿನ್ನೆಲೆಯಲ್ಲಿ 2026ರ ಜೂನ್ 1 ರಂದು ಆಹಾರ ಇಲಾಖೆ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆನ್ನೊಳಗೊಂಡ ತಂಡವು ಜಂಟಿಯಾಗಿ ತಪಾಸಣೆ ಕೈಗೊಂಡಿದ್ದರು. ಕಡಿಮೆ ತೂಕ ಇರುವ ಸಿಲಿಂಡರ್ ಸರಬರಾಜು ಆಗುತ್ತಿದ್ದಲ್ಲಿ ಸಾರ್ವಜನಿಕರು ಕಲಬುರಗಿ ಆಹಾರ ಮತ್ತು ನಾಗರಿಕ ಸರಬರಾಜು ಗ್ರಾಹಕರ ಇಲಾಖೆಯ ಉಪನಿರ್ದೇಶಕರ ಕಚೇರಿಯ ದೂರವಾಣಿ ಸಂಖ್ಯೆ.08472–200112ಗೆ ದೂರು ಸಲ್ಲಿಸಬೇಕು. ಸಂಬಂಧಪಟ್ಟ ವಿತರಕರ ಅವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ಅವರು ತಿಳಿಸಿದ್ದಾರೆ.

# ಪರಿಸರ ಸಂರಕ್ಷಣೆ,ಜಾಗೃತಿ ಕುರಿತು ಹೆಚ್ಚೆಚ್ಚು ಸಾಹಿತ್ಯ ರಚನೆಯಾಗಲಿ

• ಮಲ್ಲಮ್ಮ ನುಡಿ ವಾರ್ತೆ ಔರಾದ



ಪ್ರಸ್ತುತ ನಾವು ಎದುರಿಸುತ್ತಿರುವ ಬಹುಮುಖ್ಯ ಸವಾಲು ಪರಿಸರ ಸಂರಕ್ಷಣೆ ಮತ್ತು ಜಾಗೃತಿ ಕುರಿತು ಹೆಚ್ಚೆಚ್ಚು ಸಾಹಿತ್ಯ ರಚನೆಯಾಗಬೇಕು ಎಂದು ಸಂಸ್ಕೃತಿ ಚಿಂತಕ ಜಗನ್ನಾಥ ಮೂಲಗೆ ಅಭಿಪ್ರಾಯಪಟ್ಟರು.ಪಟ್ಟಣದ ಕನ್ನಡ ಭವನದಲ್ಲಿ ಶನಿವಾರ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಕಸಾಪ ಹಮ್ಮಿಕೊಂಡ 'ಕನ್ನಡ ಸಾಹಿತ್ಯ–ಪರಿಸರ ಪ್ರಜ್ಞೆ' ವಿಚಾರ ಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ನಾವು ವಾಸಿಸುವ ಜನವಸತಿ ಪ್ರದೇಶದ ವಾತಾವರಣ, ಪರಿಸರ, ಹವಾಮಾನದ ಕುರಿತು ಅಕ್ಷರಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಸಾಹಿತಿಗಳು, ಬುದ್ದಿಜೀವಿಗಳು, ಸಮಾಜ ಸೇವಕರು ಮಾಡಬೇಕಿದೆ ಎಂದರು.ಸಂಪನ್ಮೂಲ ಶಿಕ್ಷಕ ಪ್ರದೀಪ ಗುಬನೂರೆ ಮಾತನಾಡಿ, ಪ್ರಸ್ತುತ ನಾವು ಹೆಚ್ಚು ಆಲೋಚಿಸಬೇಕಿರುವುದು ಪರಿಸರ ಸಂರಕ್ಷಣೆ ಬಗ್ಗೆಯೇ. ಹಾಗಾಗಿ ಸಾಹಿತ್ಯ ಕ್ಷೇತ್ರದ ಸಾಧಕರು, ಚಿಂತಕರು ಗಾಳಿ, ಬೆಳಕು, ನೀರಿನ ಮಿತವ್ಯಯ ಇಂತಹ ವಿಷಯಗಳಿಗೆ ಒತ್ತು ನೀಡಿ ಅದಕ್ಕೆ ಪೂರಕವಾದ ಸಾಹಿತ್ಯ ರಚಿಸಲು ಮುಂದಾಗಬೇಕು ಎಂದರು.

ಕಸಾಪ ಅಧ್ಯಕ್ಷ ಬಿ.ಎಂ ಅಮರವಾಡಿ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಬೇಂದ್ರೆ ಸೇರಿದಂತೆ ಅನೇಕರು ಪರಿಸರ ಕಾಳಜಿ, ಸಂರಕ್ಷಣೆ ಹಾಗೂ ಮಾನವ ಜೀವನದ ಮೇಲೆ ಪರಿಸರದ ಪ್ರಭಾವ, ಪರಿಣಾಮ, ವೈಚಾರಿಕತೆ ಮತ್ತು ಸೌಂದರ್ಯದ ಕುರಿತು ಬರೆದಿದ್ದಾರೆ. ಜನಪದ ಗಾಯಕರು, ವಚನಕಾರರು, ದಾಸರು, ಆಧುನಿಕ ಕವಿ ಲೇಖಕರು ಪರಿಸರ ಕುರಿತು ಕೃಷಿ ಮಾಡಿರುವುದು ನಮಗೆಲ್ಲ ದಾರಿದೀಪ ಎಂದರು.

ಶಿಕ್ಷಕ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಂಡರಿ ಆಡೆ, ಔರಾದ್ ತಾಲ್ಲೂಕು ಅಧ್ಯಕ್ಷ ಗಜಾನನ ಮಳ್ಳಾ ಹಾಗೂ ಕಮಲನಗರ ತಾಲ್ಲೂಕು ಅಧ್ಯಕ್ಷ ವಿಜಯಕುಮಾರ ನುದನೂರೆ ಮಾತನಾಡಿದರು.

ಈ ಸಂದರ್ಭದಲ್ಲಿ ಕಸಾಪ ಗೌರವ ಕಾರ್ಯದರ್ಶಿ ಜಗನ್ನಾಥ ದೇಶಮುಖ, ಮಲ್ಲಿಕಾರ್ಜುನ ಟಂಕಸಾಲೆ, ಗುರುನಾಥ ದೇಶಮುಖ, ಗೋವಿಂದ ಪಾಟೀಲ್, ವಿರೇಶ ಅಲಮಾಜೆ, ಜಗನ್ನಾಥ ಬಿರಾದಾರ, ಅಮರಸ್ವಾಮಿ ಸ್ಥಾವರಮಠ, ಆನಂದ ದ್ಯಾಡೆ, ಅಮೃತರಾವ ಬಿರಾದಾರ, ನಾಗನಾಥ ಅಣದೂರೆ, ಧನರಾಜ ಮಾನೆ, ಮಾರುತಿ ಚವ್ಹಾಣ ಸೇರಿದಂತೆ ಇನ್ನಿತರರಿದ್ದರು.ಶಿಕ್ಷಕ ಸಂಘದ ಪ್ರತಿನಿಧಿಗಳಿಗೆ ಸಮ್ಮಾನ ಇತ್ತೀಚೆಗೆ ಪ್ರಾಥಮಿಕ ಶಾಲಾ ಶಿಕ್ಷಕ ಸಂಘಕ್ಕೆ ಆಯ್ಕೆಯಾದ ಪಂಡರಿ ಆಡೆ, ಗಜಾನನ ಮಳ್ಳಾ, ವಿಜಯಕುಮಾರ ನುದನೂರೆ, ಮನೋಹರ ಅಂಬಾಟೆ, ಕಾಶಪ್ಪ ಮೇಗೂರೆ, ಪ್ರಭು ಬಾಳೂರೆ, ಶಿವಾನಂದ ಗಾದಗೆ, ಶರಣಪ್ಪ ಜಟಗೊಂಡ್, ವಿಠ್ಠಲ ದೇವಕತೆ, ವನಮಾಲಾ ಮಾರುತಿ ಚವ್ಹಾಣ, ಸಂಗೀತಾ ಮಾರುತಿ ರೆಡ್ಡಿ, ಸಮೀನಾ ನಯೀಮ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

# ಇಂದು ವಿದ್ಯುತ್ ಗ್ರಾಹಕರ ಕುಂದುಕೊರತೆ ಸಂವಾದ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

,ಜೂ.08–ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದಂತೆ ಕಲಬುರಗಿ ವೃತ್ತದ ವ್ಯಾಪ್ತಿಯಲ್ಲಿ ಬರುವ ಕಾರ್ಯ ಮತ್ತು ಪಾಲನೆ ಉಪವಿಭಾಗದ ಶಹಾಬಾದ ಉಪ ವಿಭಾಗಕ್ಕೆ ಸಂಬಂಧಿಸಿದಂತೆ ಗ್ರಾಹಕರ ಕುಂದುಕೊರತೆ ಸಂವಾದ ಸಭೆಯು ಇದೇ ಜೂನ್ 9 ರಂದು ಬೆಳಿಗ್ಗೆ 11 ಗಂಟೆಗೆ ಶಹಾಬಾದ ಉಪವಿಭಾಗದ ಕಾರ್ಯ ಮತ್ತು ಪಾಲನೆ ಉಪ–ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿಯಲ್ಲಿ ಜರುಗಲಿದೆ.

# ಜಗತ್ತಿಗೆ ಪ್ರೀತಿ-ಕಾಳಜಿ ಹಂಚಿದ ಬುದ್ಧ, ಬಸವ, ಡಾ. ಅಂಬೇಡ್ಕರ್ : ಡಾ. ಸೂರ್ಯಕಾಂತ್ ಸುಜ್ಯಾತ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಜಗತ್ತಿನಲ್ಲಿ ಬುದ್ಧ, ಬಸವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತು ಗಂಭೀರ ಅಧ್ಯಯನಗಳು ನಡೆಯುತ್ತಿವೆ. ಮನುಷ್ಯ ಪ್ರೀತಿ ಮತ್ತು ಜೀವ ಕಾಳಜಿಯಿಂದ ಬುದ್ಧ, ಬಸವ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂದೇಶಗಳನ್ನು ಚಿತ್ರಗಳ ಮೂಲಕ ಬಿಡಿಸಿ ಸಮಾಜಕ್ಕೆ ತಲುಪಿಸುವುದು ಸೃಜನಶೀಲ ಕಲಾವಿದರಿಂದ ಸಾಧ್ಯ ಎಂದು ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕ ಡಾ. ಸೂರ್ಯಕಾಂತ ಸುಜ್ಯಾತ ಹೇಳಿದರು. ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆ ಕಲಬುರಗಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಹಯೋಗದಲ್ಲಿ ರಾಮ ಮಂದಿರ ರಸ್ತೆ ಮಾನಕರ್ ಬಡಾವಣೆಯಲ್ಲಿರುವ ಬಿಸಿಲು ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ ಬುದ್ಧ, ಬಸವ ಮತ್ತು ಅಂಬೇಡ್ಕರ ರವರ ಸಂದೇಶಾಧರಿತ ಚಿತ್ರಕಲಾ ಶಿಬಿರವನ್ನು ಬುದ್ಧ, ಬಸವ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಉದ್ಘಾಟಿಸಿ ಮಾತನಾಡಿ ಕಳೆದ 2500 ವರ್ಷಗಳ ಹಿಂದೆ ಆಸೆಯೇ ದುಃಖಕ್ಕೆ ಮೂಲ ಎಂಬ ಬುದ್ಧನ ತತ್ವಗಳನ್ನು ಬಸವಣ್ಣ ವಚನ ರೂಪದಲ್ಲಿ ನೀಡಿದರೆ ಡಾ. ಬಿ. ಆರ್. ಅಂಬೇಡ್ಕರ್ ಸಂವಿಧಾನದ ಮೂಲಕ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಒದಗಿಸಿ ಶೋಷಿತರಿಗೆ ಮತ್ತು ಮಹಿಳೆಯರಿಗೆ ಗೌರವ ತಂದುಕೊಟ್ಟರು ಎಂದರು. ಸಾಹಿತ್ಯದ ಪ್ರಭಾವಕ್ಕಿಂತ ಚಿತ್ರಕಲೆ ಹೆಚ್ಚು ಪರಿಣಾಮಕಾರಿ ಮಾಧ್ಯಮ. ಸಾಹಿತ್ಯ ಮತ್ತು ಕಲೆಗಳು ಜಾತಿಗೆ ಸೀಮಿತವಾಗಬಾರದು. ಸಾಹಿತ್ಯ ಮತ್ತು ಕಲಾ ಮಾಧ್ಯಮ ಸಂವಹನದಿಂದ ಸಮಾಜದಲ್ಲಿನ ಕಂದಾಚಾರ, ಮೂಢ ನಂಬಿಕೆ, ದ್ವೇಷ, ಜಾತೀಯತೆ ಮತ್ತು ಸಂಘರ್ಷ ತೊಡೆದು ಹಾಕಬಹುದು. ಯುವ ಕಲಾವಿದರು ಚಿತ್ರಗಳ ಮೂಲಕ ಹೊಸದನ್ನು ಅಭಿವ್ಯಕ್ತಿಸಬೇಕು. ಸೃಜನಶೀಲ ಚಿತ್ರಕಲೆಗೆ ಅಭ್ಯಾಸ, ಅಧ್ಯಯನಶೀಲತೆ, ಕಲ್ಪನೆ ಮತ್ತು ನವೀನ ಆಲೋಚನೆಗಳಿಂದ ಸೃಜನಶೀಲ ಚಿತ್ರಗಳ ರಚನೆ ಮಾಡಬಹುದು. ಡಾ. ಬಿ. ಆರ್. ಅಂಬೇಡ್ಕರ್ ಅವರ ಬುದ್ಧ ಮತ್ತು ಧಮ್ಮ ಕೃತಿಯಲ್ಲಿ ರೋಹಿಣಿ ನದಿ ನೀರು ಹಂಚಿಕೆ ವಿವಾದ, ಅಂಗುಲಿಮಾಲನ ಮನಪರಿವರ್ತನೆ, ಬುದ್ಧ ತಪಸ್ಸಿಗೆ ಹೋಗಲು ಕಾರಣಗಳ ಬಗ್ಗೆ ವಿವರಗಳಿವೆ. ಸ್ವತಃ ಡಾ. ಬಿ. ಆರ್. ಅಂಬೇಡ್ಕರ್ ಅವರು ಚಿತ್ರಕಲಾವಿದರಾಗಿ ಕಣ್ಣು ತೆರೆದ ಬುದ್ಧನ ಚಿತ್ರ ಬಿಡಿಸಿದ್ದಾರೆ. ಆ ಚಿತ್ರ ಜಗತ್ತಿಗೆ ಬೆಳಕು ನೀಡುವ ಸಂಕೇತವಾಗಿದೆ ಎಂದು ವಿವರಿಸಿದರು. ಚಿತ್ರಕಲಾ ಶಿಬಿರದ ಸಂಚಾಲಕ ಹಾಗೂ ದೃಶ್ಯಬೆಳಕು ಸಾಂಸ್ಕೃತಿಕ ಸಂಸ್ಥೆ ಅಧ್ಯಕ್ಷ ಡಾ. ಪರಶುರಾಮ ಪಿ. ಅತಿಥಿ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ಕಳೆದ 14 ವರ್ಷಗಳಿಂದ ಯುವ ಕಲಾವಿದರನ್ನು ಬೆಳೆಸಲು ದೃಶ್ಯ ಬೆಳಕು ಸಾಂಸ್ಕೃತಿಕ ಸಂಸ್ಥೆ ಕಲಾ ಶಿಬಿರ ನಡೆಸುತ್ತಿದೆ. ವರ್ತಮಾನ ಸಂಗತಿ, ವ್ಯಕ್ತಿಯಾಧಾರಿತ ವಸ್ತು ವಿಷಯಗಳ ಬಗ್ಗೆ ಕಲಾವಿದರಲ್ಲಿ ಆಸಕ್ತಿ ಮೂಡಿಸಿ ಕಲೆಯ ವಿವಿಧ ಆಯಾಮಗಳ ಪರಿಚಯ, ಅನುಭವ, ಸೃಜನಶೀಲ ಕಲೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಲಾವಿದರನ್ನು ಜನಮುಖಿಗೊಳಿಸುವುದು ಅಗತ್ಯವಿದೆ.

# ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡಿದಲ್ಲಿ ಪರವಾನಿಗೆ ರದ್ದು

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಿಗದಿತ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿನ ದರ-ಕ್ಕೆ ರಸಗೊಬ್ಬರ ಮಾರಾಟ ಮಾಡಿದಲ್ಲಿ ಅಂತಹ ರಸಗೊಬ್ಬರ ಅಂಗಡಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಲ್ಲದೆ ಅಂತಹ ಕೃಷಿ ಪರಿಕರ ಮಾರಾಟ ಅಂಗಡಿಗಳ ಪರವಾನಿಗೆ ಸಹ ರದ್ದುಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದರು.

ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ರಸಗೊಬ್ಬರ ಅಂಗಡಿಗಳ ಡೀಲರ್-ರಿಟೇಲರ್ ಹಾಗೂ ಕೃಷಿ ಇಲಾಖೆ ಅಧಿಕಾರಿಗಳ ತುರ್ತು ಸಭೆ ಕರೆದ ಅವರು ಅಲ್ಲಲ್ಲಿ ರಸಗೊಬ್ಬರ ಹೆಚ್ಚಿನ ಮಾರಾಟಕ್ಕೆ ಮಾಡಲಾಗುತ್ತಿದೆ ಎಂದು ರೈತರಿಂದ ದೂರು ಬರುತ್ತಿವೆ, ಇದನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಡಿ.ಎ.ಪಿ. 50 ಕೆ.ಜಿ. ಬ್ಯಾಗಿಗೆ 1,350 ರೂ., ಯೂರಿಯಾ 45 ಕೆ.ಜಿ. ಬ್ಯಾಗಿಗೆ 266 ರೂ. ಎಂ.ಆರ್.ಪಿ. ದರವಿದ್ದು, ಇದಕ್ಕಿಂತ ಒಂದು ರೂಪಾಯಿ ಸಹ ಅನ್ನದಾತರ ಬಳಿ ಅಂಗಡಿಯವರು ಪಡೆದರೆ ಹುಷಾರ್ ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟದ ಹಾವಳಿ ತಡೆಯಲು ಕೂಡಲೆ ತಾಲೂಕಿಗೊಂದು ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಬೇಕು. ಎ.ಸಿ., ತಹಶೀಲ್ದಾರ, ಕೃಷಿ, ತೋಟಗಾರಿಕೆ ಎಲ್ಲಾ ಅಧಿಕಾರಿಗಳು ಹೋಬಳಿ, ತಾಲೂಕಿಗೆ ಹೋಗಿ ಪ್ರತಿನಿತ್ಯ ಸುಮಾರು 25 ರಸಗೊಬ್ಬರ ಅಂಗಡಿಗೆ ಭೇಟಿ ನೀಡಿ ತಪಾಸಣೆ ಮಾಡಬೇಕು. ಪಿ.ಓ.ಎಸ್, ದಾಸ್ತಾನು ಪರಿಶೀಲಿಸಬೇಕು ಎಂದರು.

ರಸಗೊಬ್ಬರ ಸಮಸ್ಯೆ ಕುರಿತು ರೈತರ ಅಹವಾಲು ಆಲಿಸಲು ಕೂಡಲೆ ಸಹಾಯವಾಣಿ ಸ್ಥಾಪಿಸಬೇಕು. ಪ್ರಸ್ತುತ ಬೇಡಿಕೆ ಅನುಗುಣವಾಗಿ ಡಿ.ಎ.ಪಿ. ಸೇರಿ ಇತರೆ ರಸಗೊಬ್ಬರಗಳನ್ನು ತಾಲೂಕಿಗೆ ಮರು ಹಂಚಿಕೆ ಮಾಡಬೇಕು. ಪ್ರತಿನಿತ್ಯ ಪಿ.ಓ.ಎಸ್., ಸ್ಟಾಕ್ ಅಪಡೇಟ್ ಮಾಡುವಂತೆ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಮತ್ತು ಪ್ರತಿ ದಿನದ ವರದಿ ತಮಗೆ ಸಲ್ಲಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಡಿ.ಸಿ. ಸೂಚಿಸಿದರು.

ಇನ್ನು ರಿಟೇಲರ್‌ಗಳು ರೈತರಿಗೆ ಹೊಸ ತಂತ್ರಜ್ಞಾನದ ನ್ಯಾನೋ ಯೂರಿಯಾ, ನ್ಯಾನೋ ಡಿ.ಎ.ಪಿ. ರಸಗೊಬ್ಬರ ತೆಗೆದುಕೊಂಡರೆ ಮಾತ್ರ ಡಿ.ಎ.ಪಿ. ನೀಡುತ್ತೇವೆ ಎನ್ನುವುದು ಸಮಂಜಸವಲ್ಲ. ಈ ರೀತಿ ರೈತರಿಗೆ ಯಾವುದೇ ಅಂಗಡಿವರು ಇಂತಹದೆ ರಸಗೊಬ್ಬರ ಪಡೆಯುವಂತೆ ಒತ್ತಾಯ ಮಾಡುವಂತಿಲ್ಲ. ರೈತರಿಗೆ ನೂತನ ತಂತ್ರಜ್ಞಾನದ ರಸಗೊಬ್ಬರ ಕುರಿತು ಸಲಹೆ ಮಾತ್ರ ನೀಡಬಹುದಾಗಿದೆ ಎಂದ ಅವರು, ಕೊನೆಗೆ ರೈತನ ಇಚ್ಛೆಯಂತೆ ಗೊಬ್ಬರ ಪೂರೈಸಿ ಎಂದರಲದ್ದೆ ಜಿಲ್ಲಾಡಳಿತ, ಕೃಷಿ ಇಲಾಖೆಯ ನಿರ್ದೇಶನ ಪಾಲಿಸುವ ಮೂಲಕ ಅನ್ನದಾತನ ಒಳಿತಿಗಾಗಿ ಅಗತ್ಯ ಸಹಕಾರ ನೀಡುವಂತೆಯೂ ರಿಟೇಲರ್‌ಗಳಿಗೆ ಮನವಿ ಮಾಡಿಕೊಂಡರು.



ಚಿತ್ತಾಪುರ ಪಟ್ಟಣದಲ್ಲಿ ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತಿದೆ ಎಂದು ಪತ್ರಿಕೆಯಲ್ಲಿ ಸುದ್ದಿ ಬಂದಿದೆ ಏನು ಮಾಡಿದ್ದೀರಿ? ಎಂದು ಸಹಾಯಕ ಕೃಷಿ ನಿರ್ದೇಶಕ ಸಂಜೀವ ಕುಮಾರ ಅವರನ್ನು ಕೇಳಿದ ಜಿಲ್ಲಾಧಿಕಾರಿಗಳು, ಕೂಡಲೆ ಸತ್ಯಾಸತ್ಯತೆ ಪರಿಶೀಲಿಸಿ ಅಂಗಡಿ ಮೇಲೆ ಇಂದೇ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

**ಹಳ್ಳಿಗೆ ಹೋಗ್ರಿ,ರೈತರ ಸಮಸ್ಯೆ ಆಲಿಸಿ:** ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟ ಮಾಡಲಾಗುತ್ತದೆ ಎಂದು ಯಾವುದೇ ಮೂಲೆದಿಂದ ರೈತರೊಬ್ಬರ ದೂರು ಹೊತ್ತಿಕೊಂಡು ಡಿ.ಸಿ. ಕಚೇರಿಗೆ ಬರಬೇಕಾ? ನಿಮಗೆ ಮಾಹಿತಿ ಇಲ್ವಾ ಎಂದು ತೀವ್ರ ಅಸಮಾಧಾನದಿಂದಲೆ ಕೃಷಿ ಅಧಿಕಾರಿಗಳನ್ನು ಪ್ರಶ್ನಿಸಿದ ಡಿ.ಸಿ. ಅವರು ಮತ್ತೆ ರೈತರಿಂದ ದೂರು ಬಂದಲ್ಲಿ ಡೀಲರ್-ರಿಟೇಲರ್ ಜೊತೆ ಅಧಿಕಾರಿಗಳ ಮೇಲೆಯೂ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅಧಿಕಾರಿಗಳು ಇನ್ಮುಂದೆ ಕಚೇರಿಯಲ್ಲಿ ಕೂಡದೆ ಹಳ್ಳಿ, ಹೋಬಳಿಗೆ ಭೇಟಿ ನೀಡಬೇಕು. ನೀವು ಕ್ಷೇತ್ರ-ಕ್ಕೆ ಭೇಟಿ ನೀಡಿದರೆ ಈ ಸಮಸ್ಯೆ ತಲೆದೋರದು. ಕಚೇರಿಯಲ್ಲಿ ಕುಳಿತುಕೊಳ್ಳದೆ ರೈತರ ಬಳಿಗೆ ಹೋಗಿ ಅವರ ಅಹವಾಲು ಆಲಿಸಬೇಕು. ಡೀಲರ್, ರಿಟೇಲರ್‌ಗಳು ಸಮಸ್ಯೆ ಅನುಭವಿಸುತ್ತಿದಲ್ಲಿ ಅದರ ನಿವಾರಣೆಗೂ ಪ್ರಯತ್ನಿಸಬೇಕು. ಪ್ರತಿನಿತ್ಯ ಭೇಟಿ, ತಪಾಸಣೆ ಕುರಿತು ಜಿಯೋ ಟ್ಯಾಗ್ ಫೋಟೊ, ವರದಿ ಸಲ್ಲಿಸಬೇಕು ಎಂದೂ ಕೃಷಿ ಅಧಿಕಾರಿಗಳಿಗೆ ಡಿ.ಸಿ. ಖಡಕ್ ಸೂಚನೆ ನೀಡಿದರು.

ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 733 ಡೀಲರ್ ಗಳಿದ್ದು, ಇದರಲ್ಲಿ 81 ಹೋಲಸೇಲ್ ಡೀಲರ್ ಮತ್ತು 540 ರಿಟೇಲರ್ ಮಾತ್ರ ಚಾಲ್ತಿಯಲ್ಲಿದ್ದಾರೆ. ಪ್ರಸ್ತುತ ಜಿಲ್ಲೆಯ ಅವಿಭಜಿತ ಏಳು ತಾಲೂಕುಗಳ ರಿಟೇಲ್ ಶಾಪ್‌ಗಳಲ್ಲಿ ವಿಶೇಷವಾಗಿ 2,143 ಮೆಟ್ರಿಕ್ ಟನ್ ಡಿ.ಎ.ಪಿ. 6,421 ಮೆಟ್ರಿಕ್ ಟನ್ ಯೂರಿಯಾ ಲಭ್ಯವಿದೆ. ಅದೇ ರೀತಿ ಅಫಜಲಪೂರ, ಚಿತ್ತಾಪುರ, ಜೇವರ್ಗಿ, ಕಲಬುರಗಿ ತಾಲೂಕಿನ ತಾಲೂಕಾ ಡೀಲರ್ ಬಳಿ 2,999 ಮೆಟ್ರಿಕ್ ಟನ್ ಡಿ.ಎ.ಪಿ, 3,011 ಮೆಟ್ರಿಕ ಟನ್ ಯೂರಿಯಾ ದಾಸ್ತಾನು ಲಭ್ಯವಿದ್ದು, ಜಿಲ್ಲೆಯಲ್ಲಿ ರಸಗೊಬ್ಬರದ ಯಾವುದೇ ಕೊರತೆ ಇಲ್ಲ. ಕಳೆದ 15 ದಿನದಲ್ಲಿ 117 ಕಡೆ ಕೃಷಿ ಅಧಿಕಾರಿಗಳ ತಂಡ ರಸಗೊಬ್ಬರ ಅಂಗಡಿಗಳ ಮೇಲೆ ದಾಳಿ ಮಾಡಲಾಗಿದ್ದು, ಸುಮಾರು 51 ಅಂಗಡಿಗಳು ನಿಯಮ ಉಲ್ಲಂಘಿಸಿ ಮಾರಾಟ ಮಾಡುತ್ತಿರುವುದು ಕಂಡುಬಂದಿರುವುದರಿಂದ ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲದೆ 66.27 ಲಕ್ಷ ರೂ. ಮೊತ್ತದ ರಸಗೊಬ್ಬರ ಮಾರಾಟ ಮಾಡದಂತೆ ತಡೆ ಆದೇಶ ಸಹ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಪ್ರೊಬೇಷನರ್ ಐ.ಎ.ಎಸ್. ಅಧಿಕಾರಿ ಶಿಖರ್ ಮೋಘಾ, ಕೃಷಿ ಉಪನಿರ್ದೇಶಕಿ ಅನುಸೂಯಾ ಹೂಗಾರ, ಬಾಲರಾಜ ಬಿರಾದಾರ ಸೇರಿದಂತೆ ತಾಲೂಕಿನ ಸಹಾಯಕ ನಿರ್ದೇಶಕರು, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು, ರಸಗೊಬ್ಬರ ವಿತರಕಾರದ ಡೀಲರ್, ರಿಟೇಲರ್, ರಸಗೊಬ್ಬರ ಕಂಪನಿ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಹೊಲಿಗೆ ಯಂತ್ರ ವಿತರಣೆ



**ಬಾಗಲಕೋಟೆ:** ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಟೈಲರಿಂಗ್ ವೃತ್ತಿ ಸಹಕಾರಿಯಾಗಲಿದೆ ಎಂದು ಬಾಗಲಕೋಟೆ ಶಾಸಕ ಉಮೇಶ ಮೇಟಿ ಹೇಳಿದರು.

ನವನಗರದ ತಮ್ಮ ಕಚೇರಿಯಲ್ಲಿ ಸೋಮವಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2024-25 ನೇ ಸಾಲಿನ ಸ್ವಯಂ ಉದ್ಯೋಗ ಯೋಜನೆಯಡಿ 21 ಜನ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದ ಅವರು, ಮಹಿಳೆಯರು ಕುಟುಂಬದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಹೊಲಿಗೆ ತರಬೇತಿ ಹಾಗೂ ಯಂತ್ರಗಳ ನೆರವಿನಿಂದ ಸ್ವಂತ ಉದ್ಯೋಗ ಆರಂಭಿಸಿ ಆದಾಯ ಗಳಿಸಬಹುದಾಗಿದೆ. ಸರಕಾರ ಮಹಿಳೆಯರ ಸಬಲೀಕರಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳ ಸದುಪಯೋಗವನ್ನು ಮಹಿಳೆಯರು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಜೀವನ್ ಪ್ರಸಾದ್, ತಾಲ್ಲೂಕು ಸಹಾಯಕ ಅಭಿವೃದ್ಧಿ ಅಧಿಕಾರಿ ರಂಜಾನಬಿ ವಾಲಿಕಾರ್ ಸೇರಿದಂತೆ ವಿವಿಧ ಗ್ರಾಮಗಳ ಪ್ರಮುಖರಾದ ಎಸ್.ಎನ್.ರಾಂಪುರ, ದ್ಯಾಮಣ್ಣ ಗಾಳಿ, ಸಂಗಣ್ಣ ಹಂಡಿ, ಅಕ್ಬರ್ ಮುಲ್ಲಾ, ಬಸವಂತಪ್ಪ ಅಂತರತಾನಿ, ಶಶಿಕಾಂತ ಪೂಜಾರ, ರಜಾಕ್ ಬೆನ್ನೂರು ಉಪಸ್ಥಿತರಿದ್ದರು. ಯೋಜನೆಯ ಫಲಾನುಭವಿಗಳಾದ ನೇತ್ರಾ ಸಾಲಿ, ಯಮನವ್ವ ಗೌಡರ, ಮಹಾದೇವಿ ತುಂಬರಮಟ್ಟಿ, ಶ್ರೀದೇವಿ ಆಡಿನ, ಸಾವಿತ್ರಿ ಮುತ್ತಗಿ, ಮುತ್ತವ್ವ ಕಡೂರು ಸೇರಿದಂತೆ ಒಟ್ಟು 21 ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಲಾಯಿತು. ತಾಲ್ಲೂಕು ಸಹಾಯಕ ಅಭಿವೃದ್ಧಿ ಅಧಿಕಾರಿ ರಂಜಾನಬಿ ವಾಲಿಕಾರ ಉಪಸ್ಥಿತರಿದ್ದರು.

## ಕಟ್ಟಕಡೆಯ ವ್ಯಕ್ತಿಗೂ ಅಭಿವೃದ್ಧಿಯ ಫಲ ತಲುಪಬೇಕು



**ಬಾಗಲಕೋಟೆ:** ಪಂಡಿತ್ ದೀನದಯಾಳ ಉಪಾಧ್ಯಾಯರ ಅಂತ್ಯೋದಯ ತತ್ವದ ಆಧಾರದ ಮೇಲೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಭಿವೃದ್ಧಿಯ ಫಲ ತಲುಪಿಸುವ ಗುರಿಯೊಂದಿಗೆ ಕಾರ್ಯಕರ್ತರು ಕಾರ್ಯನಿರ್ವಹಿಸಬೇಕು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕೇತ್ರದಿಂದ ಮುಚಖಂಡಿಯಲ್ಲಿ ನಡೆದ ಎರಡು ದಿನಗಳ ಪ್ರಶಿಕ್ಷಣ ವರ್ಗದ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪಕ್ಷದ ತತ್ವಸಿದ್ಧಾಂತಗಳು, ಸಂಘಟನೆಯ ಬಲವರ್ಧನೆ ಮತ್ತು ಕಾರ್ಯಕರ್ತರ ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡಲು ಈ ಪ್ರಶಿಕ್ಷಣ ವರ್ಗವನ್ನು ಆಯೋಜಿಸಲಾಗಿತ್ತು, ಕಾರ್ಯಕರ್ತರು ಪಕ್ಷದ ತತ್ವ ಹಾಗೂ ಸಂಘಟನಾ ಬಲ ಹೆಚ್ಚಿಸುವ ಮೂಲಕ ಪಕ್ಷದ ಸಿದ್ಧಾಂತಗಳು, ಅಂತ್ಯೋದಯ ಚಿಂತನೆ ಮತ್ತು ರಾಷ್ಟ್ರಪ್ರಥಮ ತತ್ವಗಳನ್ನು ಬೋಧಿಸುವುದು ಇದರ ಮುಖ್ಯ ಗುರಿಯಾಗಿದೆ. ಪಕ್ಷದ ತತ್ವ, ಸಂಘಟನೆ ಮತ್ತು ರಾಷ್ಟ್ರಸೇವೆಯ ಧ್ಯೇಯಗಳನ್ನು ಕಾರ್ಯಕರ್ತರು ಜನರಿಗೆ ತಲುಪಿಸುವ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು, ಸಂಘಟಿತ ಕಾರ್ಯಪದ್ಧತಿ ಮತ್ತು ಸಮರ್ಪಿತ ಸೇವಾಭಾವದಿಂದ ಮಾತ್ರ ಪಕ್ಷ ಇನ್ನಷ್ಟು ಬಲಿಷ್ಠವಾಗಲು ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಪ್ರಶಿಕ್ಷಣ ವರ್ಗದ ಸಂಚಾಲಕ ಶಂಕರ ಹುನ್ನೂರ, ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮೀನಾರಾಯಣ ಕಾಸಟ್, ಭಾಗೀರಥಿ ಪಾಟೀಲ, ರಾಜು ನಾಯ್ಕರ, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಮುತ್ತಣ್ಣ ಬೆಣ್ಣೂರ, ಬಸವರಾಜ ಯಂಕಂಚಿ, ಸತ್ಯನಾರಾಯಣ ಹೇಮಾದ್ರಿ, ಶಶಿ ಗುತ್ತನ್ನವರ, ನಗರ ಮಂಡಲ ಅಧ್ಯಕ್ಷ ಬಸವರಾಜ ಕಟಗೇರಿ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ, ರಾಜು ಮುದೇನೂರ, ರಾಜು ರೇವಣಕರ್, ಕಲ್ಲಪ್ಪ ಭಗವತಿ, ಮಲ್ಲಯ್ಯ ವಿಜಾಪುರ, ಉಮೇಶ ಹಂಚಿನಾಳ ಸೇರಿದಂತೆ ನಗರ ಹಾಗೂ ಗ್ರಾಮೀಣ ಮಂಡಲ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

## ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿಗೆ ಒತ್ತು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತುಮಕೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಿಲ್ವರ್ ಜುಬ್ಲಿ ಸಂಭ್ರಮಾಚರಣೆ ಅಂಗವಾಗಿ ಹಾಗೂ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಶ್ರಯದಲ್ಲಿ ಜೂನ್ 6 ಮತ್ತು 7ರಂದು ಆಯೋಜಿಸಲಾದ ಜಿಲ್ಲಾ ಚೇಂಬರ್‌ಗಳ ರಾಜ್ಯಮಟ್ಟದ ಸಮ್ಮೇಳನದಲ್ಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸಿದರು.

ಸಮ್ಮೇಳನದ ವೇಳೆ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು ಎಫ್‌ಕೆಸಿಸಿಐ ಅಧ್ಯಕ್ಷರಾದ ಉಮಾರೆಡ್ಡಿ ಅವರಿಗೆ ಬಳ್ಳಾರಿ ಜಿಲ್ಲೆಯ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳ ಕುರಿತು ಮನವಿಪತ್ರ ಸಲ್ಲಿಸಿದರು. ಮನವಿಯಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಅಗತ್ಯ ಮೂಲಸೌಕರ್ಯಗಳ ಕಲ್ಪನೆ, ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯ ಸುಧಾರಣೆ, ಉದ್ಯಮಿಗಳಿಗೆ ಅಗತ್ಯವಾದ ಸೌಲಭ್ಯಗಳ ವಿಸ್ತರಣೆ ಹಾಗೂ ಜಿಲ್ಲೆಯ ಆರ್ಥಿಕ ಪ್ರಗತಿಗೆ ಪೂರಕವಾದ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

ಇದೇ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಅವರ ಸೇವೆ ಮತ್ತು ನಾಯಕತ್ವವನ್ನು ಗುರುತಿಸಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಹ್ಯಾಲಿಸ್ ಬ್ಲೂ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿರುವ ಹಾಗೂ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ವಿಶೇಷ ಆಹ್ವಾನಿತರಾದ ಕೆ.ಎಂ. ಶಿವಮೂರ್ತಿ ಅವರಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆ, ಉದ್ಯಮಶೀಲತೆ ಮತ್ತು ಉದ್ಯೋಗ ಸೃಷ್ಟಿಯಲ್ಲಿನ



ಕೊಡುಗೆಯನ್ನು ಪರಿಗಣಿಸಿ "ಉತ್ತಮ ಕೈಗಾರಿಕಾ ಉದ್ಯಮಿ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಸಮ್ಮೇಳನದಲ್ಲಿ ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಎಸ್. ದೊಡ್ಡನಗೌಡ, ಜಂಟಿ ಕಾರ್ಯದರ್ಶಿಗಳಾದ ವಿ. ರಾಮಚಂದ್ರ, ಕಾರ್ಯಕಾರಿ ಸಮಿತಿ ಸದಸ್ಯರಾದ ಪಿ. ಗಿರೀಶ್, ಆರ್. ನಾಗರಾಜ್, ಜಿ. ಹನುಮೇಶ್ ಬಾಬು ಸೇರಿದಂತೆ ಹಲವರು ಭಾಗವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದ ಈ ರಾಜ್ಯಮಟ್ಟದ ಸಮ್ಮೇಳನವು ಕೈಗಾರಿಕೆ, ವಾಣಿಜ್ಯ, ಹೂಡಿಕೆ, ಉದ್ಯಮಾಭಿವೃದ್ಧಿ ಹಾಗೂ ಉದ್ಯಮಿಗಳು ಎದುರಿಸುತ್ತಿರುವ ಸವಾಲುಗಳ ಕುರಿತು ಸಮಗ್ರ ಚರ್ಚೆಗೆ ವೇದಿಕೆಯಾಯಿತು. ಕೈಗಾರಿಕಾ ವಲಯದ ಬೆಳವಣಿಗೆಗೆ ಪೂರಕವಾದ ಹಲವು ಸಲಹೆಗಳು, ಶಿಫಾರಸುಗಳು ಹಾಗೂ ಅಭಿವೃದ್ಧಿ ಯೋಜನೆಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಈ ಸಮ್ಮೇಳನದಲ್ಲಿ ಬಳ್ಳಾರಿ ಜಿಲ್ಲೆಯ ಕೈಗಾರಿಕಾ ಅಭಿವೃದ್ಧಿ, ಹೂಡಿಕೆ ಆಕರ್ಷಣೆ ಮತ್ತು ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣಕ್ಕೆ ಸಂಬಂಧಿಸಿದ ವಿಚಾರಗಳು ಪ್ರಮುಖವಾಗಿ ಪ್ರಸ್ತಾಪಗೊಂಡಿದ್ದು, ಜಿಲ್ಲೆಯ ಸಮಗ್ರ ಆರ್ಥಿಕ ಪ್ರಗತಿಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳ ಗಮನ ಸೆಳೆಯಲಾಯಿತು.

## ಯೋಧರು ದೇಶದ ಜೀವಾಳ: ರುದ್ರಮುನಿ ಶ್ರೀಗಳು

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜೈ ಜವಾನ್, ಜೈ ಕಿಸಾನ್ ಎಂಬ ಘೋಷಣೆಯಂತೆ ರೈತರು ನಮಗೆ ಅನ್ನ ನೀಡಿದರೆ, ಯೋಧರು ನಮಗೆ ರಕ್ಷಣೆ ನೀಡುತ್ತಾರೆ ಎಂದು ಗಿರಿಸಾಗರದ ಕಲ್ಯಾಣ ಹಿರೇಮಠದ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಮಲ್ಲಾಪೂರ ಗ್ರಾಮದಲ್ಲಿ ಹೋಮಣ್ಣ ತಂಬಾಕದ ಅವರು ಸೈನಿಕ ಸೇವೆಯಲ್ಲಿ 24 ವರ್ಷ ಹಾಗೂ ರೇಲ್ವೆ ಇಲಾಖೆಯಲ್ಲಿ 12 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾದ ಪ್ರಯುಕ್ತ ಹಮ್ಮಿಕೊಳ್ಳಲಾದ ಅಭಿನಂದನಾ ಸಮಾರಂಭದಲ್ಲಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ರೈತರು, ಸೈನಿಕರು ಮತ್ತು ಶಿಕ್ಷಕರು ನಮ್ಮ ದೇಶದ ಪ್ರಬಲ ಮೂರು ಅಸ್ತ್ರಗಳಿದ್ದಂತೆ. ನಾವು ಇಂದು ನಮ್ಮ ಮನೆಗಳಲ್ಲಿ ನೆಮ್ಮದಿಯಿಂದ ತೂಗಡಿಸುತ್ತಿದ್ದೇವೆ, ಹಬ್ಬ-ಹರಿದಿನಗಳನ್ನು ಸಡಗರದಿಂದ ಆಚರಿಸುತ್ತಿದ್ದೇವೆಂದರೆ ಅದಕ್ಕೆ ಕಾರಣ ಗಡಿಯಲ್ಲಿ ನಿಂತು ದೇಶವನ್ನು ಕಾಯುತ್ತಿರುವ ನಮ್ಮ ಯೋಧರ ಜೀವನ ಅಷ್ಟು ಸುಲಭದ್ದಲ್ಲ. ಹೆತ್ತತಾಯಿ, ಹೆಂಡತಿ, ಮಕ್ಕಳನ್ನು ಬಿಟ್ಟು ದೇಶವೇ ನನ್ನ ಮೊದಲ ಆದ್ಯತೆ ಎಂದು ದೇಶಕ್ಕಾಗಿ ಹೊರಡುತ್ತಾರೆ. ಒಬ್ಬ ಯೋಧ ತಾನು ಬದುಕಿರುವಾಗ ದೇಶವನ್ನು ಕಾಯುತ್ತಾನೆ, ಹುತಾತ್ಮನಾದಾಗ ದೇಶದ ಯುವಜನತೆಗೆ ಸ್ಫೂರ್ತಿಯಾಗುತ್ತಾನೆ. ಈ ರೀತಿ ಹೋಮೇಶ ತಂಬಾಕದ 24 ವರ್ಷಗಳ ಅವಿರತ ಸಾರ್ಥಕ ಸೇವೆಯಿಂದ ಈ ಊರಿನ ಯುವ ಜನತೆಗೆ ಸೂರ್ತಿಯಾಗಿದ್ದರೆ. ಅವರ ವಿಶ್ರಾಂತ ಜೀವನ ಸುಖಕರವಾಗಿರಲಿ. ದೇವರು ಅವರಿಗೆ ಆಯುರಾರೋಗ್ಯ ಐಸಿರಿ ಕೊಟ್ಟು ಕಾಪಾಡಲಿ ಎಂದು ಆಶೀರ್ವದಿಸಿದರು.



ಕಾರ್ಯಕ್ರಮದಲ್ಲಿ ಪೂಜ್ಯರು ಹೋಮಣ್ಣ ತಂಬಾಕದ ಕುಟುಂಬದವರು ಹಾಗೂ ಸನ್ಮಾನಿಸಿದರು. ಹಾಗೂ 25 ಮಾಜಿ ಸೈನಿಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಮತ್ತು ಗ್ರಾಮದ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರೋತಾಹಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಸೈನಿಕರು, ಗ್ರಾಮದ ಸಮಸ್ತ ಗುರು-ಹಿರಿಯರು, ತಂಬಾಕದ ಕುಟುಂಬ ವರ್ಗ, ಯುವಕರು ಭಾಗವಹಿಸಿದ್ದರು.

ಮುತ್ತು ತಂಬಾಕದ ಸ್ವಾಗತಗೀತೆ ಹಾಡಿದರು. ನಾಗೇಶ ಬೆಣ್ಣೂರ ನಿರೂಪಿಸಿ, ವಂದಿಸಿದರು.

## ಗ್ರಾಮೀಣ ಭಾಗದಲ್ಲಿ ವೈದ್ಯರ ಸೇವೆ ಅಗತ್ಯ: ಪ್ರಲ್ಹಾದ ಜೋಶಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಭಾರತ ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಸಾಧಿಸಿದೆ. ಅನ್ಯರಾಷ್ಟ್ರಗಳ ಜನರು ಭಾರತಕ್ಕೆ ವೈದ್ಯಕೀಯ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ನಗರ ಪ್ರದೇಶಕ್ಕಿಂತ ಗ್ರಾಮೀಣ ಭಾಗಗಳಲ್ಲಿ ವೈದ್ಯಕೀಯ ಸೇವೆಯ ಅಗತ್ಯವಿದೆ ಎಂದು ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬಿ.ವಿ.ವಿ ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ 17 ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪದವೀಧರರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಪದವೀಧರರಾದ ನಿಮಗೆ ಇಂದಿನಿಂದ ಕಲಿಕೆ ಆರಂಭವಾಗುತ್ತದೆ. ಸವಾಲುಗಳು ಕೂಡ ಎದುರಾಗುವುದು ಈಗಿನಿಂದಲೇ. ಸವಾಲುಗಳನ್ನು ಎದುರಿಸಿ ವೃತ್ತಿಯಲ್ಲಿ ಉತ್ಕೃಷ್ಟವಾದದ್ದನ್ನು ಸಾಧಿಸಬೇಕು ಎಂದರು. ದೇಶದ ವೈದ್ಯಕೀಯ ಉತ್ಕೃಷ್ಟತೆಯನ್ನು ನೆನಪಿನಲ್ಲಿಟ್ಟುಕೊಂಡು ಸಮಾಜ ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಿ ಎಂದು ಯುವ ವೈದ್ಯರಿಗೆ ಕರೆ ನೀಡಿದ ಸಚಿವರು, ಉತ್ತರ ಕರ್ನಾಟಕದಲ್ಲಿ ಡಾ.ವೀರಣ್ಣ ಚರಂತಿಮಠ ಅತ್ಯುತ್ತಮವಾದ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಿ ವೈದ್ಯಕೀಯ ಕ್ಷೇತ್ರಕ್ಕೆ ಗಮನಾರ್ಹವಾದ ಕೊಡುಗೆ ನೀಡುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಇನ್ನೋರ್ವ ಅತಿಥಿ ಬೆಂಗಳೂರಿನ ಖ್ಯಾತ ಹಿರಿಯ ಹೃದ್ರೋಗ ತಜ್ಞ ಡಾ.ಗಿರೀಶ ಬಿ. ನವಸುಂದಿ ಮಾತನಾಡಿ, ಶಿಕ್ಷಿತನಾಗುವುದು ಎಂದರೆ ಕೇವಲ ವೈಯಕ್ತಿಕ ಬೆಳವಣಿಗೆಯಲ್ಲ. ಅದು ಸಮುದಾಯದ ಬೆಳವಣಿಗೆ. ವೈದ್ಯರಾಗಿ ಅತ್ಯುತ್ತಮ ಸೇವೆ ಒದಗಿಸಿ ಸಮಾಜದ ಪ್ರಗತಿಗೆ ಕಾರಣರಾಗಿ. ಪ್ರತಿಫಲವನ್ನು ನಿರೀಕ್ಷಿಸದೆ ವೃತ್ತಿಗೆ ಕೊಡುಗೆ ನೀಡಿ. ಸಾಮಾಜಿಕ ಮಾಧ್ಯಮವನ್ನು ಸೀಮಿತವಾಗಿ ಉಪಯೋಗಿಸಿ. ವಿಷಯದ ಪಠ್ಯಪುಸ್ತಕಗಳೊಂದಿಗೆ ಸಾಹಿತ್ಯ ಮತ್ತು ತತ್ವಜ್ಞಾನದ ಪುಸ್ತಕಗಳನ್ನು ಓದಿ ಎಂದು ಕಿವಿಮಾತು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ. ವೀರಣ್ಣ ಚರಂತಿಮಠ, ರೋಗಿಗಳ ಸೇವೆ ದೇವರ ಸೇವೆ ಎಂದು ಭಾವಿಸಿ ಚಿಕಿತ್ಸೆ ನೀಡಿ. ವೈದ್ಯಕೀಯ ಶಿಕ್ಷಣಕ್ಕೆ ಅಗತ್ಯವಾದ ಎಲ್ಲ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಭಾಗದ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಎಚ್.ಎಸ್.ಕೆ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎಲ್ಲ ಪ್ರಕಾರದ ವಿಶೇಷ ಚಿಕಿತ್ಸೆಗಳ ಸೌಲಭ್ಯ ಸಾರ್ವಜನಿಕರಿಗೆ ದೊರೆಯುತ್ತಿದೆ ಎಂದರು.



ವಿದ್ಯಾರ್ಥಿನಿಯರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಸ್ವಾಗತಿಸಿ, ಬಿ.ವಿ.ವಿ ಸಂಘ ಮತ್ತು ಮೆಡಿಕಲ್ ಕಾಲೇಜಿನ ಬೆಳವಣಿಗೆ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ.ಅನಿತಾ ಹೆರೂರ ಮತ್ತು ಡಾ.ಮಂಜುಳಾ ಪಾಟೀಲ ಪರಿಚಯಿಸಿದರು. ಡಾ.ಸಿ.ಎಸ್.ಹಿರೇಮಠ ವೈದ್ಯಕೀಯ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಡಾ.ಮಹಾಂತೇಶ ಭೂತಲ್ ವಂದಿಸಿದರು.

ಪದವೀಧರರಾದ ಡಾ.ಅಭಿಷೇಕ ಮತ್ತು ಡಾ.ಸಂಜನಾ ಮೆಡಿಕಲ್ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸದ ಅನುಭವ ಹಂಚಿಕೊಂಡರು. ಡಾ.ಜಯರಾಜ, ಡಾ.ಕೃತಿಕಾ, ಡಾ.ಶಾಂಭವಿ, ಡಾ.ಸುರಜ ಮತ್ತು ಡಾ.ವಿದ್ಯಾಶ್ರೀ ಕಾರ್ಯಕ್ರಮ ನಿರೂಪಿಸಿದರು.

ವೇದಿಕೆಯಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ, ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

240 ಸ್ನಾತಕ ಮತ್ತು 10 ಸ್ನಾತಕೋತ್ತರ ಪದವಿಧರರಿಗೆ ಪದವಿ ಪ್ರದಾನ ಮಾಡಲಾಯಿತು. ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಬಯೋಕೆಮಿಸ್ಟ್ರಿ ಮತ್ತು ಫಿಜಿಯಾಲಜಿ ವಿಷಯದಲ್ಲಿ ಕ್ರಮವಾಗಿ 7 ಮತ್ತು 8 ನೇ ರ‍್ಯಾಂಕ್ ಪಡೆದಿರುವ ಡಾ.ಶ್ವೇತಾ ಮತ್ತು ಡಾ.ಸೃಷ್ಟಿ ಅವರನ್ನು ಮತ್ತು ಅಧಿಕ ಅಂಕ ಪಡೆದು ಉತ್ತೀರ್ಣರಾಗಿರುವ ಡಾ.ರೇವಣ್ಣ, ಡಾ.ಹರ್ಷಿಣಿ ಮತ್ತು ಡಾ.ತೇಜಸ್ವಿನಿ ಅವರಿಗೆ ವಿವಿಧ ದಾನಿಗಳು ಸ್ಥಾಪಿಸಿದ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು.

# ಹಸಿರು ಸೇನೆಗೆ ನೂತನ ರಾಜ್ಯ ಕಾರ್ಯದರ್ಶಿಯಾಗಿ ಎಚ್.ಆರ್. ಬಡಿಗೇರ ನೇಮಕ



**ಕೆಂಭಾವಿ:** ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿಯಾಗಿ ಪಟ್ಟಣದ ರೈತ ಹೋರಾಟಗಾರ ಎಚ್.ಆರ್. ಬಡಿಗೇರ ಅವರು ಅಧಿಕೃತವಾಗಿ ನೇಮಕಗೊಂಡಿದ್ದಾರೆ.

ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಜೂನ್ 6, ಶುಕ್ರವಾರ ನಡೆದ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ಈ ಹಿಂದೆ ಯಾದಗಿರಿ ಜಿಲ್ಲಾಧ್ಯಕ್ಷರಾಗಿ ಸಂಘಟನೆಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದ ಎಚ್.ಆರ್. ಬಡಿಗೇರ ಅವರ ದಕ್ಷ ಕಾರ್ಯವೈಖರಿಯನ್ನು ಗುರುತಿಸಿ, ಅವರಿಗೆ ರಾಜ್ಯ ಕಾರ್ಯದರ್ಶಿಯ ಉನ್ನತ ಜವಾಬ್ದಾರಿಯನ್ನು ಹಸ್ತಾಂತರಿಸಲಾಗಿದೆ.

ರೈತ ಸಂಘವು ತನ್ನದೇ ಆದ ಕೆಲವು ಸೈದ್ಧಾಂತಿಕ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದು, ಸಂವಿಧಾನಬದ್ಧ ನೀತಿ–ನಿಯಮಗಳಿಗೆ ಬದ್ಧವಾಗಿ ಶಿಸ್ತಿನಿಂದ ಕೆಲಸ ಮಾಡುವಂತೆ ನೂತನ ಕಾರ್ಯದರ್ಶಿಗೆ ಆದೇಶಿಸಲಾಗಿದೆ. ಯಾವುದೇ ಜಾತಿ, ಮತ ಹಾಗೂ ರಾಜಕೀಯ ಪಕ್ಷಗಳ ಸೋಂಕಿಲ್ಲದೇ, ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಸಂಘಟನೆಯನ್ನು ರಾಜ್ಯಾದ್ಯಂತ ಮತ್ತಷ್ಟು ಬಲಿಷ್ಠಗೊಳಿಸಲು ಶ್ರಮಿಸುವಂತೆ ಸಂಘದ ಹಿರಿಯರು ಕರೆ ನೀಡಿದ್ದಾರೆ.

ಈ ನೇಮಕಾತಿ ಆದೇಶಕ್ಕೆ ಸಂಘದ ಗೌರವಾಧ್ಯಕ್ಷರಾದ ಮಂಜುನಾಥ ಗೌಡ್ರು, ರಾಜ್ಯಾಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್, ಉಪಾಧ್ಯಕ್ಷರಾದ ಮಹಾದೇವಿ ಎಸ್. ಬೇನಾಳಮಠ, ಭೀಮಸಿ ಗದಾಡಿ, ಚಂದ್ರಶೇಖರ್ ಜಮಖಂಡಿ, ಹನುಮಂತಪ್ಪ ಹೊಳಿಯಾಚೆ ಹಾಗೂ ಪ್ರಧಾನ ಕಾರ್ಯದರ್ಶಿ ವೀರಭದ್ರಸ್ವಾಮಿ ಅವರು ಜಂಟಿಯಾಗಿ ಸಹಿ ಹಾಕಿ, ನೂತನ ಪದಾಧಿಕಾರಿಗೆ ಶುಭ ಹಾರೈಸಿ ಆದೇಶ ನೀಡಿದ್ದಾರೆ.

# ಮರಮ್ ಕ್ವಾರಿಯಲ್ಲಿ ಕಾಲು ಜಾರಿ ಬಿದ್ದು ಇಬ್ಬರು ಬಾಲಕಿ, ಮಹಿಳೆ ಸಾವು



**ವಡಗೇರಾ:** ಸಮೀಪದ ಬಸವನಗರ ಗ್ರಾಮದ ಮರಮ್ ಕ್ವಾರಿಯ



ತೆಗ್ಗಿನಲ್ಲಿ ಕಾಲು ಜಾರಿ ಬಿದ್ದು ನೀರಿನಲ್ಲಿ ಮುಳುಗಿ ಇಬ್ಬರು ಬಾಲಕಿಯರು ಸೇರಿ ಒಬ್ಬ ಮಹಿಳೆ ಮೃತಪಟ್ಟಿದ್ದಾರೆ.ಈ ಘಟನೆಯು ಭಾನುವಾರ ಮಧ್ಯಾಹ್ನ 4 ಗಂಟೆ ಸುಮಾರಿಗೆ ತಾಲೂಕಿನ ಬಸವನಗರ ಗ್ರಾಮದ ಮರಮ್ ಕ್ವಾರಿಯ ಬಳಿ ಈ ಘಟನೆ ಜರಗಿದೆ ಗ್ರಾಮದಲ್ಲಿ ಸಮರ್ಪಕವಾಗಿ ನಳದ ನೀರು ಬರದ ಕಾರಣ ಮಧ್ಯಾಹ್ನ ಸುಮಾರಿಗೆ ಬಟ್ಟೆ ತೊಳೆಯಲೆಂದು ಗ್ರಾಮದ ಸಮೀಪ ಇರುವ ಮರಮ್ ಕ್ವಾರಿ ಹತ್ತಿರ ಹೋಗಿದ್ದು ಸುಜಾತ ಮತ್ತು ಶಿವಲೀಲಾ ಕಾಲು ಜಾರಿ ತಗ್ಗಿನಲ್ಲಿ ಬಿದ್ದಿದ್ದು ಆ ಬಾಲಕಿಯರನ್ನು ರಕ್ಷಿಸಲೆಂದು ಗುಂಡಮ್ಮ ಎಂಬ ಮಹಿಳೆ ನೀರಿಗೆ ಹಾರಿ ಪ್ರಾಣ ರಕ್ಷಿಸಲು ತುಂಬಾ ಪ್ರಯತ್ನ ಪಟ್ಟಿದ್ದಾಳೆ ಆಗದೆ ಕೊನೆಗೆ ಮೂರು ಜನ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.ಮೃತರು ಗುಂಡಮ್ಮ(35) (9) ಸುಜಾತ (10) ಶಿವಕಾಂತಮ್ಮ ಶಾಲೆ ಕಲಿಯುತ್ತಿದ್ದು ಇಂದು ಭಾನುವಾರ ಇರುವ ಕಾರಣ ಬಟ್ಟೆ ತೊಳೆಯಲೆಂದು ಗ್ರಾಮದ ಸಮೀಪ ಇರುವ ಮರಮ್ ಕ್ವಾರಿಗೆ ತೆರಳಿ ಸಾವನ್ನಪ್ಪಿದ್ದು ಇಡೀ ಗ್ರಾಮವೇ ಶೋಕದಲ್ಲಿ ಮುಳುಗಿದೆ ಈ ಕುರಿತು ವಡಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಸಿಸಿಟಿವಿ ಹಾಗೂ ಸ್ವಚ್ಛತೆ ಪರಿಶೀಲನೆ



**ಗಂಗಾವತಿ:** ನಗರದ ಪ್ರಮುಖ ಬಸ್ ನಿಲ್ದಾಣಕ್ಕೆ ಇಂದು ಗಂಗಾವತಿ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಭೇಟಿ ನೀಡಿ, ಅಲ್ಲಿನ ಸಿಸಿಟಿವಿ ಕ್ಯಾಮೆರಾ ವ್ಯವಸ್ಥೆ ಹಾಗೂ ಸ್ವಚ್ಛತಾ ನಿರ್ವಹಣೆಯ ಕುರಿತು ಸ್ಥಳ ಪರಿಶೀಲನೆ ನಡೆಸಿದರು.

ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸುರಕ್ಷತೆ ಮತ್ತು ಸಾರ್ವಜನಿಕ ಸೌಲಭ್ಯಗಳ ಬಗ್ಗೆ ವಿಶೇಷಗಮನ ಹರಿಸಿದ ಡಿವೈಎಸ್ಪಿ ಜೆ.ಎಸ್.ನ್ಯಾಮಗೌಡರ್ ಹಾಗೂ ಗಂಗಾವತಿ ನಗರ ಪೊಲೀಸ್ ಠಾಣೆ ಪಿಐ ಪ್ರಕಾಶ್ ಯಾತನೂರು ಅವರು, ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ, ಅಗತ್ಯವಿರುವ ಕಡೆಗಳಲ್ಲಿ ಹೆಚ್ಚುವರಿ ಕ್ಯಾಮೆರಾಗಳನ್ನು ಅಳವಡಿಸುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು. ಸಾರ್ವಜನಿಕ ಸ್ಥಳಗಳಲ್ಲಿ ಸಿಸಿಟಿವಿ ವ್ಯವಸ್ಥೆ ಅಪರಾಧ ತಡೆ ಹಾಗೂ ಭದ್ರತೆ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ತಿಳಿಸಿದರು. ರಾಜ್ಯದಿಂದ ವಿವಿಧ ಭಾಗಗಳಲ್ಲಿ ಬಸ್ ನಿಲ್ದಾಣಗಳ ಭದ್ರತೆ ಮತ್ತು ಮೇಲ್ವಿಚಾರಣೆಗಾಗಿ ಸಿಸಿಟಿವಿ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಇದೇ ವೇಳೆ ಬಸ್ ನಿಲ್ದಾಣದ ಸ್ವಚ್ಛತಾ ವ್ಯವಸ್ಥೆಯನ್ನು ವೀಕ್ಷಿಸಿದ ಅವರು, ಪ್ರಯಾಣಿಕರಿಗೆ ಸ್ವಚ್ಛತೆ ಮತ್ತು ಆರೋಗ್ಯಕರ ವಾತಾವರಣ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಸ ವಿಲೇವಾರಿ, ಶೌಚಾಲಯಗಳ ನಿರ್ವಹಣೆ ಹಾಗೂ ನಿಲ್ದಾಣದ ಸುತ್ತಮುತ್ತಲಿನ ಸ್ವಚ್ಛತೆ ಬಗ್ಗೆ ಬೈಕ್ ಪಾರ್ಕಿಂಗ್ ನಿಯಮಿತವಾಗಿ ಗಮನಹರಿಸುವಂತೆ ತಿಳಿಸಿದರು. ಸಾರ್ವಜನಿಕ ಬಸ್ ನಿಲ್ದಾಣಗಳಲ್ಲಿ ಸ್ವಚ್ಛತೆ ಮತ್ತು ಮೂಲಭೂತ ಸೌಲಭ್ಯಗಳ ನಿರ್ವಹಣೆ ಪ್ರಯಾಣಿಕರ ಅನುಕೂಲಕ್ಕಾಗಿ ಅತ್ಯಗತ್ಯವಾಗಿದೆ ಎಂದು ಹೇಳಿದರು,

ಈ ಸಂದರ್ಭದಲ್ಲಿ ನಗರ ಪೊಲೀಸ್ ಠಾಣೆ ಪಿಐ ಪ್ರಕಾಶ ಯಾತನೂರು,ಡಿಪೋ ಮ್ಯಾನೇಜರ್ ಪ್ರವೀಣ್ ಯಾರನಾಳ, ಪೊಲೀಸ್ ಸಿಬ್ಬಂದಿ ಮರಿಶಾಂತಗೌಡ,ಮೈಲಾರಪ್ಪ ಹಾಗೂ ಸಂಬಂಧಿತ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ತಡೆಯುವಂತೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ದಿನ ಬಳಕೆ ವಸ್ತುಗಳ ಬೆಲೆ ಏರಿಕೆಯನ್ನು ತಕ್ಷಣವೇ ನಿಲ್ಲಿಸಿ ಬಡ ಜನರು ಕೊಳ್ಳಲು ಶಕ್ತರಿರುವ ಬೆಲೆಯಲ್ಲಿ ವಸ್ತುಗಳು ವಿತರಣೆ ಮಾಡಬೇಕು ಎಂದು ಪ್ರಜಾಪ್ರಭುತ್ವ ಸಂರಕ್ಷಣಾ ಸಮಿತಿಯಿಂದ ಮನವಿ ಸಲ್ಲಿಸಲಾಗಿದೆ.

ಭಾಲ್ಕಿಯ ತಹಸೀಲ್ದಾರ್ ಅವರ ಮೂಲಕ ರಾಷ್ಟ್ರಪತಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಕೇಂದ್ರ ಸರಕಾರ ದಿನದಿಂದ ದಿನಕ್ಕೆ ಬೆಲೆ ಏರಿಕೆ ಮಾಡಿ ಬಡವರ ಹೊಟ್ಟೆ ಮೇಲೆ ಹೊಡೆಯುವಂತಹ ಕೆಲಸ ಮಾಡುತ್ತಿದೆ. ಐದು ರಾಜ್ಯಗಳ ಚುನಾವಣೆಗಳಲ್ಲಿ ಭರಪೂರ ಭರವಸೆಗಳನ್ನು ನೀಡಿ, ಚುನಾವಣೆಗಳು ಮುಗಿಯುತ್ತಿದ್ದಂತೆಯೇ ಕೇಂದ್ರ ಸರಕಾರ ಬೆಲೆ ಏರಿಕೆ ಮಾಡಿದೆ ಎಂದು ಆರೋಪಿಸಲಾಗಿದೆ.

ಪೆಟ್ರೋಲ್, ಡೀಸೆಲ್, ಗ್ಯಾಸ್ ಬಳಕೆದಾರರಿಗೆ ಸಂಬಂಧಪಟ್ಟ ವಿಚಾರ ಮಾತ್ರವಲ್ಲದೇ ಇದು ಸಮಾಜದ ಜನಜೀವನದ ಬಹುತೇಕ ವಲಯಗಳ ಮೇಲೆ ಪರಿಣಾಮ ಬೀರುತ್ತದೆ. ಸರಕುಗಳ ಬೆಲೆ ದುಬಾರಿಯಾಗಿ ಜನರ ಕೊಳ್ಳುವ ಶಕ್ತಿ ಕ್ಷೀಣಗೊಂಡಿದೆ. ಈಗಾಗಲೇ ಸಂಕಷ್ಟದಲ್ಲಿರುವ ಬಡವರು ಮತ್ತು ಮಧ್ಯಮ ವರ್ಗದವರನ್ನು ಇದು ಮತ್ತಷ್ಟು ಬಿಕ್ಕಟ್ಟಿಗೆ ತಳ್ಳಿದೆ. ಮುಂಗಾರು ಹಂಗಾಮು ಆರಂಭವಾಗಿದ್ದು, ರೈತರಿಗೆ ರಸಗೊಬ್ಬರ ಕೊರತೆಯಾಗಿದೆ. ಕೃಷಿ ಚಟುವಟಿಕೆ



ಕೈಗೊಳ್ಳಲು ರೈತರು ಪೆಟ್ರೋಲ್ ಬಂಕ್‌ಗಳ ಮುಂದೆ ಕ್ಯಾನ್ ಹಿಡಿದು ನಿಲ್ಲುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಲಾಗಿದೆ.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ದೇಶದಲ್ಲಿ ಹಾಹಾಕಾರ ಸೃಷ್ಟಿಯಾಗಿದ್ದು, ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಇದರಿಂದ ದುಡಿಯುವ ಜನರು, ರೈತರು, ಕಾರ್ಮಿಕರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಬಡವರು ಮತ್ತು ಮಧ್ಯಮ ವರ್ಗದವರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮೇ.15 ರಿಂದ ಮೇ.25ರ ವರೆಗೆ ಕೇವಲ 11 ದಿನಗಳಲ್ಲಿ ಪೆಟ್ರೋಲ್ 7.50 ರೂ. ಡಿಸೇಲ್ 7.50ರೂ. ಹಾಗೂ ವಾಣಿಜ್ಯ ಸಿಲಿಂಡರ್ ಗ್ಯಾಸ್ ಬೆಲೆಯನ್ನು ಸಾವಿರಾರು ರೂ. ಬೆಲೆ ಹೆಚ್ಚು ಮಾಡಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 95 ಡಾಲರ್‌ಗೆ ಇಳಿದರೂ ಭಾರತದಲ್ಲಿ ಬೆಲೆ ಏರಿಕೆಯನ್ನು ಮುಂದುವರಿಸಲಾಗಿದೆ ಎಂದು ದೂರಲಾಗಿದೆ. ಆದ್ದರಿಂದ ಇಂತಹ ಸರಕಾರಕ್ಕೆ ಸರಿಯಾದ ಮಾರ್ಗದರ್ಶನ ನೀಡಿ ನಮ್ಮ ಬಡಜನರಿಗೆ ನ್ಯಾಯ ಒದಗಿಸಿ ಕೊಡಬೇಕು ಎಂದು ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಪ್ರಜಾಪ್ರಭತ್ವ ಸಂರಕ್ಷಣಾ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಗಗನ್ ಫುಲೆ, ಪ್ರಧಾನ ಕಾರ್ಯದರ್ಶಿ ಕಲ್ಲಪ್ಪ ಮರೂರ್, ಲೋಕೇಶ್ ಕಾಂಬಳೆ ಹಾಗೂ ರಾಜೇಂದ್ರ ಕರವಂದೆ, ಶ್ರೀಮಂತ್ ಬೋಸ್ಲೆ ಜೈವರ್ಧನ್ ಹಾಗೂ ಶ್ರೀನಿವಾಸ್ ಸೇರಿದಂತೆ ಇತರರು ಇದ್ದರು.

# ದರ ಏರಿಕೆ: ಕೇಂದ್ರದ ವಿರುದ್ಧ ತೀವ್ರ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಗೃಹ ಬಳಕೆ ಗ್ಯಾಸ್ ಸಿಲಿಂಡರ್ ದರ ಏರಿಕೆ ಕುರಿತು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಯತೀಂದ್ರ ಸಿದ್ದರಾಮಯ್ಯ.



ವಿಜಯಪುರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು ಬಿಜೆಪಿಯದ್ದು ಸದಾ ಜನವಿರೋಧಿ ನೀತಿ ಎಂದಿದ್ದಾರೆ.

ಬಿಜೆಪಿಯವರು ಯಾವಾಗಲೂ ಜನವಿರೋಧಿ ನೀತಿಯನ್ನೇ ಅನುಸರಿಸಿಕೊಂಡು ಬಂದಿದ್ದಾರೆ. ಹಿಂದೆ ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾಗಿದ್ದಾಗಲೂ ದೇಶದ ಜನರಿಗೆ ಪೆಟ್ರೋಲ್, ಡೀಸೆಲ್ ದರವನ್ನು ಕಡಿಮೆ ಮಾಡದೆ ಲೂಟಿ ಹೊಡೆದರು. ಈಗ ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಜಾಸ್ತಿಯಾಗಿದೆ ಎಂಬ ನೆಪವೊಡ್ಡಿ ಮತ್ತೆ ಬೆಲೆ ಏರಿಕೆ ಮಾಡಿದ್ದಾರೆ. ಅಂದು ಜಾಗತಿಕವಾಗಿ ಬೆಲೆ ಕಡಿಮೆಯಿದ್ದಾಗ ಅದರ ಲಾಭವನ್ನು ಜನರಿಗೆ ನೀಡಿದ್ದರೆ, ಇಂದು ಜನರಿಗೆ ಇಷ್ಟೊಂದು ಹೊರೆಯಾಗುತ್ತಿರಲಿಲ್ಲ. ಎಂದು ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ,

ಯುಪಿಎ ಸರ್ಕಾರದ ಅವಧಿಯನ್ನು ಸ್ಮರಿಸಿದ ಅವರು, ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಜನಸಾಮಾನ್ಯರಿಗೆ ಹೊರೆಯಾಗಬಾರದು ಎಂಬ ಒಂದೇ ಕಾರಣಕ್ಕೆ ತೈಲ ಬಾಂಡ್‌ಗಳನ್ನು ಖರೀದಿ ಮಾಡಿ ಬೆಲೆ ನಿಯಂತ್ರಣದಲ್ಲಿದ್ದೆವು. ಆದರೆ ಪ್ರಧಾನಿ ಮೋದಿ ನೇತೃತ್ವದ ಸರ್ಕಾರಕ್ಕೆ ಜನರ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲ. ಜನ ಹೇಗೆ ಹಾಳಾಗಿ ಹೋದರೂ ಪರವಾಗಿಲ್ಲ ಎಂಬಂತೆ ಬೆಲೆಗಳನ್ನು ಹೆಚ್ಚಿಸುತ್ತಿದ್ದಾರೆ. ಇದರಿಂದಾಗಿ ದೇಶದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರಲಿದ್ದು, ಜನಸಾಮಾನ್ಯರ ಬದುಕು ದುಸ್ತರವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

# ಕಾಗಿತಂ ಪಡವಲು ಚಿತ್ರದ ಹಾಡು ಬಿಡುಗಡೆ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ಜಿಲ್ಲೆಯ ಚಿಂತಾಮಣಿ ಮೂಲದ ದಂಪತಿ ಗಾಯತ್ರಿ ಆಂಜಿನಪ್ಪ ಅವರು ತೆಲುಗು ಚಲನಚಿತ್ರರಂಗಕ್ಕೆ ಕಾಲಿಡುವ ಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಅವರು ಹಾಗೂ ಕೀರ್ತನ ನರೇಶ್ ಹಾಗೂ ಪ್ರಸಾದ್ ರೆಡ್ಡಿ ನಿರ್ಮಾಣದ, ಹಾಗೂ ತುಕಾರಾಮ್ ನಿರ್ದೇಶನದ 'ಕಾಗಿತಂ ಪಡವಲು' ಚಿತ್ರದ ವಿಡಿಯೋ ಹಾಡು ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ.ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಚಿತ್ರದ ತಂಡ ಮಾಹಿತಿ ನೀಡಿತು.

ನಿರ್ಮಾಪಕ ಗಾಯತ್ರಿ ಆಂಜಿನಪ್ಪ ಮಾತನಾಡಿ ನವನಾರಾಯಣ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಗಾಯತ್ರಿ ಆಂಜಿನಪ್ಪ,ಕೀರ್ತನ ನರೇಶ್ ಹಾಗೂ ಪ್ರಸಾದ್ ರೆಡ್ಡಿ ನಿರ್ಮಿಸಿರುವ ಈ ಚಿತ್ರವು ಪ್ರೀತಿ,ಕುಟುಂಬ ಮತ್ತು ಮಾನವೀಯ ಮೌಲ್ಯಗಳನ್ನು ಒಳಗೊಂಡಿರುವ ಫ್ಯಾಮಿಲಿ ಎಂಟರ್‌ಟೈನರ್ ಆಗಿದೆ ಎಂದು ತಿಳಿಸಿದರು.

ಚಿತ್ರದಲ್ಲಿ ವರದನ್ ನಾಯಕನಾಗಿ ಹಾಗೂ



ಕೃಷ್ಣಪ್ರಿಯಾ ನಾಯಕಿಯಾಗಿ ಅಭಿನಯಿಸಿದ್ದು,ಕುಟುಂಬ ಸಮೇತ ವೀಕ್ಷಿಸಬಹುದಾದ ಉತ್ತಮ ಕಥಾಹಂದರವನ್ನು ಹೊಂದಿದೆ ಚಿತ್ರದ ವಿಡಿಯೋ ಹಾಡು ಇಂದು ಬಿಡುಗಡೆಯಾಗಿದ್ದು, ಯೂಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ.

ಸಹ ನಿರ್ದೇಶಕ ಸದಾನಂದ ಮಾತನಾಡಿ,ಸಿನಿಮಾ ನಿರ್ಮಾಣವು ಕೇವಲ ದೊಡ್ಡವರಿಗಷ್ಟೇ ಸೀಮಿತವಲ್ಲ. ಸಾಮಾನ್ಯ ಜನರೂ ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಸಿನಿಮಾ ನಿರ್ಮಿಸಬಹುದು ಎಂಬುದನ್ನು ಗಾಯತ್ರಿ ಆಂಜಿನಪ್ಪ ದಂಪತಿ ತೋರಿಸಿಕೊಟ್ಟಿದ್ದಾರೆ. ಗ್ರಾಮೀಣ ಸೊಗಡು, ಪ್ರೇಮಕಥೆ ಹಾಗೂ ಕುಟುಂಬದ ಭಾವನೆಗಳನ್ನು ಒಳಗೊಂಡ ಈ ಚಿತ್ರ ಅತ್ಯುತ್ತಮವಾಗಿ ಮೂಡಿಬಂದಿದೆ.ಸಾಮಾನ್ಯರ ಕನಸಿನ ಈ ಸಿನಿಮಾವನ್ನು ಪ್ರೇಕ್ಷಕರು ಬೆಂಬಲಿಸಬೇಕು ಎಂದು ಹೇಳಿದರು.

# ಕ್ಷೇತ್ರದ ಪ್ರಾಮಾಣಿಕತೆ, ಪ್ರಬುದ್ಧತೆಯುಳ್ಳ ವ್ಯಕ್ತಿ ಬಿ. ಜಗದೀಶ್ ಕುಮಾರ್

• ಜಿ ನಂದೀಶ್ ಪೀಣ್ಯ ದಾಸರಹಳ್ಳಿ

ಕ್ಷೇತ್ರದ ಸರಳ ಸಜ್ಜನಿಕೆ ವ್ಯಕ್ತಿತ್ವದ ಹೊಂದಿದ, ನಿಷ್ಠೆ ಪ್ರಾಮಾಣಿಕತೆ ಪ್ರಬುದ್ಧತೆಯುಳ ವ್ಯಕ್ತಿ ಶಿಸ್ತಿನ ಸಿಪಾಯಿ ಯಾರಾದರೂ ಇದ್ದರೆ ಅವರೆ ರಾಜಗೋಪಾಲನಗರ ವಾರ್ಡಿನ ಕಾಂಗ್ರೆಸ್ ಪ್ರಭಾವಿ ಯುವ ನಾಯಕ ಹಾಗೂ ಜಿಬಿಎ ಪ್ರಬಲ ಆಕಾಂಕ್ಷಿ ಅಭ್ಯರ್ಥಿ ಬಿ. ಜಗದೀಶ್ ಕುಮಾರ್ ಎಂದರೆ ತಪ್ಪಾಗಲಾರದು ಎಂದು ಜನ ಪ್ರಿಯ ಸಮಾಜ ಸೇವಕ ಚಿಂತಕರು ವಾಗ್ಮಿಗಳು ಬುದ್ದಿಜೀವಿಗಳು ಮತ್ತು ರಾಷ್ಟ್ರೀಯ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಡಾ. ಸಂಗನ ಬಸಪ್ಪ ಬಿರಾದಾರ್ ಹೇಳಿದರು.

ಅವರು ರಾಜಗೋಪಾಲನಗರದ ಜೆಡಿಎನ್ ಕಾಂಪ್ಲೆಕ್ಸ್ ಎದುರುಗಡೆ ಆಯೋಜಿಸಿದ್ದ ಬಿ ಜಗದೀಶ್ ಕುಮಾರ್ ಅವರ ಹುಟ್ಟುಹಬ್ಬದ ನಿಮಿತ್ತ ಜಗದೀಶ್ ಕುಮಾರ್ ಅವರಿಗೆ ಶಾಲು ಹೊದಿಸಿ ಮೈಸೂರು ಪೇಟಾ ಧರಿಸಿ ಫಲಪುಷ್ಪದೊಂದಿಗೆ ಗೌರವಿಸಿ ಸಿಹಿ



ತಿನ್ನಿಸಿ ಶುಭ ಕೋರಿ ಜಗದೀಶ್ ಕುಮಾರ್ ಅವರು ಈ ಭಾಗದ ಸುಸಂಸ್ಕೃತ ವ್ಯಕ್ತಿ ಇವರು ಮುಂದಿನ ದಿನಗಳಲ್ಲಿ ಜನರ ಸೇವೆ ಮಾಡಲು ರಾಜಕೀಯ ಶಕ್ತಿ ಕರುಣಿಸಲಿ ಎಂದು ಡಾ. ಬಿರಾದಾರ್ ಶುಭ ಕೋರಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡ ಮಣಿ, ಜೆಡಿಎನ್ ಗ್ರೂಪ್ ವ್ಯವಸ್ಥಾಪಕ ಭೈರವ, ಕಿಶೋರ್, ಮೆಡಿಕಲ್ ಮಂಜುನಾಥ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಮಹಿಳೆಯರು ಕಾರ್ಯಕರ್ತರು ಮುಂತಾದವರು ಜಗದೀಶ್ ಕುಮಾರ್ ರವರಿಗೆ ಹೂವು ಗುಚ್ಛು ನೀಡಿ ಸಿಹಿ ತಿನ್ನಿಸಿ ಶುಭ ಹಾರೈಸಿದರು. ಬೆಸ್ಟ್ ಆಲ್ರೌಂಡರ್ ರಿಪೋರ್ಟರ್ ಪ್ರಶಸ್ತಿ ಪುರಸ್ಕೃತರಾದ ಅಯ್ಯಣ್ಣ ಮಾಸ್ಟರ್, ಸಂಜೆ ಸಮಯ ಪತ್ರಿಕೆಯ ವರದಿಗಾರ ಕೆಂಪರಾಜು, ಪಂಚಮುಖಿ ಪತ್ರಿಕೆ ಸಂಪಾದಕ ಡಾ.ಕುಮಾರಯ್ಯ, ವಿಶ್ವವಾರದಿ ಪತ್ರಿಕೆಯ ವರದಿಗಾರ ಗೋಪಿ, ತೇಜಸ್ವಿನಿ ಪತ್ರಿಕೆಯ ಸಂಪಾದಕ ಹಾಗೂ ಡೈಲಿ ನ್ಯೂಸ್ ವರದಿಗಾರ ಜಿ.ನಂದೀಶ್ ಇವರೆಲ್ಲರು ಡಾ ಸಂಗನ ಬಸಪ್ಪ ಬಿರಾದಾರ್ ಅವರಿಗೆ ಸಾಥ್ ನೀಡಿದರು.

# ಕಡುಬಿಸಿಲ ನಾಡನು ಮರೆತರೆ ಡಿಕೆಶಿವಕುಮಾರ್..?











ಕರ್ನಾಟಕದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಮೊದಲ ಸಂಪುಟ ರಚನೆಯಾದ ಬಳಿಕ, ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಶಾಸಕರಿಗೆ ಸಚಿವ ಸ್ಥಾನ ಸಿಗದೇ ನಿರಾಸೆ ಉಂಟಾಗಿದೆ. ಮೊದಲ ಹಂತದಲ್ಲಿ ಒಟ್ಟು 13 ಮಂದಿಗೆ ಸಚಿವ ಸ್ಥಾನ ನೀಡಲಾಗಿದ್ದು, ಉತ್ತರ ಕರ್ನಾಟಕಕ್ಕೆ ಮಹತ್ವದ ಪ್ರಾತಿನಿಧ್ಯ ದೊರೆತಿದ್ದರೂ ಕಾಂಗ್ರೆಸ್ ಭದ್ರಕೋಟೆ ಆದ ಬಳ್ಳಾರಿ ಜಿಲ್ಲೆ ಕೈ ತಪ್ಪಿದೆ.

ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ವಲಯದಲ್ಲಿ ಈಗ ಮುಖ್ಯ ಚರ್ಚೆ ಏನೆಂದರೆ– "ಎರಡನೇ ಹಂತದ ಸಂಪುಟ ವಿಸ್ತರಣೆ ಯಾವಾಗ? ಮತ್ತು ಯಾರಿಗೆ ಮಂತ್ರಿ ಭಾಗ್ಯ?" ಎಂಬುದು.

**ಎರಡನೇ ಸಂಪುಟ ವಿಸ್ತರಣೆ ಯಾವಾಗ?**

ರಾಜಕೀಯ ಮೂಲಗಳ ಪ್ರಕಾರ, ಮೊದಲ ಸಂಪುಟದಲ್ಲಿ ಪ್ರಾದೇಶಿಕ ಮತ್ತು ಜಾತಿ ಸಮತೋಲನ ಕಾಯ್ದುಕೊಳ್ಳಲು ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕೆಯಿಂದ ನಡೆದುಕೊಂಡಿದೆ. ಕೆಲವು ಅಸಮಾಧಾನಗಳು ವ್ಯಕ್ತವಾಗಿರುವುದರಿಂದ, ಎರಡನೇ ಹಂತದ ಸಂಪುಟ ವಿಸ್ತರಣೆ ಮುಂದಿನ ಕೆಲವು ವಾರಗಳಲ್ಲಿ ಅಥವಾ ವಿಧಾನಮಂಡಲ ಅಧಿವೇಶನದ ಬಳಿಕ ನಡೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಖಾತೆ ಹಂಚಿಕೆ ಕುರಿತ ಅಸಮಾಧಾನ ಈಗಾಗಲೇ ಪಕ್ಷದೊಳಗೆ ಗೋಚರಿಸಿದೆ. ಹಿರಿಯ ನಾಯಕ ರಾಮಲಿಂಗಾರೆಡ್ಡಿ ಅವರು ಖಾತೆ ವಿಚಾರದಲ್ಲಿ ಅಸಮಾಧಾನ ವ್ಯಕ್ತಪಡಿಸಿರುವುದು, ಇನ್ನೂ ಸಚಿವ ಸ್ಥಾನಗಳ ಸಮತೋಲನ ಪ್ರಕ್ರಿಯೆ ಮುಗಿದಿಲ್ಲ ಎಂಬ ಸಂದೇಶ ನೀಡಿದೆ.

**ಬಳ್ಳಾರಿಯಿಂದ ಸಚಿವ ಸ್ಥಾನಕ್ಕೆ ಪ್ರಮುಖ ಆಕಾಂಕ್ಷಿಗಳು ಯಾರು?:** ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಶಾಸಕರ ಪೈಕಿ ಕೆಲವು ಹೆಸರುಗಳು ಈಗ ಗಟ್ಟಿಯಾಗಿ ಕೇಳಿಬರುತ್ತಿವೆ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಯುವ ನಾಯಕತ್ವ ಮತ್ತು ಸಂಘಟನೆಗೆ ಹೊಂದಿರುವ ಸಂಪರ್ಕದ ಕಾರಣ ಇವರ ಹೆಸರು ಪ್ರಮುಖವಾಗಿ ಚರ್ಚೆಯಲ್ಲಿದೆ.

**ಶಾಸಕ ನಾರ ಭರತ್ ರೆಡ್ಡಿ:** ಜಿಲ್ಲೆಯ ರಾಜಕೀಯ ಸಮೀಕರಣದಲ್ಲಿ ಪ್ರಭಾವಿ ಮುಖ. ಯುವ ಮತದಾರರ ನಡುವೆ ಹಿಡಿತವಿದೆ ಎನ್ನಲಾಗುತ್ತಿದೆ.

**ಕಂಪ್ಲಿ ಕ್ಷೇತ್ರದ ಶಾಸಕ ಜೆ.ಎನ್. ಗಣೇಶ್...** ಕ್ಷೇತ್ರದಲ್ಲಿ ಪ್ರಭಾವಿ ನಾಯಕ. ಹಿಂದುಳಿದ ವರ್ಗದ ಪ್ರತಿನಿಧಿತ್ವದ ಸಮೀಕರಣದಲ್ಲಿ ಅವಕಾಶ ಸಿಗಬಹುದು ಎಂಬ ಮಾತಿದೆ. ಶಾಸಕ ಎನ್.ಟಿ. ಶ್ರೀನಿವಾಸ್ ಕೂಡ್ಲಿಗಿ ಕ್ಷೇತ್ರದ ಸಂಘಟನೆ ಮತ್ತು ಹಿರಿಯ ನಾಯಕರೊಂದಿಗೆ ಹೊಂದಾಣಿಕೆ ಹೊಂದಿರುವ ಕಾರಣ ಇವರ ಹೆಸರೂ ಚರ್ಚೆಯಲ್ಲಿದೆ.

**ಯಾರಿಗೆ ಹೆಚ್ಚು ಅವಕಾಶ?**

ಪ್ರಸ್ತುತ ಕಾಂಗ್ರೆಸ್ ಪಕ್ಷದ ಒಳಗಿನ ಲೆಕ್ಕಾಚಾರ ನೋಡಿದರೆ, ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಭಾಗಕ್ಕೆ ಇನ್ನಷ್ಟು ರಾಜಕೀಯ ಸಮತೋಲನ ಕೊಡಬೇಕಾದ ಒತ್ತಡ ಇದೆ. ಬಳ್ಳಾರಿಯಿಂದ ಒಬ್ಬರಿಗೆ ಅವಕಾಶ ನೀಡುವ ಸಾಧ್ಯತೆಯನ್ನು ಪಕ್ಷ ಸಂಪೂರ್ಣವಾಗಿ ತಳ್ಳಿಹಾಕಿಲ್ಲ.

**ರಾಜಕೀಯ ವಿಶ್ಲೇಷಕರ ಅಭಿಪ್ರಾಯದಂತೆ:** ಯುವ ಮುಖಕ್ಕೆ ಆದ್ಯತೆ ನೀಡಿದರೆ ಶಾಸಕ ನಾರಾ ಭರತ್ ರೆಡ್ಡಿ ಹೆಸರು ಮುಂಚೂಣಿಯಲ್ಲಿ ಇರಬಹುದು. ಜಾತಿ ಮತ್ತು ಪ್ರಾದೇಶಿಕ ಸಮೀಕರಣ ನೋಡಿದರೆ ಜೆಎನ್ ಗಣೇಶ್ ಅವರಿಗೆ ಅವಕಾಶ ಸಿಗಬಹುದು. ಸಂಘಟನೆ ನಿಷ್ಠೆ ಪರಿಗಣಿಸಿದರೆ ಎನ್.ಟಿ.ಶ್ರೀನಿವಾಸ್ ಕೂಡ್ಲಿಗಿ ಶಾಸಕ ಹೆಸರು ಚರ್ಚೆಗೆ ಬರಬಹುದು.

**ಕಾಂಗ್ರೆಸ್ ಒಳಗಿನ ರಾಜಕೀಯ ಏನು ಹೇಳುತ್ತಿದೆ?**

ಸದ್ಯ ಕಾಂಗ್ರೆಸ್‌ನಲ್ಲಿ ಸಚಿವ ಸ್ಥಾನಕ್ಕಾಗಿ ಭಾರೀ ಲಾಬಿ ನಡೆಯುತ್ತಿದೆ. ಈಗಾಗಲೇ ನೂತನ ಕೆಪಿಸಿಸಿ ಅಧ್ಯಕ್ಷರಾದ ಬಿಕೆ ಹರಿಪ್ರಸಾದ್ ಅವರ ಇತ್ತೀಚಿನ ಹೇಳಿಕೆಗಳು ಹಾಗೂ ಪಕ್ಷದ ಒಳಗಿನ ಅಸಮಾಧಾನ, ಮುಂದಿನ ಸಂಪುಟ ವಿಸ್ತರಣೆಯಲ್ಲಿ ದೊಡ್ಡ ರಾಜಕೀಯ ಸಮತೋಲನ ಸಾಧಿಸಲು ಹೈಕಮಾಂಡ್ ಪ್ರಯತ್ನಿಸಲಿದೆ ಎಂಬ ಸೂಚನೆ ನೀಡಿವೆ. ಎಂದು ಕೇಳಿ ಬರುತ್ತದೆ.

ಒಟ್ಟಿನಲ್ಲಿ, ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಶಾಸಕರಿಗೆ ಎರಡನೇ ಸಂಪುಟದಲ್ಲಿ ಅವಕಾಶ ಸಿಗುವ ಸಾಧ್ಯತೆ ರಾಜಕೀಯವಾಗಿ ಬಲವಾಗಿದೆ. ಆದರೆ ಅಂತಿಮ ನಿರ್ಧಾರ ಕಾಂಗ್ರೆಸ್ ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಸಮತೋಲನ ರಾಜ–ಕಾರಣದ ಮೇಲೆ ಅವಲಂಬಿತವಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)